# ಪ್ರಸಾದ


ದ್ವೈಮಾಸಿಕ

ಸಂಪುಟ ೩೬ ಸಂಚಿಕೆ ೨

ಮಾರ್ಚ್–ಏಪ್ರಿಲ್ ೨೦೨೧



ಜೆಎಸ್‌ಎಸ್ ಮಹಾವಿದ್ಯಾಪೀಠ, ಮೈಸೂರು




ಮೈಸೂರು ಜೆಎಸ್‌ಎಸ್ ಮಹಿಳಾ ಕಾಲೇಜಿನ ನವಜ್ಯೋತಿ ಸಭಾಂಗಣದಲ್ಲಿ ಪರಮಪೂಜ್ಯ ಜಗದ್ಗುರುಗಳವರ ದಿವ್ಯಸಾನ್ನಿಧ್ಯದಲ್ಲಿ ಏರ್ಪಡಿಸಲಾಗಿದ್ದ ಜೆಎಸ್‌ಎಸ್ ಮಹಾವಿದ್ಯಾಪೀಠದ ಸುವರ್ಣ ಮಹೋತ್ಸವ ದತ್ತಿ ಉಪನ್ಯಾಸ ಹಾಗೂ ಕೃತಿಗಳ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಡಾ. ಎನ್.ಕೆ. ವೆಂಕಟರಮಣರವರು 'ಸ್ಪೇಸ್ ಟೆಕ್ನಾಲಜಿ ಅಂಡ್ ಸೊಸೈಟಲ್ ಅಪ್ಲಿಕೇಷನ್ಸ್' ಹಾಗೂ 'ಗ್ಲೋಬಲೈಸೇಷನ್: ಚಾಲೆಂಜಸ್ ಅಂಡ್ ದಿ ನೀಡ್ ಫಾರ್ ಕೋ–ಆಪರೇಷನ್' ಕೃತಿಗಳನ್ನು ಲೋಕಾರ್ಪಣೆಗೊಳಿಸಿದರು. ಶ್ರೀ ಎಂ ರವರು ಹಾಗೂ ಡಾ. ಎನ್. ಮುತ್ತುಕುಮಾರ್‌ರವರಿದ್ದಾರೆ (23.2.2021)




ಮೈಸೂರಿನ ಸುತ್ತೂರು ಶ್ರೀಮಠದಲ್ಲಿ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ 105ನೇ ಜಯಂತಿ ಅಂಗವಾಗಿ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಜೆಎಸ್‌ಎಸ್ ಮಹಾವಿದ್ಯಾಪೀಠದ ವಿವಿಧ ಸಂಸ್ಥೆಗಳಲ್ಲಿ ಸೇವೆ ಸಲ್ಲಿಸಿ 2019 ಸೆಪ್ಟಂಬರ್‌ನಿಂದ 2020 ಅಗಸ್ಟ್ ಅಂತ್ಯದವರೆಗೆ ನಿವೃತ್ತರಾದ 195 ಮಂದಿಯನ್ನು ಅಭಿನಂದಿಸಲಾಯಿತು. ಪೂಜ್ಯರೊಂದಿಗೆ ಕೆಲವು ಅಭಿನಂದಿತರಿದ್ದಾರೆ (17.4.2021)

# ಪ್ರಸಾದ

**ಸಂಪುಟ 36 : ಸಂಚಿಕೆ 2** **ಮಾರ್ಚ್–ಏಪ್ರಿಲ್ 2021**

ಸಂಪಾದಕ
**ಪ್ರೊ. ಮಲೆಯೂರು ಗುರುಸ್ವಾಮಿ**

**ಜೆಎಸ್‌ಎಸ್ ಮಹಾವಿದ್ಯಾಪೀಠ**
ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ವೃತ್ತ
ಮೈಸೂರು 570 004



**ಸಂಸ್ಥಾಪಕರು**

ಶ್ರೀಮನ್ಮಹಾರಾಜ ರಾಜಗುರುತಿಲಕ ಪರಮಪೂಜ್ಯ

**ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು**

**ಅಧ್ಯಕ್ಷರು**

**ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರು**


**ಸಂಪಾದಕ ಸಮಿತಿ**

ಡಾ. ಶ್ರೀ ಶರತ್‌ಚಂದ್ರ ಸ್ವಾಮಿಗಳು

ಡಾ. ಸಿ.ಜಿ. ಬೆಟಸೂರಮಠ

ಶ್ರೀ ಎಸ್.ಪಿ. ಮಂಜುನಾಥ್

ಡಾ. ಎನ್.ಎಸ್. ತಾರಾನಾಥ

ಡಾ. ಎನ್.ಎಂ. ತಳವಾರ್

ಡಾ. ಪ್ರೀತಿ ಶುಭಚಂದ್ರ

ಪ್ರೊ. ಮಲೆಯೂರು ಗುರುಸ್ವಾಮಿ (ಸಂಪಾದಕ)


---

ಸಾಹಿತ್ಯ, ಸಂಸ್ಕೃತಿ, ಕಲೆ, ಧರ್ಮ, ವಿಜ್ಞಾನ, ಶಿಕ್ಷಣ, ಆರೋಗ್ಯ ಮುಂತಾದ

ವಿಚಾರಪೂರ್ಣ ಲೇಖನಗಳಿಗೆ ಸ್ವಾಗತವಿದೆ

**ಬರಹಗಳಲ್ಲಿನ ಅಭಿಪ್ರಾಯಗಳು ಆಯಾ ಲೇಖಕರವು**

ಮುಖಪುಟ ಚಿತ್ರ

ಮೈಸೂರಿನ ಶ್ರೀ ರಾಜೇಂದ್ರ ಭವನದಲ್ಲಿ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ವತಿಯಿಂದ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ 2020ನೇ ಸಾಲಿನ ಶಕುಂತಲ ಜಯದೇವ ಪ್ರಶಸ್ತಿಯನ್ನು ಶ್ರೀಮತಿ ಬಸಮ್ಮ ಹಳಕೊಪ್ಪ ಹಾಗೂ ಡಾ. ಈಶ್ವರ ಮಂಟೂರರವರಿಗೆ ಪ್ರದಾನ ಮಾಡಲಾಯಿತು. ಶ್ರೀಮತಿ ಶಾರದಾ ಶಿವಲಿಂಗಸ್ವಾಮಿ, ಡಾ. ಶಕುಂತಲ ಜಯದೇವ, ಶ್ರೀ ಶಿವಶಂಕರಸ್ವಾಮಿ, ಶ್ರೀ ಗೊ.ರು. ಚನಬಸಪ್ಪ, ಡಾ. ನಂದೀಶ್ ಹಂಚೆ, ಶ್ರೀ ಮ.ಗು. ಸದಾನಂದಯ್ಯ ಮತ್ತು ಶ್ರೀ ಅಪ್ಪಾರಾವ್ ಅಕ್ಕೋಣಿರವರಿದ್ದಾರೆ (2.3.2021)


**ದಶವಾರ್ಷಿಕ ಚಂದಾ : 500/- * ಬಿಡಿ ಪ್ರತಿ: 10/-**

## ಪರಿವಿಡಿ


| | |
|---|---|
| ಗುರುವಾಣಿ | 5 |
| ಸಂಪಾದಕೀಯ | 7 |
| ನಾಡಿನ ಸಂತರ ಒಕ್ಕೊರಲಿನ ಸಂಕಲ್ಪ | 11 |
| ಪುಟ್ಟಯ್ಯ–ಸಂಗೀತ, ಸಾಹಿತ್ಯಗಳ ಮೇರು ಬೆಟ್ಟಯ್ಯ! **ಡಾ. ಆರ್.ಬಿ. ಚಿಲುಮಿ** | 13 |
| ಕಾಯಕ **ಡಾ. ಬಸವರಾಜ ಸಬರದ** | 24 |
| ಕೃಷಿ ವಿಜ್ಞಾನಿ ಭತ್ತದ ಡಾ. ಎಂ. ಮಹದೇವಪ್ಪ **ನಗರ್ಲೆ ಶಿವಕುಮಾರ** | 31 |
| ವಾರ್ತಾವಿಹಾರ **ಕುಮಾರಸ್ವಾಮಿ ವಿರಕ್ತಮಠ** | 41 |
| ಕೃತಿ–ಸ್ವೀಕೃತಿ | 67 |

## ಮನವಿ

ಜೆಎಸ್ಎಸ್ ಮಹಾವಿದ್ಯಾಪೀಠದಿಂದ ಪ್ರಕಟಗೊಳ್ಳುತ್ತಿರುವ "ಪ್ರಸಾದ" ಸಂಚಿಕೆಯ ಕೆಳಕಂಡ ಪ್ರತಿಗಳು ನಮ್ಮಲ್ಲಿ ಲಭ್ಯವಿಲ್ಲದ ಕಾರಣ ತಮ್ಮ ಬಳಿ ಅಥವಾ ಯಾವುದಾದರೂ ಗ್ರಂಥಾಲಯದಲ್ಲಿ ಲಭ್ಯವಿರುವ ಬಗ್ಗೆ ತಿಳಿಸಿದರೆ, ಜೆರಾಕ್ಸ್ ಮಾಡಿಸಿಕೊಂಡು ತಮಗೆ ಹಿಂತಿರುಗಿಸಲಾಗುವುದು. ದಯಮಾಡಿ ಸಹಕರಿಸಿ.

| ಕ್ರ.ಸಂ. | ಪ್ರಕಟವಾದ ವರ್ಷ | ದೊರಕದೆ ಇರುವ ಪ್ರತಿಗಳು |
|---|---|---|
| 1. | 1966 | ಈ ವರ್ಷದ ಎಲ್ಲ ಸಂಚಿಕೆಗಳು |
| 2. | 1967 | ಮೂರನೇ ಸಂಚಿಕೆ |
| 3. | 1970 | ಒಂದನೇ ಸಂಚಿಕೆ |
| 4. | 1971 | 2, 3, 4ನೇ ಸಂಚಿಕೆಗಳು |
| 5. | 1972 | 1, 3, 4ನೇ ಸಂಚಿಕೆಗಳು |
| 6. | 1975 | ಮೂರನೇ ಸಂಚಿಕೆ |
| 7. | 1976 | ಮೂರನೇ ಸಂಚಿಕೆ |
| 8. | 1984 | ಒಂದನೇ ಸಂಚಿಕೆ |

ಸಂಪರ್ಕದ ಮೊಬೈಲ್ ನಂ. 9986137389, 9964161363

ಸಂಪಾದಕರು

# ಗುರುವಾಣಿ

ಜೀವ ಜಡರೂಪ ಪ್ರಪಂಚವನದಾವುದೋ ।
ಆವರಿಸಿಕೊಂಡುಮೊಳನೆರೆದುಮಿಹುದಂತೆ ॥
ಭಾವಕೊಳಪಡದಂತೆ ಅಳತೆಗಳವಡದಂತೆ ।
ಆ ವಿಶೇಷಕೆ ಮಣಿಯೊ – ಮಂಕುತಿಮ್ಮ ॥

ಈ ಭೂಮಿ ನಮಗೆ ದೃಗ್ಗೋಚರವಾಗುತ್ತಿರುವ ಇಂದಿನ ರೂಪವನ್ನು ಪಡೆದು ನಾಲ್ಕು ಕೋಟಿ, ಐವತ್ತು ಲಕ್ಷ ವರ್ಷಗಳಾಗಿವೆ ಎನ್ನುತ್ತದೆ ವಿಜ್ಞಾನ. ಇದರ ಮೇಲೆ ಜೀವಜಾಲಗಳು ರೂಪುಗೊಂಡದ್ದು ಕೇವಲ ಕೆಲವು ಲಕ್ಷ ವರ್ಷಗಳ ಹಿಂದೆಯಂತೆ. ಈ ಜಾಲದ ಒಂದು 'ತಂತು' ಮನುಷ್ಯ ಉಳಿದ ಪ್ರಾಣಿಗಳಿಗಿಂತ ಭಿನ್ನನಾಗಿ ಇಂದಿನ ರೂಪ ಪಡೆದದ್ದು ಇತ್ತೀಚೆಗೆ ಎನ್ನುವುದು ಸರ್ವವೇದ್ಯ. ಭೂಮಂಡಲದ ಚರಿತ್ರೆಗೆ ಹೋಲಿಸಿಕೊಂಡರೆ ಮನುಷ್ಯನ ಮಿದುಳು ವಿಕಾಸಗೊಂಡು 'ತರ್ಕ'ಕ್ಕೆ ತನ್ನನ್ನು ಒಗ್ಗಿಸಿಕೊಂಡದ್ದು, ಭೂಮಿ ರೂಪಗೊಂಡ ಕಾಲಕ್ಕೆ ಹೋಲಿಸಿದರೆ ಕೆಲವು ನಿಮಿಷಗಳ ಹಿಂದೆಯಷ್ಟೆ! ಈ ನಿಮಿಷಗಳ ಅವಧಿಯಲ್ಲಿ ಮನುಕುಲದಲ್ಲಿ ನಡೆದ ಇತ್ಯಾತ್ಮಕ ಹಾಗೂ ನೇತ್ಯಾತ್ಮಕ ಆಲೋಚನೆಯ ಕ್ರಮಗಳು ಲೆಕ್ಕಕ್ಕೆ ಸಿಗದಷ್ಟು. ಮಾನುಷಸ್ತರದ ಬದುಕಿನ ಮೇಲೆ ಅತಿಮಾನುಷ ಶಕ್ತಿಯೊಂದರ ನಿಯಂತ್ರಣವನ್ನು 'ಊಹಿಸಿ'ಕೊಂಡ ಮನುಷ್ಯ ಭಾವಕೊಳಪಡದ ಅಳತೆಗಳವಡದ ಆ ಶಕ್ತಿಯೊಡನೆ ತಾದಾತ್ಮ್ಯ ಸಾಧಿಸಲು ಅಥವಾ ಅದನ್ನು ತನ್ನ ಪರವಾಗಿಸಿಕೊಳ್ಳಲು ಪಟ್ಟ ಪ್ರಯತ್ನಗಳೇ ಧಾರ್ಮಿಕ ವಲಯದ ಸುದೀರ್ಘ ಚರಿತ್ರೆಯಾಗಿದೆ. ಧರ್ಮಸಂಬಂಧಿ ಚರ್ಚೆಗಳು ಒಂದು ಕಡೆ 'ಅನುಭಾವ'ದ ನೆಲೆಯಲ್ಲಿ ಮಥಿತವಾದರೆ (ಅಲ್ಲಮ, ತತ್ವಪದಕಾರರು, ಜನಪದರು ಇತ್ಯಾದಿ) ಮತ್ತೊಂದು ಕಡೆ 'ಬಾಹ್ಯಾಚರಣೆ'ಯ ಮಾರ್ಗದಲ್ಲೂ ತನ್ನ ಹೆಜ್ಜೆಗುರುತುಗಳನ್ನು ಮೂಡಿಸಿವೆ. ಅನೇಕ ಧರ್ಮಾಚರಣೆಗಳು, ತಾತ್ವಿಕ ನಿಲುವುಗಳು ಭಿನ್ನತೆಯಲ್ಲಿಯೂ ಏಕತೆಯನ್ನು ಕಂಡುಕೊಂಡಿದ್ದು ಕಾಣದ ದೈವೀಶಕ್ತಿಯನ್ನು 'ಕಾಣುವ' ಮಾರ್ಗೋಪಾಯಗಳನ್ನು ಮಾತ್ರ ಸೂಚಿಸಿ ವಿರಮಿಸಿವೆ. ಕೊನೆಗೂ ಇದು ನಂಬಿಕೆಯ ಸ್ತರದಲ್ಲಿಯೇ ನೆಲೆಯಾಗುವುದರಿಂದ, ಡಿ.ವಿ.ಜಿ.ಯವರು ಹೇಳುವಂತೆ 'ಆವುದನು ಕಾಣದೊಡಮಳ್ತಿಯಿಂ ನಂಬಿಹುದೋ, ಆ ವಿಚಿತ್ರವೇ ಇಲ್ಲಿ ಮುಖ್ಯವಾಗುತ್ತದೆ. ನಮ್ಮ ಆರ್ಷೇಯ ಸಾಹಿತ್ಯದ ಸಿಂಹಪಾಲು ಇಂತಹ 'ನಂಬಿಕೆ'ಯನ್ನು ಬಲಗೊಳಿಸಿ, ಮನುಕುಲದ ಸ್ವಾಸ್ಥ್ಯವನ್ನು ಗಟ್ಟಿಗೊಳಿಸಿ ಆ ಮೂಲಕ ಸಮಾಜದಲ್ಲಿನ ಸುಪ್ತ ಶಿವಶಕ್ತಿಯನ್ನು ಉದ್ದೀಪಿಸಿ, ಜನತೆಯ ಒಳಹೊರಗಿನ ಬದುಕನ್ನು ಬೆಳಗುವುದೇ ಆಗಿದೆ. ಈ ಬೆಳಗುವಿಕೆಯನ್ನೇ 'ದೈವಪೂಜೆ' ಎಂದು ಬಗೆದು

ತಮ್ಮ ಇಡೀ ಬದುಕನ್ನು ಅದಕ್ಕಾಗಿ ಸಮರ್ಪಿಸಿಕೊಂಡ ಅನೇಕ ಋಷಿಮುನಿಗಳು, ಶರಣರು ಹಾಗೂ ದಾಸರು ಸಂತಮಹಂತರು ಜಗತ್ತಿನಾದ್ಯಂತ ಕಂಡುಬರುತ್ತಾರೆ.

ಈ ತೆರನ ಪ್ರಕ್ರಿಯೆಯಲ್ಲಿ ಅಮೃತಸದೃಶ ಬೆಳೆ ಬೆಳೆದಂತೆಯೇ, ಬೆಳೆಯ ನಡುವಿನ ಕಳೆಯಂತೆ, ಮೌಢ್ಯ ಕಂದಾಚಾರಗಳೂ ಸಮೃದ್ಧವಾಗಿಯೇ ಬೆಳೆದು ಬಂದಿವೆ. ಇದಕ್ಕೆ ಕಾರಣ ಸರ್ವೋದಯದ ಪ್ರಜ್ಞೆಗಿಂತ, ಸ್ವಕೇಂದ್ರಿತ ಆಸೆ ಆಮಿಷಗಳೇ ಮುಖ್ಯವಾಗಿರುವುದು. ಯಾರೋ ಒಬ್ಬರಿಂದ ಯಾವುದೋ ಕಾರಣಕ್ಕೆ ಪ್ರಾರಂಭವಾಗುವ ಮೌಢ್ಯಾಚರಣೆ, ಮುಂದೆ ಸೋಂಕುರೋಗದಂತೆ ಉಲ್ಬಣಗೊಂಡು ವ್ಯಾಪಿಸುತ್ತದೆ. ಸಾತ್ವಿಕ ಪೂಜೆ ಮುಂತಾದುವು ಹಿನ್ನೆಲೆಗೆ ಸರಿದು, ತಾಮಸರಾಜಸ ಪೂಜಾ ಪ್ರಕ್ರಿಯೆಗಳೇ ಮುನ್ನೆಲೆಗೆ ಬಂದು ಜನಸಾಮಾನ್ಯರನ್ನು ಭ್ರಮೆಗೆ ಒಳಗುಮಾಡುತ್ತವೆ; ಇಡೀ ಸಮೂಹ ಒಂದು ರೀತಿಯ ಸನ್ನಿಗೆ ಒಳಗಾಗಿ ಅನೇಕ ಚಟುವಟಿಕೆಗಳಿಗೆ ತೊಡಗಿಕೊಳ್ಳುತ್ತದೆ. ಇಂತದೇ ಸನ್ನಿವೇಶ ನಿರ್ಮಾಣವಾಗಿದ್ದ ಕಾಲಘಟ್ಟದಲ್ಲಿ ಬಸವಣ್ಣನವರಂತಹ ಸ್ವಾತ್ಮ ಬೋಧಕರೂ ಸಮಾಜಚಿಕಿತ್ಸಕರೂ ಜನ್ಮ ತಳೆಯುತ್ತಾರೆ.

ಅಧಿಕಾರ–ಐಶ್ವರ್ಯಗಳ ನಾಯಿಕೂಗಿನ ನಡುವೆ,
ಮತ–ಮೌಢ್ಯಗಳ ನಡುವೆ ಸದ್ದಿರದೆ ಕೈಮುಗಿದು ನಿಂತ ದೀಪದ ಕಂಬ,
ನಿನ್ನ ಸುತ್ತಲೂ ಬಂದು ಸಂಗಮವಾಯ್ತು ನೂರು ಬೆಳಕಿನ ಬಿಂಬ,
ತಮಂಧ ಘನವಾದಂದಿನಾವರಣಗಳ ತುಂಬ,
ಕಿರಣ ಸಂಚಾರ ಹೊತ್ತಿ ಕಲ್ಯಾಣವೆನ್ನುವ ಪಣತಿ
ತೊಳಗಿ ಬೆಳಗಿತ್ತು ಶಿವನ ಪ್ರಕಾಶ

ಈ ಮಾತುಗಳಲ್ಲಿ ಡಾ. ಜಿ.ಎಸ್. ಶಿವರುದ್ರಪ್ಪನವರು ಬಸವಣ್ಣನವರ ವ್ಯಕ್ತಿತ್ವಕ್ಕೂ ಮತ್ತು ಅಂದಿನ ಸಾಮಾಜಿಕ ಸ್ಥಿತಿಯನ್ನು ಬಹಳ ಅರ್ಥವತ್ತಾಗಿ ಹೇಳಿದ್ದಾರೆ. ಅಶಾಶ್ವತವಾದ ಅಧಿಕಾರ ಮತ್ತು ಐಶ್ವರ್ಯಗಳನ್ನು ಅವರು 'ನಾಯಿ ಕೂಗಿ'ಗೆ ಹೋಲಿಸಿರುವುದು ತುಂಬಾ ಮಾರ್ಮಿಕವಾದ ಮಾತಾಗಿದೆ. ಇವರೇ ಮತ್ತೊಂದು ಕಡೆ 'ಕಾಂಚನವೆಂಬ ನಾಯನೆಚ್ಚಿ ನಿಮ್ಮ ನಾನು ಮರೆದನಯ್ಯ' ಎಂದೂ ಹೇಳಿದ್ದಾರೆ. ಇಂದು ಎಲ್ಲ ಕಡೆ ಇಂತಹ 'ಕೂಗು'ಗಳೇ 'ಬೃಹತ್‌ಗಾನ'ವಾಗಿ ಕೇಳಿಬರುತ್ತಿದ್ದು, ಲೋಕ ತಲ್ಲಣಗೊಂಡಿದೆ. ಈ ತೆರನ ಅಪಮೌಲ್ಯಗೊಂಡ ಬದುಕು ಮುಗ್ಧ ಜನತೆಯನ್ನು ತಲ್ಲಣಗೊಳಿಸುವುದರ ಜೊತೆಗೆ, ದೃಗ್ಗೋಚರವಲ್ಲದ 'ಮಹಾಮಾರಿ'ಯೂ ತನ್ನ ಆಧಿಪತ್ಯ ಸ್ಥಾಪಿಸಿ, ಮನುಷ್ಯಲೋಕಕ್ಕೆ ಸವಾಲು ಎಸೆದಿದೆ.

ಇಂತಹ ಸಂದರ್ಭದಲ್ಲಿ ಬಸವಾದಿ ಶರಣರ ಮೌಲಿಕ ಬದುಕನ್ನು ಮತ್ತೆ ಮತ್ತೆ ಸಾಮಾಜಿಕರು ಮನನ ಮಾಡುತ್ತಾ ಬದುಕನ್ನು ರೂಪಿಸಿಕೊಳ್ಳಬೇಕಾಗಿದೆ. ಈ ದಿಸೆಯಲ್ಲಿ ಎಲ್ಲರ ಆತ್ಮಸಾಕ್ಷಿ ಜಾಗೃತಗೊಂಡು, 'ಸರ್ವಜನ ಸುಖಾಯ, ಸರ್ವಜನ ಹಿತಾಯ'ದ ಬದುಕಿನ ಕ್ರಮವನ್ನು ರೂಪಿಸಿಕೊಳ್ಳಲೆಂದು ಹಾರೈಸುತ್ತೇವೆ.

**ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು**

# ಸಂಪಾದಕೀಯ

ದಿನಾಂಕ 10.4.2021ರ ಸೋಮವಾರದಿಂದ ನಾಡಿನಾದ್ಯಂತ ಸಂಪೂರ್ಣ 'ಲಾಕ್‌ಡೌನ್' (ಬೀಗಮುದ್ರೆ) ಘೋಷಣೆಯಾಗಿದೆ. ಇದರ ಸೂಚನೆ ಸಿಕ್ಕಿದ ದಿನದಿಂದಲೇ ನಗರ ಪ್ರದೇಶದ ಜನ ಒಂದು ರೀತಿಯಲ್ಲಿ Panic ಆಗಿದ್ದಾರೆ. ನಿತ್ಯದ ಸಹಜ ಬದುಕು ಅಸ್ತವ್ಯಸ್ತಗೊಳ್ಳುತ್ತದೆ ಎಂದೆನಿಸಿ ಎಲ್ಲ ಕಡೆ ಹಾಹಾಕಾರವೆದ್ದಿದೆ. ಅಂದಂದಿನ ದುಡಿಮೆಯಿಂದಲೇ ಆ ಹೊತ್ತಿಗೆ ಹೊಟ್ಟೆ ತುಂಬಿಸಿಕೊಳ್ಳಬೇಕಾದವ ರಲ್ಲಿನ ಅತಂತ್ರ ಸ್ಥಿತಿಯ ದೃಷ್ಟಿಯಿಂದ ಸಾಮಾನ್ಯ ಜನರು ಗೊಂದಲಕ್ಕೆ ಒಳಗಾಗುವುದರಲ್ಲಿ ಒಂದು ಅರ್ಥವಿದೆ. ದೂರದ ರಾಜ್ಯಗಳಿಂದ ಹೊಟ್ಟೆಪಾಡಿಗಾಗಿ ಬಂದು, ತನ್ನದು ಎನ್ನುವುದು ಇಲ್ಲಿ ಯಾವುದೂ ಇಲ್ಲದೆ ಮೆಟ್ರೋ ಸೇತುವೆಗಳ ಕೆಳಗೆ, ಸರ್ಕಾರಿ ಖಾಲಿ ನಿವೇಶನದಲ್ಲಿ, ನಿರ್ಮಾಣ ಹಂತದ ಕಟ್ಟಡಗಳ ನೆಲಮಾಳಿಗೆಯಲ್ಲಿ, ಆಸುಪಾಸಿನಲ್ಲಿ ಕೈಯಲ್ಲಿ ಜೀವ ಹಿಡಿದು ಬದುಕುವ ಕೂಲಿಕಾರ್ಮಿಕರ ದೃಷ್ಟಿಯಿಂದ ಇದು ಸಿಡಿಲ ಹೊಡೆತಕ್ಕೆ ಸಮಾನ ಎನ್ನುವುದರಲ್ಲಿ ಯಾವ ಸಂಶಯವೂ ಇಲ್ಲ. ಲಾಕ್‌ಡೌನ್‌ನಿಂದ ಚಿತ್ರಮಂದಿರಗಳು, ಮಾರುಕಟ್ಟೆಗಳು, ಹೈಟೆಕ್ ಮಾಲ್‌ಗಳು, ಜಿಮ್, ಬ್ಯೂಟಿಪಾರ್ಲ್‌ರ್‌ಗಳು, ಹೋಟೆಲ್‌ಗಳು ಮುಚ್ಚುತ್ತವೆ. ಇವುಗಳಿಂದ 'ಸಹಜ' ಜೀವನಕ್ಕೆ ಯಾವ ಕುಂದು ಬರುತ್ತದೆ? ಮದುವೆ ಮುಂಜಿ ಪಾರ್ಟಿಗಳ ನೆಪದಲ್ಲಿ ತಮ್ಮನ್ನು ತಾವು ಪ್ರದರ್ಶಿಸಿ ಕೊಳ್ಳುವುದಕ್ಕೆ ಅಥವಾ ತಮ್ಮ ಸಂಪತ್ತನ್ನು ವಿಕೃತವಾಗಿ ಪ್ರದರ್ಶಿಸಿಕೊಳ್ಳುವುದಕ್ಕೆ (Vulgour Exhibition of Wealth) ಅವಕಾಶವಿರುವುದಿಲ್ಲ ನಿಜ – ಅದು ಇರಲೂಬಾರದು.

ರಸ್ತೆಯಲ್ಲಿ ಓಡಾಡುವ ವಾಹನಗಳಲ್ಲಿ ಶೇಕಡಾ ಎಪ್ಪತ್ತರಷ್ಟು ವಾಹನಗಳು ಅನಿವಾರ್ಯವಲ್ಲದ, ಖುಷಿಗಾಗಿ, ಮೋಜಿಗಾಗಿ ಓಡಾಡುತ್ತಿರುತ್ತವೆ. ಇದರ ಚಾಲಕರಲ್ಲಿ ಬಹುಪಾಲು ಜನ ಮಾಸ್ಕ್ ಆಗಲಿ, ಹೆಲ್ಮೆಟ್ ಆಗಲಿ ಧರಿಸಿರುವುದಿಲ್ಲ. ಕೆಲವರಿಗೆ ಚಾಲನಾ ಪರವಾನಗಿ, ವಾಹನಗಳ ದಾಖಲೆಗಳೂ ಇರುವುದಿಲ್ಲ. ಇಂತಹ ಉಡಾಳರಿಗೆ ಲೌಕ್‌ಡೌನ್‌ನಂತಹ ಉಗ್ರಕ್ರಮ ಅನಿವಾರ್ಯವೇ ಆಗುತ್ತದೆ. ಮೈಯನ್ನು ಹುರಿಗೊಳಿಸಿಕೊಳ್ಳಲು ಪಾರ್ಕುಗಳಲ್ಲಿ ಗಂಟೆಗಟ್ಟಲೆ ವ್ಯಾಯಾಮ

ಮಾಡುವವರು, ನಗು ಬರದಿದ್ದರೂ ಕೃತಕವಾಗಿ ಹಲ್ಲುಕಿರಿದು 'ನಕ್ಕೆ' ಎಂದು ಭ್ರಮಿಸುವವರು, ಯಾವ ಕಾರಣವೂ ಇಲ್ಲದೆ ಸುಮ್ಮಸುಮ್ಮನೆ ಚಪ್ಪಾಳೆ ತಟ್ಟಿ ಇತರರ ನೆಮ್ಮದಿಗೆ ಭಂಗ ತಂದು 'ಶಬ್ದಮಾಲಿನ್ಯ' ಮಾಡುವವರು – ಇವೆಲ್ಲವನ್ನೂ ಬಿಟ್ಟು ತಾವೇ ಒಂದೆರಡು ಕಿಲೋಮೀಟರ್ ನಡೆದುಹೋಗಿ ತರಕಾರಿ, ಹಾಲು, ಮೊಸರು ತಂದರೆ ತಪ್ಪೇನಿದೆ? ಬದುಕೆಲ್ಲವೂ ವಾಹನದ ಮೇಲೆಯೇ, ಮನೆಗಿಂತ ಬೀದಿಗಳಲ್ಲಿಯೇ ಸುಳಿಗಾಲಿಯಂತೆ ಸಂಚರಿಸುತ್ತ ಒಂದು ರೀತಿಯ 'ಹೈಫೈ' ಜೀವನದ 'ಕೇಕ್ ವಾಕ್' ಬದುಕಿಗೆ ಹೊಂದಿಕೊಂಡು, ತಮ್ಮ ಲೋಟದಲ್ಲಿನ ಟೀ ಕಪ್‌ನಲ್ಲಿ ಉಂಟಾದ ಸಣ್ಣ ಅದುರುವಿಕೆಯನ್ನೇ ಸುನಾಮಿ ಎಂದು ಭಾವಿಸಿ ಚಡಪಡಿಸುವ ಜನಕ್ಕೆ ಈ ತೆರನ ಕ್ರಮದಿಂದ ತಮಗೆ ಏನೋ ಆಗಿ ಬಿಟ್ಟಿತು, ಗುಹೆಯೊಳಗೆ ತಮ್ಮನ್ನು ಕೂಡಿಹಾಕಿ ಬಂಡೆಯನ್ನು ಮುಚ್ಚಿಬಿಟ್ಟಂತೆ ಅನಿಸುವುದರಲ್ಲಿ ಏನೂ ಅಚ್ಚರಿಯಿಲ್ಲ.

ಕರೋನಾ ವೈರಸ್‌ನ ಆಕ್ರಮಣ ಊಹಾತೀತವಾಗಿದೆ. 'ಅಂತಕನ ದೂತರಿಗೆ ಕಿಂಚಿತ್ತು ದಯವಿಲ್ಲ' ಎನ್ನುವ ಮಾತು ಎಲ್ಲೆಲ್ಲಿಯೂ ಕೇಳಿಬರುತ್ತಿದೆ. ಈ ದೂತರು ಈಗ ಸೂಕ್ಷ್ಮ ರೂಪದಲ್ಲಿ ಬಂದು ಬಡವ ಬಲ್ಲಿದ ಭೇದವಿಲ್ಲದೆ ಸಾವಿನಲ್ಲಿ ಎಲ್ಲರೂ ಸಮಾನರು ಎನ್ನುವ ತತ್ವವನ್ನು ಸಾಬೀತುಗೊಳಿಸುತ್ತಿದ್ದಾರೆ. ಈ ಸಮಸ್ಯೆಯ ಉಲ್ಬಣಾವಸ್ಥೆಗೆ ಆಡಳಿತ ಯಂತ್ರದ ಬೇಜವಾಬ್ದಾರಿತನ ಹಾಗೂ ನಿಷ್ಕ್ರಿಯತೆಗಳು ಕಾರಣ ಎನ್ನುವುದು ಒಂದು ರೀತಿಯಲ್ಲಿ ಸರಿ. ಆದರೆ ಇದರಲ್ಲಿ ಸಾಮಾಜಿಕ ಬೇಜವಾಬ್ದಾರಿತನ ಎಷ್ಟು ಎನ್ನುವುದೂ ಅಷ್ಟೇ ಮುಖ್ಯವಾಗುತ್ತದೆ.

ಎಲ್ಲ ಸಂದರ್ಭಗಳಲ್ಲಿಯೂ ಸರ್ಕಾರವನ್ನು ಟೀಕಿಸುವುದು ಅಷ್ಟು ಉಚಿತವಾಗಿ ಕಾಣುವುದಿಲ್ಲ. ಕೆಲವು ಅನಿರೀಕ್ಷಿತ ಅವಘಡಗಳು ಹುಚ್ಚು ಹೊಳೆಯಂತೆ ಹರಿದು ಬಂದಾಗ ಆಳುವವರು ಎಷ್ಟೇ ಸಮರ್ಥರಿದ್ದರೂ ಕೈ ಚೆಲ್ಲಬೇಕಾದ ಪರಿಸ್ಥಿತಿ ಉಂಟಾಗುತ್ತದೆ. ಇದು ಸಂಪೂರ್ಣ ಸರಿ ಎಂದು ನಾನು ಹೇಳುತ್ತಿಲ್ಲ. ಇದನ್ನು ಪಕ್ಷ ರಾಜಕೀಯಕ್ಕೆ ಥಳುಕು ಹಾಕಿ ರಾಜಕೀಯ ಪರಿಭಾಷೆಯಲ್ಲಿ ಮಾತನಾಡಿ ಸಮೂಹದ ಮನಃಸ್ಥಿತಿಯನ್ನು ಮತ್ತೂ ಕೆಡಿಸುವುದು ಕರೋನಾಕ್ಕಿಂತ ಹೆಚ್ಚು ಅಪಾಯಕಾರಿ. ಹಾಗೆ ನೋಡಿದರೆ ಇದು ಒಂದು ದೇಶದ ಆಂತರಿಕ ಸಮಸ್ಯೆ ಮಾತ್ರವಾಗಿರದೆ, ಇದರ ನಿವಾರಣೋಪಾಯಗಳು ಅಂತಾರಾಷ್ಟ್ರೀಯ ಆಯಾಮಗಳನ್ನು ಪಡೆದುಕೊಂಡಿರುವುದರಿಂದ ಸಮಸ್ಯೆ ಸರಳ ರೂಪದ್ದಾಗಿರದೆ, ಸಾಕಷ್ಟು ಜಟಿಲವಾಗಿಯೇ ಇದೆ. ಇಷ್ಟೆಲ್ಲಾ ಹಿನ್ನೆಲೆಯಲ್ಲಿ ಸಾರ್ವಜನಿಕರು ಸರ್ಕಾರದ ನಿಯಮಗಳನ್ನು ಗಾಳಿಗೆ ತೂರಿ ಮಾಸ್ಕ್ ಧರಿಸದೆ, ಸ್ಯಾನಿಟೈಸರ್ ಬಳಸದೆ, ಮದುವೆ, ಜಾತ್ರೆ, ಉತ್ಸವಗಳು, ರಾಜಕೀಯ ರ್‍ಯಾಲಿಗಳು, ಬಾರ್

ಕೌಂಟರ್‌ಗಳ ಮುಂದೆ, ಮಾರುಕಟ್ಟೆ ಮುಂತಾದ ಕಡೆಗಳಲ್ಲಿ ಯಾವುದೇ ಎಗ್ಗಿಲ್ಲದೆ ನಾವು ನಡೆದುಕೊಳ್ಳುವುದೇ ಹೀಗೆ ಎನ್ನುವ ಧೋರಣೆಯಿಂದ ವರ್ತಿಸಿದರೆ, ಯಾರು ತಾನೇ ಏನು ಮಾಡಲು ಸಾಧ್ಯ? ಆರಕ್ಷಕರೇನು ಕಂಡಲ್ಲಿ ಗುಂಡು ಹೊಡೆಯಲು ಸಾಧ್ಯವಿದೆಯೇ? ಈ ನಡುವೆ ಇಂತಹ ಮಾರಣಾಂತಿಕ ಸ್ಥಿತಿಯಲ್ಲಿಯೂ, ರೋಗಿಗಳ ಅಸಹಾಯಕತೆಯನ್ನೇ ಬಂಡವಾಳ ಮಾಡಿಕೊಂಡು, ಹಣ ಮಾಡುವ ರಾಕ್ಷಸ ಸಂತಾನವನ್ನು ನೋಡಿದಾಗ ಯುದ್ಧರಂಗದಲ್ಲಿ ಸಾಯುವವರನ್ನು ನಿರೀಕ್ಷಿಸುತ್ತಾ, ಸತ್ತವರ ಅಥವಾ ಅರೆ ಸತ್ತವರ ದೇಹಗಳನ್ನು ಕುಕ್ಕಿಕುಕ್ಕಿ ತಿನ್ನುವ ರಣಹದ್ದುಗಳ ಚಿತ್ರ ಕಣ್ಣ ಮುಂದೆ ಬರುತ್ತದೆ.

ಮುಂದೆ ಬರುವ ಮೂರನೆ ಅಲೆ ಇನ್ನೂ ಭಯಾನಕವಾಗಿರುತ್ತದೆಯಂತೆ. ಅದು ಬಂದರೆ 'ದೇವರೇ ಗತಿ' ಎಂದು ಹೇಳುವ ಹಾಗೂ ಇಲ್ಲ. ಏಕೆಂದರೆ ದೇವಸ್ಥಾನಗಳಲ್ಲಿ ಮೊದಲೇ ಲಾಕ್‌ಡೌನ್ ಘೋಷಣೆಗೊಂಡು ಬಿಟ್ಟಿದೆ. ಕಲ್ಲು ದೇವರು ದೇವರಲ್ಲ; ಮಣ್ಣು ದೇವರು ದೇವರಲ್ಲ, ಪಂಚಲೋಹದಲ್ಲಿರುವವರು ದೇವರಲ್ಲ ಎಂದು ನಮ್ಮ ಶರಣರು ಅಂದೇ ಹೇಳಿದ ಮಾತು, ಎಂದೆಂದಿಗೂ ಹೇಗೆ ಸತ್ಯವಾಕ್ಯ ಆಗಿದೆ ಎನ್ನುವುದು ಇಂದು ನಮ್ಮ ಅರಿವಿಗೆ ಬರುತ್ತದೆ.

ಈಗ ನಮಗೆ ನಮ್ಮ ನಮ್ಮ ಮನೆಗಳೇ ದೇವಾಲಯಗಳಾಗಬೇಕಿದೆ. ನಮ್ಮ ಹಣದ, ಅಂತಸ್ತಿನ ಕೃತಕ 'ಅಹಂ' ಅನ್ನು ವಿಸರ್ಜಿಸಿ, ಶುದ್ಧ ಹಾಗೂ ಮುಗ್ಧ ಮನಸ್ಸಿನಿಂದ ನಮ್ಮ ಬಂಧು ಬಾಂಧವರೊಡನೆ, ನೆರೆಹೊರೆಯರೊಡಗೂಡಿ ಬೆರೆಯಬೇಕಾಗಿದೆ. ಈ ಬೆರೆಯುವಿಕೆ ಎನ್ನುವುದು ಸಕ್ಕರೆ ಮತ್ತು ಮರಳು ಬೆರೆತಂತಲ್ಲದೆ ಅನೇಕ ನದಿಗಳು ಸಾಗರದಲ್ಲಿ ಸಂಗಮಿಸಿದಂತಾಗಬೇಕಿದೆ. ನಮ್ಮ ಬಾಲ್ಯದ ಕೆಲ ನೆನಪುಗಳು, ಸಮಾನ ಮನಸ್ಕರೊಡನೆ ಹೃದಯ ಸಂವಾದ, ಕಷ್ಟದಲ್ಲಿರುವವರಿಗೆ ಒಂದು ಸಾಂತ್ವನದ ನುಡಿ, ಮಕ್ಕಳೊಡನೆ ಮಕ್ಕಳಾಗುವಿಕೆ, ಮೊಬೈಲ್ ಗೇಮುಗಳನ್ನು ಬಿಟ್ಟು ನಮ್ಮ ದೇಶೀ ಆಟಗಳ ಆಡುವಿಕೆ, ತಲೆಕೂದಲಿನ ನುಣುಪು, ಚರ್ಮದ ಕಾಂತಿ, ದೇಹದ fitness ಗಾಗಿ ಬಳಸುವ ಕೃತಕ ಪರಿಕರಗಳನ್ನು ಮರೆತು, ಮಾನಸಿಕ ಸಮತೋಲನದತ್ತ ಒಲವು – ಇವುಗಳನ್ನು ಒಂದಿಷ್ಟು ಪಾಲಿಸಿದರೆ 'ಲಾಕ್‌ಡೌನ್'ಗೆ ಭಯಬೀಳುವ ಅವಶ್ಯಕತೆಯೇ ಇರುವುದಿಲ್ಲ.

ಇಷ್ಟೆಲ್ಲಾ ಭಯದ ವಾತಾವರಣದಲ್ಲಿ ಬದುಕುತ್ತಿರುವ ನಾವು ನಮಗೆ ಹತ್ತಿರದವರೇ ಆದವರನ್ನೂ, ನಾಡಿನ ಹಿರಿಯ ವಿದ್ವಾಂಸರನ್ನು, ಸಾಹಿತಿಗಳನ್ನು ಕಳೆದುಕೊಳ್ಳುತ್ತಿರುವುದು ಮತ್ತಷ್ಟು ದುಃಖದ ಸಂಗತಿಯಾಗಿದೆ.

* *

ನಾಡಿನ ಭತ್ತದ ತಳಿ ವಿಜ್ಞಾನಿ ಪದ್ಮಭೂಷಣ, ಡಾ. ಎಂ. ಮಹದೇವಪ್ಪನವರು ಸುತ್ತೂರು ಶ್ರೀಮಠದ ಹಿರಿಯ ವಿದ್ಯಾರ್ಥಿಗಳಾಗಿ ಕೃಷಿ ಕ್ಷೇತ್ರದಲ್ಲಿ ಉನ್ನತ ವ್ಯಾಸಂಗ ಮಾಡಿ, ವಿ.ವಿ.ಯ ಕುಲಪತಿಯಂತಹ ಉನ್ನತ ಹುದ್ದೆಯನ್ನು ಎರಡು ಅವಧಿಗೆ ಅಲಂಕರಿಸಿದ್ದವರು. ಭತ್ತದ ತಳಿ ವಿಜ್ಞಾನದಲ್ಲಿ ಸಾಧನೆ ಮಾಡಿ, 'ಭತ್ತದ ಮಹದೇವಪ್ಪ'ನವರೆಂದೇ ಖ್ಯಾತರಾದವರು. ಅದಕ್ಕಾಗಿ ಪದ್ಮಶ್ರೀ, ಪದ್ಮಭೂಷಣ ಪ್ರಶಸ್ತಿಗಳನ್ನು ಪಡೆದವರು.

ಶ್ರೀ ಸಿರಿಯಪ್ಪನವರು ಗುಂಡ್ಲುಪೇಟೆ ತಾಲ್ಲೂಕು ಕಬ್ಬಹಳ್ಳಿ ಗ್ರಾಮದವರು. ತಮ್ಮ ಸರ್ಕಾರಿ ಸೇವೆಯ ನಿವೃತ್ತಿಯ ನಂತರ ಜೆಎಸ್‌ಎಸ್ ಮಹಾವಿದ್ಯಾಪೀಠದಲ್ಲಿ ಬಿಸಿಯೂಟದ ಮೇಲ್ವಿಚಾರಣೆಯ ಜವಾಬ್ದಾರಿಯನ್ನು ಹೊತ್ತಿದ್ದರು.

ಡಾ. ಸಿದ್ಧರಾಮಯ್ಯನವರು ಶ್ರೀ ಜಯಚಾಮರಾಜೇಂದ್ರ ಇಂಜಿನಿಯರಿಂಗ್ ಕಾಲೇಜಿನ ಪಾಲಿಮರ್ ಸೈನ್ಸ್ ವಿಭಾಗದಲ್ಲಿ ಪ್ರಾಧ್ಯಾಪಕರಾಗಿದ್ದು, ನಂತರ ಜೆಎಸ್‌ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ವಿಶ್ವವಿದ್ಯಾನಿಲಯದ ಪ್ರಭಾರ ಕುಲಪತಿಗಳಾಗಿದ್ದರು.

ಬೆಂಗಳೂರಿನ ವಾಸಿಯಾಗಿದ್ದ ಶ್ರೀ ಜರಗನಹಳ್ಳಿ ಶಿವಶಂಕರ್ ಒಬ್ಬ ಅನುಭಾವಿ ಚಿಂತಕ ಸಾಹಿತಿಗಳಾಗಿದ್ದರು. ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ರಾಜ್ಯ ಉಪಾಧ್ಯಕ್ಷರಾಗಿ ಸೇವೆ ಸಲ್ಲಿಸುತ್ತಾ ಬಂದಿದ್ದರು.

ನಾಡಿನ ಹಿರಿಯ ಜೀವ ಪ್ರೊ. ಜಿ. ವೆಂಕಟಸುಬ್ಬಯ್ಯನವರು ಶಬ್ದಗಳ ಜನ್ಮ ಕುಂಡಲಿಯನ್ನು ಬರೆಯುವುದರಲ್ಲಿ ಸಿದ್ಧಹಸ್ತರಾಗಿದ್ದರು. ಅಖಿಲ ಭಾರತ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದ ಸನ್ಮಾನ್ಯರ 'ಇಗೋ ಕನ್ನಡ' ಸಂಸ್ಕೃತಿಗೆ ಕೊಟ್ಟ ಬಹುದೊಡ್ಡ ಕೊಡುಗೆ.

ಶ್ರೀ ಬಿ.ಎಸ್. ಸಣ್ಣಯ್ಯನವರದು ಗ್ರಂಥ ಸಂಪಾದನಾ ಕ್ಷೇತ್ರದಲ್ಲಿ ಬಹುದೊಡ್ಡ ಹೆಸರು. ಅನೇಕ ಜೈನ ಕಾವ್ಯಗಳನ್ನು ಸಂಪಾದಿಸಿಕೊಟ್ಟಿದ್ದಾರೆ.

ಶ್ರೀ ದೇಶಪಾಂಡೆಯವರು ಸುತ್ತೂರಿನಲ್ಲಿರುವ ಪೂಜ್ಯ ಶ್ರೀ ರಾಜೇಂದ್ರ ಮಹಾಸ್ವಾಮಿಗಳವರ ಪ್ರತಿಮೆ, ಮೈಸೂರಿನಲ್ಲಿರುವ ಡಾ. ಜಗ್‌ಜೀವನ್ ರಾಮ್ ಪ್ರತಿಮೆ, ಚೆನ್ನೈನಲ್ಲಿರುವ ಸರ್ವಜ್ಞ ಪ್ರತಿಮೆ – ಹೀಗೆ ನೂರಾರು ಪ್ರತಿಮೆಗಳನ್ನು ನಿರ್ಮಿಸಿದ್ದರು. ಕಾವಾ ಡೀನ್ ಆಗಿ ನಿವೃತ್ತರಾಗಿದ್ದರು.

ಇವರುಗಳ ನಿಧನ ನಾಡಿನ ಸಾಂಸ್ಕೃತಿಕ ಕ್ಷೇತ್ರಕ್ಕೆ ಆಗಿರುವ ಬಹು ದೊಡ್ಡ ನಷ್ಟ. 'ಪ್ರಸಾದ' ಬಳಗ ಈ ಮಹನೀಯರಿಗೆ ಗೌರವ ಪೂರ್ವಕ ಶ್ರದ್ಧಾಂಜಲಿಯನ್ನು ಸಲ್ಲಿಸುತ್ತದೆ.

**ಮಲೆಯೂರು ಗುರುಸ್ವಾಮಿ**
**ಸಂಪಾದಕ**

# ನಾಡಿನ ಸಂತರ ಒಕ್ಕೊರಲಿನ ಸಂಕಲ್ಪ

(ಏಪ್ರಿಲ್ 16ರಂದು ಬೆಂಗಳೂರು ಪಿಇಎಸ್ ಇಂಜಿನಿಯರಿಂಗ್ ಕಾಲೇಜಿನಲ್ಲಿ ಕರ್ನಾಟಕ ಸರ್ಕಾರದ ಸಾವಯವ ಕೃಷಿ ಮಿಷನ್‌ನ ವತಿಯಿಂದ ಏರ್ಪಡಿಸಲಾಗಿದ್ದ ಭೂಮಿ ಸುಪೋಷಣಾ ಮತ್ತು ಸಂರಕ್ಷಣಾ ಅಭಿಯಾನದ 'ಭೂತಾಯ ಕಾಯಕಕೆ – ಧರ್ಮ ಕಾಯ್ವರ ಹೆಗಲು' ಕಾರ್ಯಕ್ರಮದಲ್ಲಿ ಪೂಜ್ಯ ಮಠಾಧೀಶರುಗಳು ತೆಗೆದುಕೊಂಡ ಸಂತರ ಒಕ್ಕೊರಲಿನ ಸಂಕಲ್ಪ)

ಭೂಮಿ ಸುಪೋಷಣಾ ಮತ್ತು ಸಂರಕ್ಷಣಾ ಅಭಿಯಾನದ ನಿಮಿತ್ತವಾಗಿ ಸಾವಯವ ಕೃಷಿಕರ ಸಂಸ್ಥೆಯಾಗಿರುವ 'ಸಾವಯವ ಕೃಷಿ ಪರಿವಾರ'ವು ಸಂಯೋಜಿಸಿರುವ 'ಭೂತಾಯ ಕಾಯಕಕೆ – ಧರ್ಮ ಕಾಯ್ವರ ಹೆಗಲು' ಎನ್ನುವ ಶೀರ್ಷಿಕೆಯ ಅತ್ಯಂತ ಅರ್ಥಪೂರ್ಣ ಸಮಯೋಚಿತ ಕಾರ್ಯಕ್ರಮದ ಸಂದರ್ಭದಲ್ಲಿ ಸಮಸ್ತ ಜೀವಸಂಕುಲದ ಸಂರಕ್ಷಣೆಗಾಗಿ ನಾಡಿನ ಸಂತರು–ಧರ್ಮದರ್ಶಿಗಳೆಲ್ಲರ ಒಕ್ಕೊರಲ ದನಿಯಾಗಿ ಈ ಕೆಳಗಿನ ಸತ್ಸಂಕಲ್ಪಗಳ ಅನುಷ್ಠಾನಕ್ಕಾಗಿ ಬದ್ಧರಾಗುತ್ತೇವೆ.

- ಭೂಮಿ ನಮ್ಮೆಲ್ಲರ ತಾಯಿ. ಅಗಣಿತ ಜೀವರಾಶಿಗಳ ಬೆಚ್ಚನೆಯ ಕಾವುಗೂಡು. ಭೂಮಿತಾಯಿಗೆ ವಿಷ ರಾಸಾಯನಿಕಗಳ ಸೇರ್ಪಡೆ ನಿಲ್ಲಲೇಬೇಕು. 'ಧಾರಿಣಿಗೆ ಅಮೃತಧಾರೆ' ಎಂಬ ಹೆಸರಿನಲ್ಲಿ ನಾವುಗಳು ನಮ್ಮ ಕ್ಷೇತ್ರದ ವ್ಯಾಪ್ತಿಯ ಅನ್ನದಂಗಳವನ್ನು ಸಾವಯವ ಕೃಷಿಯ ಪದ್ಧತಿಗೆ ಮುಡಿಪಾಗಿಡಲಿದ್ದೇವೆ.
- ಗೋವಂಶ ಸಂರಕ್ಷಣೆ ಭೂಮಿ ಸುಪೋಷಣೆಗೆ ಮುಖ್ಯ ಸಾಧನ. 'ಗೋ–ಸಂಗೋಪನಾ' ಎನ್ನುವ ಹೆಸರಿನ ಕಾರ್ಯಕ್ರಮದಲ್ಲಿ ನಮ್ಮ ಕ್ಷೇತ್ರದ ವ್ಯಾಪ್ತಿಯಲ್ಲಿನ ಸ್ಥಳೀಯ ಗೋವಂಶದ ಸಂರಕ್ಷಣೆ–ಸಂವರ್ಧನೆ–ಸಂಶೋಧನೆಗಳಿಗೆ ವಿಶೇಷ ಆದ್ಯತೆ ನೀಡಲಿದ್ದೇವೆ.
- 'ನಮ್ಮೂರ ಜೀವ ಸಂಪದ' ಎಂಬ ಶೀರ್ಷಿಕೆಯಡಿ ನಮ್ಮ ಕ್ಷೇತ್ರದ ವ್ಯಾಪ್ತಿಯ ಸ್ಥಾನೀಯ ತರಕಾರಿ, ಹಣ್ಣು, ಹೂವು, ದವಸ–ಧಾನ್ಯಗಳ ಸಂರಕ್ಷಣೆ ಹಾಗೂ ಸಂವರ್ಧನೆಗೆ ಮುಂದಾಗುತ್ತೇವೆ.
- 'ಗ್ರಾಮದತ್ತ ಸಪ್ತಪದಿ' ಎಂಬ ಹೆಸರಿನ ಕಾರ್ಯಕ್ರಮದಡಿ ಶ್ರದ್ಧೆಯಿಂದ ಕೃಷಿಯಲ್ಲಿ ತೊಡಗಿಕೊಂಡಿರುವ ಯುವಕರಿಗೆ ಕಂಕಣ ಭಾಗ್ಯವನ್ನು ದೊರಕಿಸಿಕೊಡಲು ಅಡಿಯಿಡುತ್ತೇವೆ.

- 'ಕುಮಾರೀ ಪ್ರಶಿಕ್ಷಣ' ಎಂಬ ಹೆಸರಿನಲ್ಲಿ ಯುವತಿಯರಿಗೆ ಕೃಷಿಕ್ಷೇತ್ರಕ್ಕೆ ಹತ್ತಿರವಾಗಲು ಪ್ರೇರಣಾ ಕಾರ್ಯಕ್ರಮಗಳನ್ನು ನಿರಂತರವಾಗಿ ಸಂಯೋಜಿಸುತ್ತೇವೆ.
- ಕುಡಿಯುವ ನೀರಿಗೂ ಹಾಹಾಕಾರ ಎದ್ದಿದೆ. ಅಂತರಗಂಗೆ ಕಾಣದಷ್ಟು ದೂರ ಸರಿಯುತ್ತಿದ್ದಾಳೆ. ಈ ದೃಷ್ಟಿಯಿಂದ 'ಮಳೆ–ಇಳೆ' ಎಂಬ ಹೆಸರಿನ ಯೋಜನೆಯಡಿ ನಮ್ಮ ಕ್ಷೇತ್ರದ ವ್ಯಾಪ್ತಿಯಲ್ಲಿ ನೆಲ ಜಲ ಸಂರಕ್ಷಣೆಯ ಎಲ್ಲ ಆಯಾಮಗಳಲ್ಲಿ ಕಾರ್ಯೋನ್ಮುಖರಾಗಲಿದ್ದೇವೆ.
- ಅನ್ನದ ಬಟ್ಟಲು ಅಮೃತವಾಗಬೇಕು ಎನ್ನುವ ಮಹತ್ವಾಕಾಂಕ್ಷೆಯಿಂದ ನಮ್ಮ ಕ್ಷೇತ್ರದ ವ್ಯಾಪ್ತಿಯಲ್ಲಿ ಕೃಷಿಕರ ಶುದ್ಧ ಉತ್ಪನ್ನಗಳು ಗ್ರಾಹಕರಿಗೆ ತಲುಪುವ ದೃಷ್ಟಿಯಿಂದ 'ಸುಭಿಕ್ಷಾ ಮಳಿಗೆ'ಯನ್ನು ಪ್ರಾರಂಭಿಸುತ್ತೇವೆ.
- 'ನಿತ್ಯ ಸ್ಫೂರ್ತಿ' ಎಂಬ ಹೆಸರಿನಲ್ಲಿ ನಿರಂತರವಾಗಿ ನಿಯಮಿತವಾಗಿ ಕೃಷಿಕರಿಗೆ ಆತ್ಮಸ್ಥೈರ್ಯ ತುಂಬುವ ಕಾರ್ಯಕ್ರಮಗಳನ್ನು ನಮ್ಮ ಕ್ಷೇತ್ರದಲ್ಲಿ ಸಂಯೋಜಿಸುತ್ತೇವೆ.
- ಭಾರತೀಯ ಕೃಷಿ ಮೌಲ್ಯಗಳು ಮತ್ತು ಪದ್ಧತಿಗಳನ್ನು ಅನುಸರಿಸುತ್ತಿರುವ ನಮ್ಮ ವ್ಯಾಪ್ತಿಯ ಕೃಷಿಕರ ಕ್ಷೇತ್ರಕ್ಕೆ ತಿಂಗಳಿಗೊಮ್ಮೆ ಭೇಟಿ ಕೊಟ್ಟು ಅವರ ಸಾಧನೆಗಳನ್ನು ನಾಡಿನೆಲ್ಲೆಡೆ ಪರಿಚಯಿಸುವ 'ಧಾನ್ಯ ದೀವಿಗೆ' ಕಾರ್ಯಕ್ರಮವನ್ನು ಹಮ್ಮಿಕೊಳ್ಳುತ್ತೇವೆ.
- ನಮ್ಮ ಕ್ಷೇತ್ರದ ವ್ಯಾಪ್ತಿಯಲ್ಲಿ ಜರಗುವ ಜಾತ್ರಾ ಹಾಗೂ ವಿಶೇಷ ಉತ್ಸವಗಳಲ್ಲಿ ಸಾವಯವ ಕೃಷಿಕರ ಕುಟುಂಬವನ್ನು ಸನ್ಮಾನಿಸಲಾಗುವುದು.
- ಅಮೃತಾಹಾರವನ್ನು ನೀಡುವ 'ಅಮೃತ ದಾಸೋಹ' ಯೋಜನೆಯನ್ನು ನಮ್ಮ ಕ್ಷೇತ್ರದ ವ್ಯಾಪ್ತಿಯಲ್ಲಿ ಜರಗುವ ಜಾತ್ರಾ ಹಾಗೂ ವಿಶೇಷ ಉತ್ಸವಗಳಲ್ಲಿ ಅಸ್ತಿತ್ವಕ್ಕೆ ತರಲಾಗುವುದು.
- ಗ್ರಾಮೀಣರ ನಗರ ವಲಸೆಯನ್ನು ತಡೆಗಟ್ಟಲು 'ನಮ್ಮ ನೆಲ – ನಮ್ಮ ಬಲ' ಕಾರ್ಯಕ್ರಮದ ಮೂಲಕ ಗ್ರಾಮ ಜೀವನದ ಬಹು ಆಯಾಮಗಳನ್ನು ಗ್ರಾಮೀಣ ಯುವಕ ಯುವತಿಯರಿಗೆ ತಿಳಿಸಲಿದ್ದೇವೆ.

□

# ಪುಟ್ಟಯ್ಯ– ಸಂಗೀತ, ಸಾಹಿತ್ಯಗಳ ಮೇರು ಬೆಟ್ಟಯ್ಯ!

ಡಾ. ಆರ್.ಬಿ. ಚಿಲುಮಿ

**ಪ**ದ್ಮವಿಭೂಷಣ ಪ್ರಶಸ್ತಿ ಪುರಸ್ಕೃತರಾದ ಡಾ. ಪುಟ್ಟರಾಜು ಗವಾಯಿಗಳು ಕತ್ತಲೆಯಿಂದ ಬೆಳಕಿನತ್ತ ಸಾಗುವಂತಹ ಗತಿಶೀಲ ಪ್ರಣತಿಯಂತೆ ಧರಣಿಮಂಡಲದೊಳಗೆ ಬಹುಮುಖ ಕ್ಷೇತ್ರಗಳಲ್ಲಿ ಸಾಧನೆಯನ್ನು ಕೈಕೊಂಡು ಅದರಲ್ಲಿ ಯಶಸ್ಸು ಹೊಂದಿದವರು. ಸಂಗೀತ, ಸಾಹಿತ್ಯ, ಕಲೆ ಪತ್ರಿಕೋದ್ಯಮ ಮತ್ತು ಶಿಕ್ಷಣಗಳ ಮುಖಾಂತರ ದೇಶದ ಸಾಂಸ್ಕೃತಿಕ ಮೌಲ್ಯವನ್ನು ಉನ್ನತಕ್ಕೇರಿಸಿದ ಹಿರಿಯ ಘನತೆ ಪುಟ್ಟರಾಜರದು. ಶ್ರೀಗಳವರು (1914 2010) ತೊಂಬತ್ತಾರು ವರ್ಷಗಳ ತುಂಬು ಜೀವನವನ್ನು ಸಾಗಿಸಿ ನಮ್ಮ ಮಧ್ಯದಲ್ಲಿಯೇ ಇದ್ದು, ಅನಾಥರಿಗಾಗಿ, ಅಂಧ ಮಕ್ಕಳ ಬಾಳಿಗೆ ಬೆಳಕಾಗಿ, ನಾಡು–ನುಡಿಯ ಕೀರ್ತಿಗಾಗಿ, ಅವಿರತವಾದ ಸೇವೆಯನ್ನು ಅನವರತವಾಗಿ ದಣಿವಿಲ್ಲದೆ ಸೇವೆ ಸಲ್ಲಿಸಿದವರು. ಅಂಥ ಮಹಾನುಭಾವನ ಜೀವನ ಅನುಕರಣೀಯ ಮತ್ತು ಆದರ್ಶಮಯವಾದುದು. ಅವರೊಬ್ಬ ವ್ಯಕ್ತಿಯಲ್ಲ ಶಕ್ತಿ! ಅವರ ಜೀವನ–ಸಾಹಿತ್ಯ ಆಧುನಿಕ ಕನ್ನಡ ಸಾಹಿತ್ಯ ಮತ್ತು ಸಂಗೀತ ಕ್ಷೇತ್ರಕ್ಕೆ ಕೊಟ್ಟ ಕೊಡುಗೆ ಅಪಾರ–ಅನನ್ಯವಾದುದು. ಅವರು ಸ್ವತಃ ಅಂಧರಾಗಿದ್ದರೂ ಅಂಧರಿಗೆ ಬೆಳಕಾಗಿದ್ದವರು. ಕತ್ತಲೆಯಿಂದ ಬೆಳಕಿನೆಡೆಗೆ ಕರೆದೊಯ್ದವರು. ಬದುಕಿನಲ್ಲಿ ಆಕಸ್ಮಿಕವಾಗಿ ಅಂಧರಾಗಬೇಕಾದ ಸಂದರ್ಭ ಹಾಗೂ ತಮ್ಮ ಪರಿಮಿತಿಗಳ ನಡುವಿನಲ್ಲಿಯೇ ಸ್ವಂತಿಕೆ ಬೆಳೆಸಿಕೊಂಡು ಸಾಹಿತ್ಯ, ಸಂಗೀತ, ರಂಗಕಲೆ ಮತ್ತು ಸಾಮಾಜಿಕ ರಂಗಗಳಲ್ಲಿ ನಿರಂತರ ತಮ್ಮನ್ನು ತೊಡಗಿಸಿಕೊಂಡು ಬಂದ ದಿವ್ಯ ಪುರುಷರು, 'ನಡೆದಾಡುವ ದೇವರು' ಎಂದೇ ಹೆಸರುವಾಸಿಯಾಗಿರುವ ಪುಟ್ಟರಾಜರು ಕನ್ನಡ ನಾಡು–ನುಡಿ, ಸಂಸ್ಕೃತಿ, ಧರ್ಮ ಮತ್ತು ಸಾಹಿತ್ಯ ರಚನೆ ಹಾಗೂ ಪ್ರಸಾರಕಾರ್ಯದಲ್ಲಿ ಮುಂಚೂಣಿಯಲ್ಲಿದ್ದವರು. ಪುರಾಣ ಕಾವ್ಯಗಳನ್ನು ರಚಿಸಿ ನಾಟಕ ಮಂಡಳಿಯನ್ನು ಕಟ್ಟಿ ಪೋಷಿಸಿ ಬೆಳೆಸಿದವರು. ಇತರರಿಗೆ ಮಾರ್ಗದರ್ಶಕರಾಗಿರುವ ಪೂಜ್ಯರದು ಅಪರೂಪದ ವ್ಯಕ್ತಿತ್ವ ಮಾದರಿಯಾಗಿತ್ತು. ಹುಟ್ಟು ಕುರುಡರಾದರೂ ತಮ್ಮ ಅಂತಃಚಕ್ಷುವಿನಿದ ಸಮಾಜದ ವ್ಯವಸ್ಥೆಯನ್ನರಿತು, ಸದಾ ಕಾರ್ಯತತ್ಪರರಾಗಿ, ಸಮಾಜೋ–ಧಾರ್ಮಿಕ– ಸಮಾಜಮುಖಿ ಕಾರ್ಯಗಳತ್ತ ಗಮನ ಹರಿಸಿರುವುದಕ್ಕೆ ಅವರ ಕನಸಿನ ಕೂಸಾದ 'ಶ್ರೀ ವೀರೇಶ್ವರ ಪುಣ್ಯಾಶ್ರಮ' ಇಂದು ಬೃಹದಾಕಾರವಾಗಿ ಹೆಮ್ಮರವಾಗಿ ಬೆಳೆದು ನಿಂತಿದೆ. ಅನ್ನದಾಸೋಹ, ಜ್ಞಾನದಾಸೋಹ, ಭಕ್ತಿ (ಸೇವಾ) ದಾಸೋಹ ಈ ತ್ರಿವಿಧ

ದಾಸೋಹಗಳ ಮುಖಾಂತರ ಅಂಧ, ಅಂಗವಿಕಲ ಚೇತನ ಅನಾಥ ಮಕ್ಕಳಿಗೆ ಶ್ರೀರಕ್ಷೆಯನ್ನಿತ್ತು, ಅವರ ಬಾಳಿಗೊಂದು ಖಚಿತರೂಪವನ್ನು ಕೊಟ್ಟದ್ದು ಯಾರಾದರೂ ಮೆಚ್ಚುವಂತಹದ್ದು. ಯಾವುದೇ ಸಂಸ್ಥೆಯಾಗಲಿ, ಸರಕಾರವಾಗಲಿ ಮಾಡಲಾರದ ಕಾರ್ಯವನ್ನು ಆಗುಮಾಡಿದ ಪುಣ್ಯಶಾಲಿಗಳವರು. ದೈಹಿಕ ಅಂಗಗಳಲ್ಲಿ ಪ್ರಮುಖ ಜ್ಞಾನೇಂದ್ರಿಯಾದ ಕಣ್ಣಿನ ದೃಷ್ಟಿಯಿಂದ ದೂರವಾಗಿದ್ದರೂ ಅದು ಅವರ ಸಾಧನೆಗೆ ಅಡೆತಡೆಯಾಗಲಿಲ್ಲ. ತಮ್ಮಲ್ಲಿರುವ ಆತ್ಮವಿಶ್ವಾಸ, ದೃಢ ಸಂಕಲ್ಪ ಹಾಗೂ ನಿರಂತರ ಪರಿಶ್ರಮಗಳೊಂದಿಗೆ ಅದ್ವಿತೀಯ ಕಾರ್ಯಗಳನ್ನು ಸಮಾಜಕ್ಕೆ ತೋರಿಸಿಕೊಟ್ಟ ಕ್ರಿಯಾಶೀಲ ವ್ಯಕ್ತಿತ್ವವನ್ನು ಡಾ. ಪುಟ್ಟರಾಜರು ಹೊಂದಿದ್ದರು. ಮರ್ತ್ಯಲೋಕದ ಅವಾಂತರಗಳನ್ನು ಪರಿಹರಿಸಲು ಅವತರಿಸಿದಂತಹ ಮಹಾ ಶಕ್ತಿರೂಪದ ವಿಭೂತಿಪುರುಷರು; ಅಂಧ–ಅಂಗವಿಕಲ ಚೇತನ, ಅನಾಥ ಜೀವಿಗಳ ಬಾಳಿಗೆ ಆಶಾಕಿರಣವಾಗಿ, ಬದುಕಿಗೆ ಬೆಳಕು ನೀಡುವ ಜ್ಯೋತಿಯಾದವರು ಡಾ. ಪುಟ್ಟರಾಜ ಗವಾಯಿಗಳು, ಅವರದು ಹೋರಾಟದಿಂದ ಕೂಡಿದ ಸಾರ್ಥಕ ಬದುಕು. ಪಂಚಾಕ್ಷರಿ ಗವಾಯಿಗಳು ಪರಮಗುರುವಿನ ಮಾರ್ಗದರ್ಶನ ದಲ್ಲಿ ಪರಮ ಶಿಷ್ಯರಾಗಿ ಅವರು ಸ್ಥಾಪಿಸಿದ ಸಂಚಾರಿ ಸಂಗೀತ ಪಾಠಶಾಲೆಯನ್ನು ಬೃಹತ್ ಶಿಕ್ಷಣ ಸಂಸ್ಥೆಯನ್ನಾಗಿ ಪರಿವರ್ತಿಸಿದವರು. ಈ ಸಂಸ್ಥೆಯಲ್ಲಿ ಅಂಧ, ಅನಾಥ, ಅಂಗವಿಕಲಚೇತನ ಮಕ್ಕಳಿಗೆ ಆಶ್ರಯವಿತ್ತು ಅನ್ನ, ವಿದ್ಯೆ, ಸಂಗೀತ ಅಧ್ಯಯನವನ್ನು ನೀಡುವುದರೊಂದಿಗೆ ಪ್ರತಿಯೊಬ್ಬ ವ್ಯಕ್ತಿಯನ್ನು ಸಂಪನ್ಮೂಲ ಶಕ್ತಿಯಾಗಿ ರೂಪಿಸಿದ ರೂವಾರಿಗಳು ಡಾ. ಪುಟ್ಟರಾಜರು. ನಾಟಕ ಮಂಡಳಿ, ಪಾಠಶಾಲೆ, ಶಾಲಾ ಕಾಲೇಜು, ಮಹಾವಿದ್ಯಾಲಯಗಳನ್ನು ಸ್ಥಾಪಿಸಿ ಅವುಗಳ ಮೂಲಕ ಶಿಕ್ಷಣವನ್ನು ನೀಡುವುದರೊಂದಿಗೆ ಸಾಮಾಜಿಕ ಸೇವೆಯನ್ನು ನಿರಂತರವಾಗಿ ಮಾಡುತ್ತ ಮುಂದುವರಿಸಿ ಕೊಂಡು ಬಂದವರು. ಡಾ. ಪುಟ್ಟರಾಜರು 'ವೀರೇಶ್ವರ ಪುಣ್ಯಾಶ್ರಮದಲ್ಲಿ ಪಂಚಾಕ್ಷರ ಮುದ್ರಣಾಲಯ ವನ್ನು ಸ್ಥಾಪಿಸಿ 'ಪಂಚಾಕ್ಷರ ಪ್ರಕಾಶ'ವೆಂಬ ಮಾಸ ಪತ್ರಿಕೆಯನ್ನು ಪ್ರಕಟಿಸಿ, ಜನತೆಗೆ ನೀಡುವುದರೊಂದಿಗೆ ಭಾರತ ದೇಶದಲ್ಲಿಯೇ ಅಂಧರೊಬ್ಬರು ಪತ್ರಿಕೆಯನ್ನು ನಡೆಸುವ ದಾಖಲಾತ್ಮಕ ಚರಿತ್ರೆಯನ್ನು ನಿರ್ಮಿಸಿದ್ದಾರೆ. ವೀರೇಶ್ವರ ಪುಣ್ಯಾಶ್ರಮವನ್ನು ಗದಗದಲ್ಲಿಯಷ್ಟೇ ಕೆ ಇಡೀ ಭಾರತೀಯ ಸಾಂಸ್ಕೃತಿಕ ಸಂಸ್ಥೆಯಾಗಿ, ಸಂಗೀತ ಕ್ಷೇತ್ರದ ಪ್ರಾತಿನಿಧಿಕ ಕೇಂದ್ರವಾಗಿ ನಿರ್ಮಿಸಿ ಅದರ ಮೂಲಕ ಸಂಗೀತಗಾರರನ್ನು, ಕಲಾವಿದರನ್ನು, ಪ್ರವಚನ ಕೀರ್ತನಕಾರರನ್ನು ರೂಪಿಸಿ ನಾಡಿನಲ್ಲಿ ವೀರೇಶ್ವರ ಪುಣ್ಯಾಶ್ರಮದ ಕೊಡುಗೆಯನ್ನು ದಾಖಲಿಸಿದ್ದಾರೆ. ಹಾಗೆಯೇ 'ಶ್ರೀ ಕುಮಾರೇಶ್ವರ ಕೃಪಾ ಪೋಷಿತ ಲಿಂ. ಪಂಚಾಕ್ಷರಿ ಗವಾಯಿಗಳವರ ನಾಟ್ಯ ಸಂಘ'ದ ಉಗಮ ಹಾಗೂ ಅದರ ಬೆಳವಣಿಗೆಗೆ ವೃತ್ತಿ ರಂಗಭೂಮಿಯಲ್ಲಿ ನಾಟಕ ಮಂಡಲಿ ಸ್ಥಾಪಿಸಿದ ಕೀರ್ತಿವಿಶಾರದರು. ಅವರು ಶಿಕ್ಷಣ ಪ್ರಸಾರ ಮಾಡುವಲ್ಲಿಯೂ ಸಫಲವಾದವರು. ಇವರು ಯಾವುದಕ್ಕೂ ಸರಕಾರದ ಮೊರೆ ಹೋಗದೆ ಭಿಕ್ಷಾಟನೆಯ ಮೂಲಕವಾಗಿಯೇ ಅಚ್ಚುಕಟ್ಟಾಗಿ ಶಿಸ್ತು ಬದ್ಧತೆಯಿಂದ ನಡೆಸಿಕೊಂಡು ಬಂದದ್ದು ಗಮನಾರ್ಹವಾದುದು. ಅವರು ರಚಿಸಿದ ಸಾಹಿತ್ಯ ಕೃಷಿ ಅನುಪಮ ಮತ್ತು

ಅಪಾರವಾದುದು. 25ಕ್ಕೂ ಮಿಕ್ಕು ಉದ್ಗ್ರಂಥಗಳನ್ನು ದೇಶ–ನಾಡು–ನುಡಿಗೆ ನೀಡಿ ಮಹದುಪಕಾರ ಮಾಡಿದ್ದಾರೆ. ಇಂತವರ ಬದುಕು–ಬರಹದ ಮೇಲೆ ಪ್ರಬಂಧ, ಮಹಾಪ್ರಬಂಧ, ಕವನ, ಲೇಖನ, ಚರಿತ್ರೆ ಮುಂತಾಗಿ ಅನೇಕ ಪುಸ್ತಕಗಳು ಪ್ರಕಟಗೊಂಡಿದ್ದು; ಅವರ ಹಿರಿಮೆ–ಗರಿಮೆಯನ್ನು ಬಾನೆತ್ತರಕ್ಕೆ ಹಾರಿಸಿವೆ. ಅವರು ರಚಿಸಿದ ಗದ್ಯ, ಪದ್ಯ, ಚರಿತ್ರೆ, ನಾಟಕ, ಸಂಗೀತ, ಚೀಜು, ಪುರಾಣ ಕಾವ್ಯಗಳು ಪ್ರಕಟವಾಗಿದ್ದು ನಾಡಿನ ಯುವಕರಿಗೆ, ಸಾಹಿತಿಗಳಿಗೆ, ಸಾಧಕರಿಗೆ ದಾರಿದೀಪ, ತೋರುದೀಪ ಹಾಗೂ ಮಾರ್ಗದರ್ಶಿಕೆಗಳಾಗಿವೆ. ಅವರ ಸಮಗ್ರ ಜೀವನ–ಸಂಗೀತ–ಸಾಹಿತ್ಮಿಕ ಸಾಧನೆಯನ್ನು ಬಣ್ಣಿಸಲಾರದೇ ಕೇವಲ ಸಂಗೀತ ಮತ್ತು ಸಾಹಿತ್ಯಕ್ಷೇತ್ರಕ್ಕೆ ಕೊಟ್ಟ ಕೊಡುಗೆಯನ್ನು ಸ್ಥೂಲವಾಗಿ ಕೊಡಲು ಈ ಲೇಖನದಲ್ಲಿ ನಿರೂಪಿಸಲು ಪ್ರಯತ್ನವನ್ನು ಮಾಡಲಾಗಿದೆ.

**ಡಾ. ಪುಟ್ಟರಾಜರ ಜೀವನ–ಪರಿಚಯ**

'ಪಂಡಿತ ಡಾ. ಪುಟ್ಟರಾಜ ಗವಾಯಿಗಳು' ಎಂಬುದು ಇವರ ಕಾವ್ಯ ನಾಮದಿಂದಲೇ ಸಂಗೀತ–ಸಾಹಿತ್ಯ ಕ್ಷೇತ್ರದಲ್ಲಿ ಪ್ರಸಿದ್ಧರಾಗಿರುವ ಗವಾಯಿಗಳವರ ಪೂರ್ಣ ಹೆಸರು ಪುಟ್ಟಯ್ಯ ದೇವಯ್ಯ ವೆಂಕಟಾಪುರಮಠ. ಗವಾಯಿಗಳವರ ಮನೆತನಕ್ಕೆ 'ವೆಂಕಟಾಪೂರಮಠ' ಎಂಬ ಹೆಸರು ಪ್ರಾಪ್ತವಾದುದು 'ವೆಂಕಟಾಪೂರ' ಗ್ರಾಮದಿಂದ. ಇದು ಹಾವೇರಿ ಜಿಲ್ಲೆಗೆ ಸೇರಿರುವ ಮತ್ತು ಮಲೆನಾಡಿನ ಪ್ರಾಕೃತಿಕ ಪರಿಸರವನ್ನು ಹೊಂದಿದ ಒಂದು ಚಿಕ್ಕ ಹಳ್ಳಿ. ಗವಾಯಿಗಳ ಪೂರ್ವಿಕರು ವೆಂಕಟಾಪುರದಿಂದ 'ದೇವರ ಹೊಸಪೇಟೆಗೆ' ಬಂದು ನೆಲೆಸಿದರು. ಆದರೆ ವೆಂಕಟಾಪೂರ ಎಂಬ ಊರಿನಿಂದ ಬಂದವರಾದುದರಿಂದ ಅಲ್ಲಿಯ ಜನತೆ ವೆಂಕಟಾಪೂರ ಮಠ ಎಂದು ಕರೆಯುತ್ತ ಬಂದರು. ತಮ್ಮ ಊರಲ್ಲಿ ಅವರನ್ನು ಗುರುಗಳೆಂದು ಗೌರವ ಸಲ್ಲಿಸಿದರು. ಅಂದರೆ ವೆಂಕಟಾಪೂರ ಎಂಬ ಊರಿನ ರೂಪ ಮತ್ತು ಹಿರೇಮಠ ಮನೆತನದ ಮಠ ಎಂಬ ರೂಪವು ಸಂಯುಕ್ತಗೊಂಡು ಅವರ ಮನೆತನದ ಹೆಸರು ಹೊಸಪೇಟೆಯಲ್ಲಿ 'ವೆಂಕಟಾಪೂರ ಮಠ' ಎಂಬುದಾಗಿ ಗುರುತಿಸಲ್ಪಟ್ಟಿತು. ಅದೇ ಹೆಸರು ಇಂದಿಗೂ ಉಳಿದುಕೊಂಡು ಬಂದಿದೆಯಂತೆ. ವೀರಶೈವ ಜಂಗಮರಾದು ದರಿಂದ ದೀಕ್ಷೆ ಕೊಡುವುದು, ಧರ್ಮದ ಆಚಾರ–ವಿಚಾರಗಳು ದೀಕ್ಷೆ ಮತ್ತಿತರ ಧಾರ್ಮಿಕ ವಿಧಿ–ವಿಧಾನಗಳನ್ನು ನಡೆಸಿಕೊಂಡು ಊರಿನ ಹಿತ ಕಾಪಾಡಿಕೊಂಡು ಬಂದವರು. ಸಿದ್ಧಯ್ಯ ಹಿರೇಮಠ. ಡಾ. ಪುಟ್ಟರಾಜ ಅಜ್ಜ. ತಂದೆ ರೇವಣಯ್ಯ ತಾಯಿ ಸಿದ್ಧಮ್ಮ ತಾಯಿಯ ತವರೂರು ಹಾವೇರಿ ಜಿಲ್ಲೆಯ ಕರ್ಜಗಿ ಹತ್ತಿರವಿರುವ ದೇವಗಿರಿ ಗ್ರಾಮ. ಸಿದ್ಧಮ್ಮನಿಗೆ ಚಂದ್ರಶೇಖರನೆಂಬ ಸಹೋದರನಿದ್ದನು. ಮನೆಯ ಕಾರ್ಯಭಾರವನ್ನು ಇವನೇ ನಿಭಾಯಿಸುತ್ತಿದ್ದನು. ಸಿದ್ಧಮ್ಮನು ಕ್ರಿ.ಶ. 1914ನೆಯ ಮಾರ್ಚ್ ತಿಂಗಳಿನ 2ನೆಯ ದಿನಾಂಕದಂದು ಪುಟ್ಟಯ್ಯನಿಗೆ ಜನ್ಮ ನೀಡುತ್ತಾಳೆ (ದೇವಗಿರಿಯಲ್ಲಿ). ನಾಡು–ನುಡಿ ಸಂಗೀತಲೋಕಕ್ಕೆ ಮಹಾಶಕ್ತಿಯನ್ನು ನೀಡುವ ಪುಣ್ಯಪುರುಷನನ್ನು ಹೆತ್ತ ಭಾಗ್ಯ ಸಿದ್ಧಮ್ಮನದಾದರೆ, ಆಶ್ರಯವಿತ್ತು ಜನ್ಮಭೂಮಿ ಎನಿಸಿಕೊಂಡ ಖ್ಯಾತಿಯು ದೇವಗಿರಿಯ

ದಾಯಿತೆಂದು ಹೇಳಬೇಕು. ಮಗುವಿಗೆ ತಾಯಿಯ ಮನೆತನದವರು 'ಪುಟ್ಟಯ್ಯ' ಎಂದುದಾಗಿ ನಾಮಕರಣ ಮಾಡಿ ಹೆಸರಿಟ್ಟರು. ಆದರೆ ತಂದೆಯ ಮನೆಯವರು 'ಚೆನ್ನಬಸವಯ್ಯ' ಎಂದು ಕರೆಯುತ್ತಿದ್ದರಂತೆ. ಆದರೆ ಗವಾಯಿಗಳವರ ಹೆಸರು ಸಂಗೀತ–ಸಾಹಿತ್ಯ ಕ್ಷೇತ್ರದಲ್ಲಿ ತಾಯಿಯವರು ಕರೆದ 'ಪುಟ್ಟಯ್ಯ, ಪುಟ್ಟಸ್ವಾಮಿ, ಪುಟ್ಟಯ್ಯಗವಾಯಿ, ಪುಟ್ಟರಾಜ ಗವಾಯಿಗಳು' ಎಂದೇ ಪ್ರಚಾರ ಮತ್ತು ಪ್ರಸಿದ್ಧಿ ಪಡೆಯಿತು. ಮುಂದೆ 'ಪುಟ್ಟರಾಜ ಗವಾಯಿಗಳು' ಎಂದೇ ಜಗತ್ತಿನಾದ್ಯಂತ ಸುಪ್ರಸಿದ್ಧಿಯನ್ನು ಪಡೆದ ಭಾಗ್ಯವಂತ.

ಸಾದಗಪ್ಪಾದ ಮಧ್ಯಮ ಗಾತ್ರದ ಮಿಂಚಿನ ಕಣ್ಣು ನೋಟದ ಮುದ್ದಾದ ಮಗು ಮುಂದೆ ಆರೇ ತಿಂಗಳುಗಳಲ್ಲಿ ಲೋಕದ ಜಂಜಾಟವನ್ನು ಕಣ್ಣಿಂದ ನೋಡುವುದೇ ಬೇಡವೆಂದು ಶಾಶ್ವತವಾಗಿ ದೃಷ್ಟಿಗಳನ್ನು ಕಳೆದುಕೊಂಡ ದಿನ ಪುಟ್ಟಯ್ಯನ ಬದುಕಿನ ಕರಾಳ ದಿನವಾಗಿತ್ತು. ಕಣ್ಣು ನೋವಿಗೆ ನಾಟಿ ವೈದ್ಯನ ಮೂಢ ನಂಬಿಕೆಯ ಸಲಹೆಯಂತೆ ತಾಯಿ ಸಿದ್ಧಮ್ಮನು ಕಣ್ಣಿಗೆ ಪರೆ ಬಂದಿರುವುದನ್ನು ಆ ನಾಟಿ ವೈದ್ಯನಿಗೆ ಹೇಳಿದ್ದೇ ಅಪರಾಧವಾಯಿತೇನೋ ಎಂಬಂತೆ ದುರ್ಘಟನೆ ಸಂಭವಿಸುವಂತಾಯಿತು. ವೈದ್ಯ ಹೇಳಿದ್ದೇನೆಂದರೆ ಕಣ್ಣೊಳಗೆ ತೊನಸಿ ಹುಳವನ್ನು ಬಿಡಲು ಸೂಚಿಸಿದನಂತೆ. ತಾಯಿ ಸಿದ್ಧಮ್ಮ ಕಣ್ಣಿಗೆ ತೊನಸಿ ಹುಳ ಹಾಕಿ ಮಗನ ಭವಿಷ್ಯವನ್ನೇ ಅಂಧಕಾರ ಮಾಡಿಬಿಟ್ಟಳು. ಆದರೆ ಶಿವನಿಚ್ಛೆಯೇ ಬೇರೆಯಾಗಿತ್ತು. ಅಂಗವೈಕಲ್ಯ ಮನುಷ್ಯನ ಸಾಧನೆಗೆ ಎಂದೂ ತೊಡಕಲ್ಲ ಎಂಬುದಕ್ಕೆ ಪುಟ್ಟಯ್ಯನನ್ನು ಸಾಕ್ಷಿ ಮಾಡಿ ಲೋಕದ ಜನರಿಗೆ ತೋರಿಸಬೇಕಾಗಿದ್ದಂತೆ ಕಾಣುತ್ತದೆ. ಯಾಕೆಂದರೆ ಯಾವ ತಾಯಿಯೂ ತನ್ನ ಕರುಳಿನ ಕುಡಿ ಶಾಶ್ವತವಾಗಿ ಅಂಧನಾಗಲಿ ಎಂದು ಬಯಸಲಾರಳು. ಮುಂದೆ ಪುಟ್ಟಯ್ಯ ಶಿವನ ಇಚ್ಛೆಯಂತೆಯೇ ಪುಟ್ಟನು, ಪುಟ್ಟರಾಜ, ಪುಟ್ಟರಾಜ ಗವಾಯಿಯಾದ. ಪುಟ್ಟರಾಜ ಗವಾಯಿ ಸಂಗೀತ ವಿದ್ವಾನ್, ಸಾಹಿತ್ಯ ದಿಗ್ಗಜ, ಮೇರು ಬೆಟ್ಟಯ್ಯ, ಬಹುಭಾಷಾ ಬಲ್ಲಿದ – ಪಂಡಿತನಾದ, ಡಾ. ಪುಟ್ಟರಾಜ, ಪದ್ಮಭೂಷಣ, ನಾಡೋಜನಾದ, ಮಹಾಮಹೋಪಾಧ್ಯಾಯನಾದ. ಪ್ರಾಯಶಃ ಮನುಷ್ಯ ದೇಹಧಾರಿಯೊಬ್ಬನು ಕಣ್ಣಿಲ್ಲದಿದ್ದರೂ ಸಾಹಿತ್ಯ–ಸಂಗೀತ ಸಾಮ್ರಾಟನಾಗುವುದು ಹೇಗೆ ಎಂಬುದನ್ನವನು ತೋರಿಸಿಕೊಟ್ಟ ಪ್ರತಿಭಾಶಾಲಿಯಾದ. ಅವರು ಮಾತ್ರ ಮಾನವಲೋಕದ ಅದ್ಭುತ ಶಕ್ತಿಯಂತೂ ಆಗಿದ್ದರೆಂಬುದರಲ್ಲಿ ಸಂದೇಹವೇ ಇಲ್ಲ. ಅವರು ಕುರುಡುತನವನ್ನು ಒಂದು ಕೊರತೆಯೆಂದುದಾಗಿ ಯಾವತ್ತೂ ಭಾವಿಸಲೇ ಇಲ್ಲವೆನ್ನಿ. ಕಣ್ಣಿದ್ದೂ ಕುರುಡರಂತಿರುವಂತಹ ಎಷ್ಟು ಜನ ನಮ್ಮ ಮಧ್ಯದಲ್ಲಿಲ್ಲ? ಆದರೆ ಪುಟ್ಟರಾಜರಿಗೆ ಹೊರಗಣ್ಣಿಲ್ಲದಿದ್ದರೂ ಜ್ಞಾನಶಕ್ತಿಯೆಂಬ ಒಳಗಣ್ಣು ಅತೀ ಹೆಚ್ಚು ಪ್ರಬಲವಾಗಿತ್ತು. ಹೊರ ಜಗತ್ತಿನ ಹಿಂಸೆ, ಕ್ರೌರ್ಯ, ಮೋಸ, ವಂಚನೆ, ಸುಳ್ಳು, ದುರಾಚಾರ, ಭ್ರಷ್ಟಾಚಾರಗಳಂತಹ ಕೆಟ್ಟ ಗುಣಗಳುಳ್ಳ ಮನುಷ್ಯರ ಸಹವಾಸ ಇವರಿಗಾಗಲಿಲ್ಲ. ಅಂತೆಯೇ ಇವರ ಸಾಧನಾಮಾರ್ಗ ಸುಗಮವಾಗಿ ಸಾಗಲು ನೆರವಾಯಿತೆಂದೇ ಹೇಳಬೇಕು.

ಪುಟ್ಟರಾಜರು ತಮ್ಮ 'ಶ್ರೀ ಕುಮಾರ ವಿಲಾಸ ಕಾವ್ಯಂ' ಎಂಬ ಸಂಸ್ಕೃತ ಮಹಾಕಾವ್ಯದಲ್ಲಿ ಅಂಧರ ಬಗೆಗೆ ಕೆಲವು ಸ್ವಾರಸ್ಯಕರ ಮಾತುಗಳನ್ನು ಹೇಳಿದ್ದಾರೆ. ಕುರುಡನು ದಿವ್ಯ ರತ್ನವನ್ನು ಹುಡುಕುವುದು ತಿಳಿಗೇಡಿತನ ಎನಿಸಬಹುದಾದರೂ, ಕುರುಡನ ಕೈಯಲ್ಲಿರುವ ದೀಪ ಉಳಿದವರಿಗೆ ಅಂದರೆ ಕಣ್ಣಿದ್ದವರಿಗೆ ದಾರಿದೀಪವಾಗುವು ದಿಲ್ಲವೆ? ಕಣ್ಣು ಇದ್ದವರು ಸಜ್ಜನರನ್ನು ಕಂಡೂ ಕಾಣದಂತಿರುತ್ತಾರೆ. ಆದರೆ ಕುರುಡರು ದುರ್ಜನರನ್ನು, ಸಜ್ಜನರನ್ನು ಯಾವುದೇ ಭೇದಭಾವವಿಲ್ಲದೆ ಒಂದೇ ರೀತಿಯಾಗಿ ಕಾಣುತ್ತಾರೆ. ಇದು ಎಂಥ ಮುತ್ತಿನಂತಹ ಮಾತಲ್ಲವೆ?

**ಮತ್ತೊಂದು ಆಘಾತ ಘಟಿಸಿದ್ದು**

ಎಳೆಯ ಇದ್ದೊಬ್ಬ ಬಾಲಕನನ್ನು ಎದುರಿಗಿಟ್ಟುಕೊಂಡು ಜೀವನ ಸಾಗಿಸುತ್ತಿದ್ದಂಥ ಸಿದ್ಧಮ್ಮನ ಬದುಕಿನಲ್ಲಿ ಮತ್ತೊಂದು ಬಿರುಗಾಳಿ ಬೀಸಿತು. ಆಗ ಪುಟ್ಟಯ್ಯನಿಗೆ ಎರಡು ವರ್ಷಗಳಾಗಿದ್ದವು. ತಂದೆ ರೇವಣಯ್ಯನವರಿಗೆ ಬಲವಾದ ಕಾಯಿಲೆಯೊಂದು ಆವರಿಸಿತು. ಗುಣವಾಗದ ರೋಗದಿಂದ ಬಳಲಿ ಬೆಂಡಾದ ರೇವಣಯ್ಯನವರು 26.11.1916 ರಂದು ಹೊಸಪೇಟೆಯಲ್ಲಿ ನಿಧನರಾದರು. ರೇವಣಯ್ಯನವರ ಅಗಲುವಿಕೆಯಿಂದ ಸಿದ್ಧಮ್ಮನ ಕೌಟುಂಬಿಕ ಪರಿಸ್ಥಿತಿಯು ಗಂಭೀರ ಮತ್ತು ಅಸಹಾಯಕತೆಯನ್ನು ಹೊಂದಿತು. ಇದರಿಂದಾಗಿ ಜೀವನ ನಿರ್ವಹಣೆ ಕಠಿಣವಾಯಿತು. ಈ ಸಂದರ್ಭದಲ್ಲಿ ಬಾಲಕ ಪುಟ್ಟಯ್ಯನಿಗೆ ಮತ್ತು ತಾಯಿ ಸಿದ್ಧಮ್ಮನಿಗೆ ಆಶ್ರಯವಾಗಿ ಬಂದವರು ಅವರ ಸಹೋದರನಾದ ಚಂದ್ರಶೇಖರಯ್ಯನವರು. ಹೊಸಪೇಟೆಯಿಂದ ಸಿದ್ಧಮ್ಮ ಹಾಗೂ ಎರಡು ವರ್ಷದ ಪುಟ್ಟಯ್ಯನವರನ್ನು ಕರೆದುಕೊಂಡು ತಮ್ಮೂರಾದ ದೇವಗಿರಿಯ ಮನೆಯಲ್ಲಿರಿಸಿಕೊಂಡು ಪೋಷಕರಾಗಿ, ಬಾಲಕ–ಪುಟ್ಟಯ್ಯನ ಜೀವನ ಜವಾಬ್ದಾರಿಯ ಹೊಣೆಯನ್ನು ತಮ್ಮ ಹೆಗಲಿಗೆ ಹೊತ್ತುಕೊಂಡರು. ಇದು ಇಬ್ಬರಿಗೂ ಅನಿವಾರ್ಯವಾಗಿತ್ತು. ತವರೂರೇ ಸಿದ್ಧಮ್ಮನ ಬದುಕಿಗೆ ಆಸರೆಯಾಯಿತು. ಚಂದ್ರಶೇಖರಯ್ಯ ಬೇಸಾಯಗಾರಿಕೆಯೊಂದಿಗೆ ಸಂಗೀತಾಭ್ಯಾಸ ಮಾಡುವವನಾಗಿದ್ದ. ಈತನ ಗುರುಗಳು ಪಂಚಾಕ್ಷರಿ ಗವಾಯಿಗಳು. ಚಂದ್ರಶೇಖರಯ್ಯ ಶ್ರೇಷ್ಠ ಸಂಗೀತಗಾರರು. ತಮ್ಮ ಸುಮಧುರ ಕಂಠದಿಂದ ಹಾಡುವ ಕಲೆಯಲ್ಲಿ ನಿಪುಣನಾಗಿದ್ದುದರಿಂದ ಜನರು ಇವನನ್ನು ಒಳ್ಳೆಯ ಗಾಯಕರೆಂದು ಗೌರವಿಸುತ್ತಿದ್ದರು. ಇವರು ವೀರಶೈವ ಧರ್ಮದ ಆಚಾರ–ವಿಚಾರಗಳಲ್ಲಿ ಅಪಾರ ನಿಷ್ಠೆಯುಳ್ಳವರಾಗಿದ್ದ ಇವರು ಹಾರ್ಮೋನಿಯಂ ನುಡಿಸುವಲ್ಲಿ ಸಿದ್ಧಹಸ್ತರಾಗಿದ್ದರು. ಸಂಗೀತ–ಸಾಹಿತ್ಯಗಳಲ್ಲಿ ಅಭಿರುಚಿ ಹೊಂದಿದ ಚಂದ್ರಶೇಖರಯ್ಯ ಪಂಡಿತ ಪಂಚಾಕ್ಷರಿ ಗವಾಯಿಗಳವರ ಶಿಷ್ಯರಾಗಿದ್ದರು. ಚಂದ್ರಶೇಖರಯ್ಯನವರು ದೇವಗಿರಿ ಗ್ರಾಮದಲ್ಲಿರುವ ಜನರಿಗೆ ಭಜನೆಯ ಹಾಡುಗಳನ್ನು, ತತ್ತ್ವಪದ ಅಥವಾ ಅನುಭಾವ ಗೀತೆಗಳನ್ನು ಹೇಳಿಕೊಡುತ್ತ ಜನರಲ್ಲಿ ಸಂಗೀತದ ಬಗ್ಗೆ ಆಸಕ್ತಿಯನ್ನು ಮೂಡಿಸಿ ಭಜನಾ ಮೇಳವನ್ನು ಕಟ್ಟಿದರು. ಇಂಥ ಪರಿಸರದಲ್ಲಿ ಬಂದವರು ತಾಯಿ

ಸಿದ್ಧಮ್ಮ ಮತ್ತು ಬಾಲಕ ಪುಟ್ಟಯ್ಯ. ಈ ಬಾಲಕನ ಮೇಲೆ ಚಂದ್ರಶೇಖರ ಸೋದರಮಾವನ ಪ್ರಭಾವ ಬೀರಿದ್ದು ದಿಟದ ಮಾತು. ಚಂದ್ರಶೇಖರಯ್ಯನೂ ಬಾಲಕ ಪುಟ್ಟಯ್ಯನ ವ್ಯಕ್ತಿತ್ವವನ್ನು ರೂಪಿಸುವುದರ ಕುರಿತು ಚಿಂತಾಮಗ್ನರಾಗಿದ್ದರು. ಆಗಾಗ ಪುಟ್ಟಯ್ಯನಿಗೆ ಸಂಗೀತದ ಪರಿಚಯ ಮಾಡಿಕೊಡುತ್ತ ವಿದ್ಯಾವಂತನನ್ನಾಗಿ ಮಾಡಬೇಕೆಂಬ ಹಂಬಲ ಉಂಟಾಯಿತು. ಹಾಡು ಹಾಡುತ್ತ ಕಲಿತು, ಚುರುಕುಮತಿಯಾಗಿರುವ ಪುಟ್ಟಯ್ಯನನ್ನು ಸಂಗೀತಲೋಕದ ಶ್ರೇಷ್ಠ ಸಾಧಕನನ್ನಾಗಿ ಮಾಡುವ ಧ್ಯೇಯ ಮತ್ತು ಗುರಿಯನ್ನು ಹೊಂದಿದ್ದನು. ತಮ್ಮ ಗುರಿಯನ್ನು ನನಸಾಗಿಸಲು ಪುಟ್ಟಯ್ಯನ ಮನಸ್ಸು ಸಂಗೀತ ಅಭ್ಯಾಸದಲ್ಲಿ ತೊಡಗುವಂತೆ ನಿತ್ಯವೂ ಅವನಿಗೆ ಸಂಗೀತದ ರಾಗ, ಸ್ವರ, ಲಯ–ತಾಳಗಳ ಪ್ರಾಥಮಿಕ ಹಂತದ ಕಲಿಕೆಯನ್ನು ನೀಡುತ್ತ ಬಂದರು. ಆದುದರಿಂದ ಚಂದ್ರಶೇಖರಯ್ಯನವರು ಪುಟ್ಟಯ್ಯನಿಗೆ ಸಂಗೀತದ ಮೊದಲ ಗುರುವಾಗುವುದರೊಂದಿಗೆ ಸಂಗೀತಲೋಕದಲ್ಲಿ ಅವನೊಬ್ಬನನ್ನು ಶ್ರೇಷ್ಠ ಗವಾಯಿಯಾಗಿ ಬೆಳೆಸುವ ಅವರ ಗುರಿ ದಿನದಿಂದ ದಿನಕ್ಕೆ ಮನದಲ್ಲಿ ಗಟ್ಟಿಕೊಳ್ಳುತ್ತ ನಡೆಯಿತು. 'ನೆಲದ ಮರೆಯ ನಿಧಾನದಂತೆ' ಪುಟ್ಟಯ್ಯನಲ್ಲಿ ಸಂಗೀತ ಶಕ್ತಿ ರೂಪುಗೊಳ್ಳುತ್ತಾ ಬಂದಿತೆಂದು ಹೇಳಬೇಕು. ಉತ್ಸಾಹದಿಂದ ಸಂಗೀತಾಭ್ಯಾಸದ ಕಡೆಗೆ ಗಮನ ಹರಿಸುತ್ತಿದ್ದ. ಸಿದ್ಧಮ್ಮನಿಗೆ ಸಹೋದರನ ಆಸರೆಯಿಂದ, ಪುಟ್ಟಯ್ಯನ ಸಂಗೀತದ ಅಭಿರುಚಿ ತುಂಬ ಸಂತಸ ತಂದಿತು. ಸಹೋದರನೊಂದಿಗೆ ಮನೆಗೆಲಸ–ಹೊಲಗೆಲಸಗಳಲ್ಲಿಯೂ ಭಾಗಿಯಾಗುತ್ತಿದ್ದಳು.

ಒಂದು ದಿನ ಇಳಿಯ ಹೊತ್ತಿನ ಸಂಜೆಯಾಗಿತ್ತು. ಹೊಲದ ಕೆಲಸಕಾರ್ಯಗಳಿಗೆ ಹೋದವರು ಮನೆಗೆ ಮರಳಿ ಬರುವ ಹೊತ್ತು. ಆಗ ಇಬ್ಬರೂ ಹೊಲಕ್ಕೆ ಹೋಗಿರುತ್ತಾರೆ. ಮನೆಯಲ್ಲಿ ಆರು ವರ್ಷದ ಹಾಲುಗಲ್ಲದ ಅಂಧ ಬಾಲಕ ದಿನವಿಡೀ ಮನೆಯಲ್ಲಿ ಒಬ್ಬನೇ ಕುಳಿತು ಬೇಸರಪಟ್ಟುಕೊಂಡಿದ್ದುಂಟು. ಶಿಶುನಾಳ ಶರೀಫರ ಅನುಭಾವ ಪದಗಳು ಗುನುಗುನಿಸುತ್ತಿದ್ದ. ಬೇಸರ ಕಳೆಯಲೆಂದು ಯಾವುದೋ ಒಂದು ಹಾಡನ್ನು ಹಾಡುತ್ತ ಕದ, ಕಿಟಕಿಗಳ, ಬಾಗಿಲುಗಳನ್ನೇ ಲಯಬದ್ಧವಾಗಿ ಬಾರಿಸುತ್ತಿದ್ದನಂತೇ ಹಾಗೆಯೇ ಕೈಯಾಡಿಸುತ್ತಿದ್ದಾಗ ಸೋದರಮಾವನು ನುಡಿಸುವ ಹಾರ್ಮೋನಿಯಂ ಪೆಟ್ಟಿಗೆ ಕೈಗೆ ತಾಕಿತು. ಆಗ ಬಾಲಕ ಪುಟ್ಟಯ್ಯನಿಗೆ ಎಲ್ಲಿಲ್ಲದ ಸಂತಸ, ಹಿಗ್ಗು. ಮಾವ ಹೊಲದಿಂದ ಬರುವುದರೊಳಗಾಗಿ ಕೆಲಕಾಲ ಹಾರ್ಮೋನಿಯಂ ನುಡಿಸೋಣ ಎಂದುಕೊಂಡ. ಆದರೆ ಆತನಿಗೆ ಭಯವಾಯಿತು. ಹಾರ್ಮೋನಿಯಂ ಮುಟ್ಟಿದರೇನೇ ಕೋಪಗೊಳ್ಳುತ್ತಿದ್ದ ನೆಂಬುದನ್ನು ತಿಳಿದಿದ್ದ. ಆದರೂ ಪುಟ್ಟಯ್ಯನು ಭಂಡ ಧೈರ್ಯ ಮಾಡಿಕೊಂಡು ಮಾವನ ಹಾರ್ಮೋನಿಯಂ ತೆಗೆದುಕೊಂಡು ನುಡಿಸಲು ಪ್ರಾರಂಭಿಸಿಯೇಬಿಟ್ಟ! ಅದೆಂಥ ಲಯಬದ್ಧ ಹಾಡುಗಾರಿಕೆಯೊಂದಿಗೆ ಹಾರ್ಮೋನಿಯಂ ನುಡಿಸುತ್ತಿದ್ದ. ಪುಟ್ಟಯ್ಯನ ಪುಟ್ಟುಪುಟ್ಟಾದ ಬೆರಳುಗಳು ಮಿಂಚಿನಂತೆ ಆ ವಾದ್ಯದ ಮೇಲೆ ಚಲಿಸುತ್ತಿದ್ದವು. ಅದೇನು ಕಂಠಸಿರಿ ಮಾಧುರ್ಯ! ಕೇಳಿದವರು ನಿಬ್ಬೆರಗಾಗುವಂತಿತ್ತು. ಆತ ಹಾಡಿದ ಹಾಡು ಇಂತಿದೆ:

**ಹೇ ಪರಮ ಗುರು ಪಂಚಾಕ್ಷರಾ**
**ಹಾನಗಲ್ಲ ಶ್ರೀ ಕುಮಾರ ವರಪುತ್ರ ಕುವರಾ**
**ನೀ ಸರಿಸಾಟಿಯಿರದ ಸಂಗೀತ ಸಾಗರಾ**
**ನಿನ್ನ ಗಾನಸುಧೆ ಈ ಜಗದಲ್ಲಿ ಅಮರಾ**
**ಹೇ ಪರಮ ಗುರು ಪಂಚಾಕ್ಷರಾ**

ಶ್ರೀ ಗುರು ಕುಮಾರೇಶ್ವರರ ಪರಮ ಶಿಷ್ಯರಾಗಿದ್ದ ಮಾವ ಹಾಡುವ ಹಾಡಿದು. ಚಂದ್ರಶೇಖರಯ್ಯನವರೇ ಸ್ವರಚಿತ ಈ ಹಾಡನ್ನು ಪುಟ್ಟಯ್ಯ ಮೈ ಚಳಿ ಬಿಟ್ಟು ಹಾಡುತ್ತ ಹಾರ್ಮೋನಿಯಂ ನುಡಿಸತೊಡಗಿದಾಗ ಮನೆಯಂಗಳದ ಮುಂದೆ ಜನಜಂಗುಳಿ ನೆರೆದಿತ್ತು. ಹೊಲಕ್ಕೆ ಹೋಗಿದ್ದ ಮಾವ ಮನೆಗೆ ಬರುತ್ತಿದ್ದಾಗ ಓಣಿಯನ್ನು ಪ್ರವೇಶಿಸುತ್ತಿದ್ದಂತೆಯೇ ಈತನ ಸಂಗೀತಸುಧೆ ಕರ್ಣಮನೋಹರವಾಗಿತ್ತು. ತನ್ನ ಹಾರ್ಮೋನಿಯಂ ಯಾರು ನುಡಿಸುತ್ತಿದ್ದಾರೆಂದು ಭಯಂಕರ ಕೋಪಿಯಾಗಿದ್ದ. ಮನೆಯ ಸಮೀಪ ಬರುತ್ತಿದ್ದಂತೆಯೇ ಆ ಸಂಗೀತಮಾಧುರ್ಯ ಅವನ ಸಿಟ್ಟನ್ನು ಕರಗಿಸಿಬಿಟ್ಟಿತ್ತು. ದೂರದಲ್ಲಿಯೇ ಆಸ್ವಾದಿಸ ತೊಡಗಿದ. ಆ ಬಾಲಕ ತನ್ನ ಅಳಿಯ ಎಂಬುದು ಗೊತ್ತಾಗಿತ್ತು. ಅಷ್ಟರಲ್ಲಿಯೇ ತಾಯಿಯು ಮನೆ ಪ್ರವೇಶಿಸಿದಳು. ಮನೆಯ ಮುಂದೆ ಜನರ ಗುಂಪು ಸೇರಿರುವುದನ್ನು ಮತ್ತು ಮಾವನು ಬಂದುದನ್ನು ಮಗನಿಗೆ ಹೇಳಿದಳು. ಅಂಧ ಹುಡುಗನ ಕೈ ಗಕ್ಕನೆ ನಿಂತು, ಬಾಯಿ ಗಪ್ಪನೆ ಬಂದ್ ಆಯಿತು. ಗಡಗಡನೆ ನಡುಗತೊಡಗಿದ. ಮಾವ ಬಡಿಯುತ್ತಾನೆ, ಹೊಡೆಯುತ್ತಾನೆ ಎಂಬ ಭಯ ಆವರಿಸಿತು. "ತಪ್ಪಾಯ್ತು ತಪ್ಪಾಯ್ತು ಮಾವಾ ಇನ್ನೊಮ್ಮೆ ನಾನು ನಿನ್ನ ಪೇನಪೆಟ್ಟಿಗೆ ಮುಟ್ಟೋದಿಲ್ಲ. ನನ್ನನ್ನು ಕ್ಷಮಾ ಮಾಡಿ ಬಿಡು. ಒಬ್ಬನೇ ಮನಿಯಾಗ ಕುಂತ ಕುಂತ ಭಾಳ ಬ್ಯಾಸರ ಆಗಿತ್ತುಂತ ಪೆಟಿಗಿ ಬಾರಸಾಕಹತ್ತಿದ್ಯಾ. ಇನ್ನೊಮ್ಮೆ ಹಿಂಗ ನಾ ಮಾಡೂದಿಲ್ಲ – ಮಾವಾ ತಪ್ಪಾತು ಕ್ಷಮಾ ಮಾಡು ಎಂದು ಅಂಗಲಾಚಿ ಬೇಡಿಕೊಂಡ.

ಪುಟ್ಟಯ್ಯನಿಂದ ಈ ಮಾತುಗಳನ್ನು ಕೇಳಿಸಿಕೊಂಡ ಶೀಘ್ರಕೋಪಿ ಮಾವನ ಕಣ್ಣಲ್ಲಿ ಆನಂದಭಾಷ್ಪಗಳುದುರಿದವಲ್ಲದೇ ಎದೆಯಾಳದಿಂದ ಆತ ಹೇಳಿದ್ದು ಹೀಗೆ 'ತಾನಂತೂ ಇವನಿಗೆ ಏನನ್ನು ಕಲಿಸಲಿಲ್ಲ. ಆದರೂ ಈ ಪುಟ್ಟ ಹುಡುಗ ಇಷ್ಟು ಸುಶ್ರಾವ್ಯವಾಗಿ ಹಾಡುವುದು, ವಾದ್ಯ ನುಡಿಸುವುದನ್ನು ಹೇಗೆ ಕಲಿತ' ಎಂದು ಮಾವ ಅಚ್ಚರಿಪಟ್ಟದ್ದುಂಟು. ಅಳಿಯನನ್ನು ಆನಂದದಿಂದ ಅಪ್ಪಿಕೊಂಡ. 'ಇಲ್ಲಲೇ ಹುಡುಗಾ ಕ್ಷಮಿಸಬೇಕಾದವನು ನಾನಲ್ಲ. ನಿನ್ನಲ್ಲಿರೋ ಪ್ರತಿಭೆಯನ್ನು ನಾನು ಗುರುತಿಸಲೇ ಇಲ್ಲ. ಅದು ಕಾರಣ ನೀನೇ ನನ್ನನ್ನು ಕ್ಷಮಿಸಬೇಕು ಎಂದವನೆ ಅಳಿಯನ ಮೈಮೇಲೆ ಪ್ರೀತಿಯಿಂದ–ವಾತ್ಸಲ್ಯಭಾವದಿಂದ ನೇವರಿಸಿದ. ಇಬ್ಬರಿಗೂ ಸಂತಸ ಉಕ್ಕಿ ಹರಿಯಿತು. ಮೈಮನವೆಲ್ಲ ರೋಮಾಂಚನವಾಯಿತು. ಅಂದಿನಿಂದಲೇ ಮಾವನಿಂದ ಅಳಿಯನಿಗೆ ಸಂಗೀತ ಪಾಠ ಪ್ರಾರಂಭವಾಯಿತು. ಸೋದರಮಾವನೇ ಸಂಗೀತದ ಮೊದಲ ಗುರುವಾದ. ಆ ಅಂಧ ಬಾಲಕನೇ ಮುಂದೊಮ್ಮೆ ಸಂಗೀತ ಸಾಮ್ರಾಟ್, ಉಭಯಗಾನ ವಿಶಾರದ, ತ್ರಿಭಾಷಾ ಕವಿ–ಸಾಹಿತಿ, ಸಂಗೀತ ಶಾಸ್ತ್ರಕೋವಿದ, ಪದ್ಮವಿಭೂಷಣ, ಶಿಕ್ಷಣ

ತಜ್ಞ, ತ್ರಿವಿಧ ದಾಸೋಹಿ ಎಂಬೆಲ್ಲ ಮಾರುದ್ದದ ಬಿರುದುಗಳಿಂದ ಭೂಷಿತನಾಗಿ ಈ ನಾಡಿನಲ್ಲಿ ನಡೆದಾಡುವ ದೇವರೆಂದು ಕರೆಯಿಸಿಕೊಂಡ ಗದುಗಿನ ಶ್ರೀ ವೀರೇಶ್ವರ ಪುಣ್ಯಾಶ್ರಮದ ನಾವಿಕ ಪೂಜ್ಯ ಪಂಡಿತ ಡಾ. ಪುಟ್ಟರಾಜ ಗವಾಯಿಗಳಾದರು. ಮಾವ ಚಂದ್ರಶೇಖರಯ್ಯ ಪುಟ್ಟಯ್ಯನಿಗೆ ವರ್ಷ ಎರಡು ವರ್ಷಗಳವರೆಗೆ ಮನೆಯಲ್ಲಿಯೇ ಸಂಗೀತ ಕಲಿಸಿದ. ಎಂಟನೆಯ ವರ್ಷದೊತ್ತಿಗೆ ಪುಟ್ಟಯ್ಯ ವಚನ, ತತ್ತ್ವಪದ, ಚೀಜುಗಳನ್ನು ಸುಶ್ರಾವ್ಯವಾಗಿ ಹಾಡತೊಡಗಿದನಲ್ಲದೇ ಮಾವನಷ್ಟೇ ಸಮರ್ಥವಾಗಿ ಹಾರ್ಮೋನಿಯಂ ನುಡಿಸತೊಡಗಿದ. ಹಾಗೆಯೇ ಸಂಗೀತದ ಸಾಕಾರವೇ ಆಗಿ ಬೆಳೆದ. ಇಂಥವನಿಗೆ ಕಲಿಸುವುದು ತನ್ನ ಸಾಮರ್ಥ್ಯ ಮತ್ತು ತಾಕತ್ತು ಅಲ್ಲ ಎಂಬುದು ಮಾವನಿಗೆ ಮನವರಿಕೆಯಾಯಿತು. ಈ ಅಗಾಧ ಪ್ರತಿಭೆಗೆ ಯೋಗ್ಯ ಗುರುವಿನ ಹುಡುಕಾಟದಲ್ಲಿ ತೊಡಗಿದ. ಕೊನೆಗೆ ಆತನಿಗೆ ಹೊಳೆದದ್ದು ನನ್ನ ಗುರುಸಾಮ್ರಾಟರೇ ಆದ ಶ್ರೀ ಪಂಚಾಕ್ಷರ ಗವಾಯಿಯವರಲ್ಲಿಗೆ ಪುಟ್ಟಯ್ಯನನ್ನು ಕರೆದೊಯ್ದ. ಆಗ ಪುಟ್ಟಯ್ಯ ಬಾಲರವಿಯಂತೆ ಪ್ರಕಾಶಮಾನವಾಗಿ ಬೆಳೆಯಲು ಪ್ರತಿಕೂಲ ವಾತಾವರಣ ಒದಗಿದಂತಾಯಿತೆಂದು ಮನದಲ್ಲಿ ಹರ್ಷಪಟ್ಟ. ದೇವಗಿರಿಯಿಂದ ಇಬ್ಬರೂ ಕೂಡಿಕೊಂಡು ಪಂಚಾಕ್ಷರಿ ಗವಾಯಿಗಳಿರುವಲ್ಲಿಗೆ ಹೊರಟರು. ಆಗ 1922ರ ಕಾಲಘಟ್ಟವಾಗಿತ್ತು.

**ಪಂಡಿತ ಪಂಚಾಕ್ಷರ ಗವಾಯಿಗಳ ಗುರುತ್ವದಲ್ಲಿ**

ಪಂಚಾಕ್ಷರ ಗವಾಯಿಗಳು ಹಾನಗಲ್ಲ ಕುಮಾರಸ್ವಾಮಿಯವರ ಪರಮ ಶಿಷ್ಯರು ಮತ್ತು ಅವರ ವರಕರ ಸಂಜಾತರು. ಪಂಚಾಕ್ಷರವರನ್ನು ಒಂದು ಶಕ್ತಿಯಾಗಿ ಬೆಳೆಸಿದ ಹಾನಗಲ್ಲ ಕುಮಾರಸ್ವಾಮಿಗಳು ಪಟ್ಟದಕಲ್ಲು, ಐಹೊಳೆಯಲ್ಲಿ ಶಿವಯೋಗ ಮಂದಿರದ ಸಂಸ್ಥಾಪಕರು. ಪಂಚಾಕ್ಷರ ಗವಾಯಿಗಳವರ ಮೂಲಕ ಉತ್ತರ ಕರ್ನಾಟಕದಲ್ಲಿ ಸಂಗೀತ ಪರಂಪರೆ ಉಜ್ವಲವಾಗಿ ಬೆಳೆಯಲು ಪ್ರೇರಣೆ ನೀಡಿದ ಕಾರಣಿಕಪುರುಷ. ಶಿವಯೋಗ ಮಂದಿರದಲ್ಲಿದ್ದು ಅನೇಕ ವರ್ಷಗಳ ಕಾಲ ಪಂಚಾಕ್ಷರ ಗವಾಯಿಗಳಿದ್ದು ಶಿವಯೋಗ ಮತ್ತು ಸಂಗೀತದ ತರಬೇತಿ ಪಡೆದವರು. ಶಿವಯೋಗ ಮಂದಿರವು ಸಂಗೀತ ಕ್ಷೇತ್ರಕ್ಕೆ ಕೊಟ್ಟ ಕೊಡುಗೆ ಅನನ್ಯವಾದುದು. ಆದರೆ ಅಲ್ಲಿರುವ ಸಂಗೀತ ಶಾಲೆ ಕಾರಣಾಂತರಗಳಿಂದ ಬೇರ್ಪಟ್ಟು 'ಸಂಚಾರಿ ಸಂಗೀತ ಶಾಲೆ'ಯಾಗಿ ಅಂಧ ಅನಾಥ ಮಕ್ಕಳಿಗೆ ಸಂಗೀತ ಪಾಠವನ್ನು ಹೇಳಿಕೊಡುತ್ತಾ ಊರಿಂದೂರಿಗೆ ಸಂಚರಿಸುತ್ತಾ ನವಿಲುಗುಂದದ ಗವಿಮಠದಲ್ಲಿ ಕ್ಯಾಂಪು ಮಾಡಿತ್ತು. ಅಂದಿನ ಗವಿಮಠದ ಪೀಠಾಧಿಪತಿಗಳಾಗಿದ್ದ ಶ್ರೀಮ.ನಿ.ಪ್ರ. ಬಸವಲಿಂಗ ಸ್ವಾಮಿಗಳು ಗವಾಯಿಗಳವರಿಗೆ ಮಠದಲ್ಲಿ ಆಶ್ರಯವಿತ್ತು ವಿದ್ಯಾರ್ಥಿಗಳಿಗೆ ವಾರಾನ್ನದ ಮನೆಗಳ ವ್ಯವಸ್ಥೆಯನ್ನು ಕಲಿಯಲೆಂದು ಅನುಕೂಲ ಮಾಡಿದ್ದರು. ಅಲ್ಲಿರುವ ಪಂಚಾಕ್ಷರ ಗವಾಯಿಗಳಲ್ಲಿಗೆ ಚಂದ್ರಶೇಖರಯ್ಯ ಅಳಿಯ ಪುಟ್ಟಯ್ಯನೊಂದಿಗೆ ಹೋಗುತ್ತಾರೆ. ಕರೆತಂದ ಸಂಗತಿಯನ್ನು ಅವರಲ್ಲಿ ಹೇಳಿ ಪ್ರಾರ್ಥಿಸಿಕೊಂಡ. ವಿನಮ್ರನಾಗಿ ಪುಟ್ಟಯ್ಯನು ಗವಾಯಿಗಳವರ ಗುರುಪಾದಕ್ಕೆ

ನಮಸ್ಕರಿಸಿದ. ಈತನ ಮೇಲೆ ನಿಮ್ಮ ಕರುಣೆಯಿರಲಿ ಈ ಬಾಲಕನ ತಂದೆ–ತಾಯಿ–ಬಂಧು ನೀವೇ ಎಂದು ಹೇಳಿ ದೇವಗಿರಿಗೆ ಆತ ಹೋದ.

ಚಂದ್ರಶೇಖರಯ್ಯ ತನ್ನ ಅಳಿಯನ ಕುರಿತು ಗುರು ಪಂಚಾಕ್ಷರಿ ಗವಾಯಿಗಳು ಅವರಲ್ಲಿ ವಿವರಿಸಿದ. ಆತನ ಮಾತು ಹಾವ–ಭಾವ–ನಡೆ–ನುಡಿ–ಆಚಾರ–ವಿಚಾರ ಕ್ಷಣಮಾತ್ರದಲ್ಲಿಯೇ ಗುರುವಿಗೆ ಅರ್ಥವಾಯಿತು. ಆಗ ಗುರು ಪಂಚಾಕ್ಷರರು ಒಂದು ಹಾಡು ಹೇಳುವಂತೆ ಪುಟ್ಟಯ್ಯನಿಗೆ ಹೇಳಿದರು. ಆಗ ತುಂಬ ಪ್ರಚಲಿತವಿದ್ದ ಹಾಡು ಅಥವಾ ತತ್ತ್ವಪದವೆಂದರೆ ಶಿಶುನಾಳ ಶರೀಫರ ಪದಗಳು. ಅವರ 'ಸೋರುತಿಹುದು ಮನೆಯ ಮಾಳಿಗಿ, ಹಾಕಿದ ಜನಿವಾರವೇ ಸದ್ಗುರುನಾಥಾ ನೂಕಿದ ಭವ ಭಾರ ಲೋಕದಿ ಭವ ಜ್ಞಾನ ನೀ ಪಡೆ' ಎಂದು, 'ಗುಡಿಯ ನೋಡಿರಣ್ಣ ಈ ದೇಹದ ಗುಡಿಯ ನೋಡಿರಣ್ಣಾ! ಗುಡಿಯ ನೋಡಿರಿದು ಪೊಡವಿಗೊಡೆಯನು ಅಡಗಿಕೊಂಡು ಕಡು ಬೆಡಗಿನೊಳಿರುತಿಹ ಗುಡಿಯ ನೋಡಿರಣ್ಣಾ, ಮೋಹದ ಮಡದಿ ತೀರಿದ ಬಳಿಕ ಮಾವನ ಮನೆಯ ಹಂಗಿನ್ಯಾಕೋ' ಈ ಮುಂತಾದ ಪದಗಳನ್ನು ಪುಟ್ಟಯ್ಯ ಸುಶ್ರಾವ್ಯವಾಗಿ ತನ್ನ ಕಂಠಸಿರಿಯಿಂದ ತಪ್ಪಿಲ್ಲದೇ ಹಾಡಿದ. ಅವನ ಹಾಡುವಿಕೆಯಲ್ಲಿ ಹಿಂದೂಸ್ಥಾನಿ ಸಂಗೀತದಗತ್ತು ಗರಿಗಟ್ಟಿತ್ತು. ಕೇಳಿದ ಗುರು ಪಂಚಾಕ್ಷರಿ ಯವರಿಗೆ ಎಲ್ಲಿಲ್ಲದ ಸಂತಸ ಮಡುಗಟ್ಟಿತ್ತು. ಈತನ ಸಂಗೀತದ ಪ್ರತಿಭೆಯನ್ನು ಗಮನಿಸಿ ಗುರುತಿಸಿದ್ದವರು ಶ್ರೀ ಹಾನಗಲ್ಲ ಶ್ರೀ ಕುಮಾರಸ್ವಾಮಿಗಳವರು. ಆಗ ಅವರಲ್ಲಿಗೆ ಹೋದಾಗ ಪುಟ್ಟಯ್ಯನಿಗೊಂದು ಮಾತು ಹೇಳಿದ್ದರು. ಅದೇನೆಂದರೆ "ನೀನು ಹಿಂದೆ ಹುಟ್ಟಿದವರಿಗೆ ಮಾತ್ರ ಪುಟ್ಟಯ್ಯ! ಆದರೆ, ನಂತರ ಹುಟ್ಟಿದವರಿಗೆ ಮತ್ತು ಹುಟ್ಟುವವರಿಗೆ 'ರಾಜ'ನಾಗಿರುವೆ. ಆದ್ದರಿಂದ ನಿನ್ನ ಹೆಸರು 'ಪುಟ್ಟರಾಜ' ಎಂದು ಕರೆದು ಹರಸಿದರು. ಮುಂದೆ ಅದೇ ಕಾಯಂ ಆಯ್ತು, ಕೀರ್ತಿಯೂ ತಂದಿತು. ಅಂದಿನಿಂದ ಪುಟ್ಟಯ್ಯ 'ಪುಟ್ಟರಾಜ' ನಾದ. ಈ ಮೂವರೂ ಗುರುಗಳ ಸಂಪರ್ಕ, ಸಹವಾಸ ಮತ್ತು ಕೃಪಾಶೀರ್ವಾದ ಗಳಿಂದ ಸಂಗೀತ ಕ್ಷೇತ್ರದ ದಿಗ್ಗಜನಾಗಿ ಬೆಳೆದು ಸಾಮ್ರಾಟನಾದುದರಿಂದ ಗವಾಯಿಗಳಾದರು. ಪುಟ್ಟರಾಜ ಗವಾಯಿಗಳಾಗಿ ಗಾನ ಗಂಧರ್ವರಾಗಿ ಬೆಳೆದರು. ದೇಶ–ವಿದೇಶಗಳಲ್ಲಿ ಅವರ ಸಂಗೀತ ಕಚೇರಿಗಳು ನಡೆದು ಜಗತ್ಪ್ರಸಿದ್ಧ ಸಂಗೀತ ಸಾಮ್ರಾಟರಾದರು.

ಕರುಣಾಮೂರ್ತಿ ಪಂಡಿತ ಪಂಚಾಕ್ಷರ ಗವಾಯಿಗಳವರ ವಿದ್ಯಾರ್ಥಿ ವಾತ್ಸಲ್ಯ ಅನ್ಯಾದೃಶ್ಯವಾಗಿತ್ತು. ಅವರ ವಿದ್ವತ್ತು ಮತ್ತು ವಾತ್ಸಲ್ಯದಿಂದಾಗಿ ತಮ್ಮಲ್ಲಿಗೆ ಬರುತ್ತಿದ್ದ ವಿದ್ಯಾರ್ಥಿಗಳನ್ನು ಆಕರ್ಷಿಸಿದರು. ಜಾತಿ, ಮತ, ಪಂಥಗಳ ಭೇದವಿಲ್ಲದೆ ವಿದ್ಯಾದಾನ ಮಾಡುತ್ತಿದ್ದ 'ಸಂಚಾರಿ ಸಂಗೀತ ಪಾಠಶಾಲೆ'ಯು ಪುಟ್ಟರಾಜರಿಗೆ ವಿಶ್ವದ ಬಂಧುತ್ವದ ಸರ್ವಮತಗಳಲ್ಲಿ ಸಮಾನತೆಯನ್ನು ಕಾಣುವ ಹಿರಿಯತನವನ್ನು ಕಿರಿಯ ವಯಸ್ಸಿನ ಬಾಲಕನ ಮನಸ್ಸಿನಲ್ಲಿ ಗಟ್ಟಿಗೊಂಡಿತ್ತು. ಶ್ರೀಗುರುವಿನಿಂದ ಹಾರ್ಮೋನಿಯಂ ವಾದನದ ಕಲೆಯನ್ನೂ, ಗದಿಗೆಪ್ಪ ಗವಾಯಿಯಿಂದ ತಬಲಾ ವಾದ್ಯದ ವಿದ್ಯೆಯನ್ನು ಕಲಿತರು.

ದಿನದಿನದ ಪಾಠಗಳನ್ನು ಕರಗತವಾಗುವವರೆಗೆ ಪುಟ್ಟರಾಜನು ದೃಢವಾಗಿ ಅಧ್ಯಯನಶೀಲನಾಗಿ ಸಂಗೀತವನ್ನು ಅಭ್ಯಸಿಸುತ್ತಿದ್ದರು. ದಿನದಿಂದ ದಿನಕ್ಕೆ ಪುಟ್ಟಯ್ಯನು ಸಂಗೀತದೊಡನೆ ತಾನೂ ಬೆಳೆಯತೊಡಗಿದ. ಶ್ರೀ ಪಂಚಾಕ್ಷರ ಗವಾಯಿಗಳವರ ಸಂಚಾರಿ ಸಂಗೀತ ಪಾಠಶಾಲೆಯ 28 (1914–1942) ವರ್ಷಗಳ ಕಾಲ ನಾಡಿನಾದ್ಯಂತ ಸಂಚರಿಸುತ್ತಿದ್ದ ಅವಧಿಯಲ್ಲಿಯೇ ಸಂಗೀತಲೋಕದ ದಿಗ್ಗಜರಿಂದ ಬೇರೆ ಬೇರೆ ವಾದ್ಯಗಳನ್ನು ನುಡಿಸುವಲ್ಲಿ ಪುಟ್ಟರಾಜರು ಪರಿಣತರಾದರು. ಪುಟ್ಟರಾಜರು ನಾಟಕ ಕಂಪನಿಯನ್ನು ಸ್ಥಾಪಿಸುವ ವೇಳೆಗಾಗಲೇ ಪ್ರಖ್ಯಾತ ಸಂಗೀತ ವಾದಕರೆಂಬ ಜನ ಮೆಚ್ಚುಗೆ ಪಡೆದಿದ್ದರು. ಅವರು ಸಂಗೀತ ವಾದಕರಾಗುವುದಕ್ಕೆ ಆಯಾ ವಾದ್ಯಗಳಲ್ಲಿ ಪರಿಣತರಾದವರಿಂದ ಸಂಗೀತಾಭ್ಯಾಸವನ್ನು ಕಲಿತರು. ಚಂದ್ರಶೇಖರಯ್ಯ ಮತ್ತು ಶ್ರೀಗುರು ಪಂಚಾಕ್ಷರರಿಂದ ಹಾರ್ಮೋನಿಯಂ ವಾದನವನ್ನು ಕಲಿತರು. ಸಾರಂಗಿ ವಿದ್ಯೆಯನ್ನು ಗೋಕಾಕದ ತುಕಾರಾಮ ಬುವಾ, ತಮ್ಮಣ್ಣ ಸಾಹೇಬ ಮಿರಜಕರ ಇವರಿಂದ; ಕಮತಗಿಯ ಗದಿಗೆಪ್ಪ ಅವರಿಂದ ತಬಲಾ ವಾದ್ಯವನ್ನು, ಹರಪನಹಳ್ಳಿಯ ರಾಘವೇಂದ್ರ ಆಚಾರ್ಯರಿಂದ ವಾಯಲಿನ ವಾದ್ಯವನ್ನು, ವೀಣೆ ನುಡಿಸುವುದನ್ನು ಮೈಸೂರಿನ ಆಸ್ಥಾನ್ ವಿದ್ವಾನ್ ದೇವೇಂದ್ರಪ್ಪ ನ್ಯಾಮ್ತಿ, ಪುಟ್ಟರಾಜರು ಪ್ರತಿಯೊಂದು ವಿಷಯ, ಸಂಗೀತ, ಯಾವುದೇ ಅಭ್ಯಾಸವನ್ನು ಅತ್ಯಂತ ನಿಷ್ಠೆಯಿಂದ ಮತ್ತು ಏಕಾಗ್ರತೆಯಿಂದ ಸಂಪೂರ್ಣವಾಗಿ ಕಲಿಯುವಲ್ಲಿ ನಿಷ್ಣಾತರಾಗಿ ಹೊರಹೊಮ್ಮಿದರು. ಸಂಗೀತ ಕ್ಷೇತ್ರದಲ್ಲಿ ತಮ್ಮ ಪ್ರಬುದ್ಧತೆಯನ್ನು ಪಡೆದುಕೊಂಡು ಯಶಸ್ವೀ ಸಂಗೀತಗಾರರಾದರು.

ಈ ಪೂರ್ವದಲ್ಲಿಯೇ ಪುಟ್ಟರಾಜರು 8 ವರ್ಷದವರಿರುವಾಗಲೇ ಸಂಗೀತವನ್ನು ಕಲಿಯಲು ಅವರಿಗೆ ಪ್ರೇರಕಶಕ್ತಿಯಾಗಿ ಸೋದರಮಾವ ಚಂದ್ರಶೇಖರಯ್ಯನಾಗಿದ್ದುದನ್ನು ಹೇಳಲಾಗಿದೆ. ಆದರೆ ಮತ್ತೊಬ್ಬ ಶ್ರೀಗುರುಕೃಪೆ ಮತ್ತು ಪ್ರೇರಣೆಯ ಶಕ್ತಿ ಯಾರೆಂದರೆ ಶ್ರೀ ಗುರು ಹಾನಗಲ್ ಕುಮಾರಸ್ವಾಮಿಗಳು. ಅನಂತರದಲ್ಲಿ ಮಾನವ ಮಾರ್ಗದರ್ಶನದಂತೆ ಪಂಚಾಕ್ಷರ ಗವಾಯಿಗಳು ಪುಟ್ಟಯ್ಯನಿಗೆ ಗುರುಗಳಾಗಿ ಹರಕರುಣೋದಯವಾದಂತೆಯೇ ಎಂದು ಭಾವಿಸಿದ್ದರು. ಅವರಲ್ಲಿರುವ ಅಗಾಧ ಪಾಂಡಿತ್ಯದ ವಿದ್ಯೆಯಾದ ಕರ್ನಾಟಕ ಸಂಗೀತವನ್ನು ಅವರು ಕಲಿತರು. ನಂತರ ಹಿಂದೂಸ್ತಾನಿ ಸಂಗೀತದೊಳಗೇ ಅತ್ಯದ್ಭುತ ಸಾಧನೆ ಮಾಡಿದರು. ಅಲ್ಲಿ ಹೊಸ ಚೀಜ ಮಾಡಲು ಅಪ್ಪಣೆ ಕೊಡಿಸಿದ್ದರೂ ಕುಮಾರಸ್ವಾಮಿಗಳೇ ಎಂಬುದಾಗಿ ತಿಳಿದು ಬರುತ್ತದೆ. ಪುಟ್ಟರಾಜರು ಒಂದು ವಾದ್ಯವನಲ್ಲ, ಅನೇಕ ವಾದ್ಯಗಳನ್ನು ಶಾಸ್ತ್ರೀಯ ಮತ್ತು ಲೀಲಾಜಾಲವಾಗಿ ನುಡಿಸುತ್ತಿದ್ದರು. ಅವರೊಂದಿಗೆ ಸಭೆ–ಸಮಾರಂಭಗಳಲ್ಲಿ ಸರ್ವೇ ಸಾಮಾನ್ಯವಾಗಿರುತ್ತಿದ್ದ ವಾದ್ಯವಿಶೇಷಗಳೆಂದರೆ ಸಾರಂಗಿ, ವೀಣೆ, ತಂಬೂರಿ, ಹಾರ್ಮೋನಿಯಂ, ವಯೊಲಿನ, ತಬಲಾ, ಸರೋದ, ಮೃದಂಗ, ಜಲತರಂಗ, ಇವು ಇರುತ್ತಿದ್ದವು. ಇವುಗಳಲ್ಲಿ ಐದು ವಾದ್ಯಗಳನ್ನು ಸ್ವತಃ ತಾವೊಬ್ಬರೇ ನುಡಿಸುತ್ತಿದ್ದ ಶ್ರೇಷ್ಠ ಸಂಗೀತ ಕಲಾವಿದರಾಗಿದ್ದರು. ಸಮರಸವಾಗಿ ಎಲ್ಲವನ್ನೂ

ನುಡಿಸುತ್ತಿದ್ದರು. ಇಂಥ ಸಂಪೂರ್ಣ ಕಲೆಯ ಸಾಧನೆ ಬಹುಶಃ ಜಗತ್ತಿನಲ್ಲಿಯೇ ಅಪರೂಪದ ಸಾಧನೆ. ಅವರ ನೆಚ್ಚಿನ, ಪ್ರೀತಿಯ ವಾದ್ಯವೆಂದರೆ ವಯೊಲಿನ್ ಆಗಿತ್ತು. ಸಂಗೀತಶಾಸ್ತ್ರಕ್ಕೆ ಅವರು ಕೊಟ್ಟ ಕೊಡುಗೆ ಅಪಾರ, ಅನನ್ಯ. 66 ರಾಗಗಳನ್ನು ಪರಿಚಯ ಮಾಡಿಕೊಂಡು, ಹೊಸ ಹೊಸ ರಚನೆಗಳನ್ನು ತಾವೇ ಸ್ವಯಂಪೂರ್ಣವಾಗಿ ರಚಿಸಿ, ತಮ್ಮದೇ ಆದ ವಿಶಿಷ್ಟವಾದಂತಹ ಸ್ವರಪದ್ಧತಿ ಹೇಳಿದ್ದಾರೆಂದರೆ ಅವರೊಬ್ಬ 'ಸಂಗೀತ ಸರ್ವಜ್ಞ ಅಥವಾ ಸಂಗೀತ ಶಿವ' ಆಗಿದ್ದರೆಂದು ಹೇಳಬೇಕಾಗುತ್ತದೆ. ತಮ್ಮದೇ ಆದ ಆ ಹೊಸ ಪದ್ಧತಿಗೆ ಅವರು 'ಪಂಚಾಕ್ಷರೀ ಲಿಪಿ ಪದ್ಧತಿ' ಎಂದು ಕರೆದಿದ್ದಾರೆ. ಅವರು ಈ ವಿಷಯವನ್ನು ತಮ್ಮ 'ಹಿಂದೂಸ್ತಾನಿ ಗಾನ ಸುಧಾ' ಎಂಬ ಪುಸ್ತಕದಲ್ಲಿ ನಮೂದಿಸಿದ್ದಾರೆ. ಅವರದೊಂದು ವಿಶೇಷತೆಯೇನೆಂದರೆ ಅವರು ಯಾವತ್ತೂ ಬರೆದುಕೊಂಡು ಹಾಡುತ್ತಿರಲಿಲ್ಲ. ಹಾಡಿ ಬರೆಯುತ್ತಿದ್ದರು. ಸಂಗೀತ ಅಂದರೆ ಅವರಿಗೆ ಒಂದು ಯೋಗಸಾಧನೆ, ಒಂದು ತಪಸ್ಸು ಆಗಿತ್ತು. ಗುರುಗಳ ಅಪ್ಪಣೆಯನ್ನು ಶಿರಸಾವಹಿಸಿ ಪುಟ್ಟರಾಜರು ಮೊಟ್ಟಮೊದಲು ಚತುರಂಗ ಎನ್ನುವ ಚೀಜ ಮಾಡಿ ತೋರಿಸಿದರು. ಗುರುಗಳು ಆಶ್ಚರ್ಯಚಕಿತರಾದರು. ನಂತರ ಅವರು ಅನೇಕ ಚೀಜಗಳನ್ನು ಕಂಡುಹಿಡಿದದ್ದು ದೊಡ್ಡ ಸಮಾಚಾರವಾಯಿತು. ಎಂತಹ ಸಭೆಯೇ ಇರಲಿ ಅವರು ಒಂದಾದರೂ ಚೀಜನ್ನು ಹಾಡಿಯೇ ಹಾಡುತ್ತಿದ್ದರು. ಅವರಲ್ಲಿನ ಅದ್ಭುತ ತಾರಕ ಶಕ್ತಿ ಬಹು ಬೇಗ ಯಾವುದನ್ನು ತಟ್ಟನೇ ಗ್ರಹಿಸಿಕೊಳ್ಳುವಂತೆ ಮಾಡಿ, ಹೊಸ ಬಗೆಯಲ್ಲಿ ಅದನ್ನು ಅಭಿವ್ಯಕ್ತಿಸುವಂತೆ ಮಾಡುತ್ತಿತ್ತು. ಹಾಗೆ ನೋಡಿದರೆ ಅವರು ಸಂಗೀತದಲ್ಲಿ ಬಹಳಷ್ಟು ಸಾಧನೆಯನ್ನು ಮಾಡಿದ್ದು ಸ್ವಾಧ್ಯಾಯ ಮತ್ತು ಸ್ವಂತ ಸಂಶೋಧನೆಯ ಬಲದಿಂದಲೇ ಎಂಬುದು ಸತ್ಯ. ಪಂಚಾಕ್ಷರ ಗವಾಯಿಗಳು ತಾವು ಮಾಡಿದ ಸಾಧನೆ–ಸಿದ್ಧಿಯಿಂದ ಪಡೆದುಕೊಂಡ ಎಲ್ಲಾ ಸಂಗೀತ ವಿದ್ಯೆಯನ್ನು ಪುಟ್ಟರಾಜರಿಗೆ ಧಾರೆಯೆರೆದರು. ಕರ್ನಾಟಕ ಮತ್ತು ಹಿಂದೂಸ್ತಾನಿ ಸಂಗೀತದಲ್ಲಿ ಪುಟ್ಟರಾಜರು ಪ್ರಾವೀಣ್ಯ ಪಡೆದುಕೊಂಡು ಉಭಯಗಾಯನ ವಿಶಾರದರಾದಂತೆ ಕನ್ನಡ, ಸಂಸ್ಕೃತ ಹಾಗೂ ಹಿಂದಿ ಭಾಷೆಗಳಲ್ಲಿ ಪ್ರಭುತ್ವವನ್ನು ಸಾಧಿಸಿದರಲ್ಲದೇ ತ್ರಿಭಾಷಾಪಂಡಿತರಾದರು. ಪಂಚಾಕ್ಷರಿ ಗವಾಯಿಗಳವರ ಶ್ರೀ ಕುಮಾರೇಶ್ವರ ಕೃಪಾ ಪೋಷಿತ ಧರ್ಮಾರ್ಥ ಸಂಚಾರಿ ಸಂಗೀತ ಮಹಾವಿದ್ಯಾಲಯ 20 ವರ್ಷಗಳಲ್ಲಿ ಬಹುಕಾಲ ಕರ್ನಾಟಕದ ತುಂಬೆಲ್ಲ ಸಂಚರಿಸುತ್ತಲೇ ಸಾಗಿತ್ತು. ಪುಟ್ಟರಾಜರು ಆ ಸಂಗೀತ ಶಾಲೆಗೆ ಸೇರಿದ ವಿದ್ಯಾರ್ಥಿಗಳಿಗೆ ಪಾಠಗಳನ್ನು ಹೇಳಿಕೊಡುವ ಗುರುಗಳಾಗಿದ್ದರು. ಪುಟ್ಟರಾಜರು ಬೆಳೆದು ದೊಡ್ಡವರಾದಂತೆಯೇ ತಾಯಿ ಮತ್ತು ಸೋದರಮಾವ ಚಂದ್ರಶೇಖರಯ್ಯನವರ ಅಪೇಕ್ಷೆಯ ಮೇರೆಗೆ ಅವನಿಗೆ ಮದುವೆ ಮಾಡಬೇಕೆಂಬ ಆಸೆಯಿತ್ತು. ಆದರೆ, ಪುಟ್ಟರಾಜರು ಮದುವೆಯ ಬಂಧನದಿಂದ ಮುಕ್ತರಾದರು. ಬಾಲಬ್ರಹ್ಮಚಾರಿಯಾಗಿಯೇ ಲೋಕ ಕಲ್ಯಾಣ, ಅದರಲ್ಲೂ ಅಂಧ–ಅನಾಥ ಮಕ್ಕಳ ಭವಿಷ್ಯ ನಿರ್ಮಾಣ ಮಾಡುವ ಮತ್ತು ಕಲ್ಯಾಣಗೈಯ್ಯುವ ನಿರ್ಧಾರ ತಳೆದು ಅದರಲ್ಲಿಯೇ ಕಾರ್ಯತತ್ಪರರಾದರು.

(ಮುಂದುವರಿಯುವುದು)

# ಕಾಯಕ

ಡಾ. ಬಸವರಾಜ ಸಬರದ

(ಹಿಂದಿನ ಸಂಚಿಕೆಯಿಂದ)

**4. ಕಾಯಕಗಳ ವರ್ಗೀಕರಣ**

ಮೊದಲಿದ್ದ ವೃತ್ತಿಗಳೆಲ್ಲ ಶರಣರ ಕಾಲಕ್ಕೆ ಕಾಯಕಗಳಾದವು. ಕನ್ನಗಾರಿಕೆ, ಸೂಳೆಗಾರಿಕೆಯಂತಹ ಅನೇಕ ವೃತ್ತಿಗಳನ್ನು ಶರಣರು ತಿರಸ್ಕರಿಸಿದರು. ಕಾಯಕದ ಧೋರಣೆಗೆ ಒಳಪಟ್ಟ ವೃತ್ತಿಗಳು ಮಾತ್ರ ಕಾಯಕಗಳಾಗಿ ಗುರುತಿಸಿಕೊಂಡವು. ಎಲ್ಲ ಶರಣರಿಗೂ ಕಾಯಕ ಕಡ್ಡಾಯವಾಗಿತ್ತು. ಯಾವುದೇ ಕಾಯಕವನ್ನು ಮಾಡುವ ಸ್ವಾತಂತ್ರ್ಯ ಶರಣರಿಗಿತ್ತು. ಮೊದಲಿದ್ದ ವೃತ್ತಿಗಳಲ್ಲಿ ಮೇಲು–ಕೀಳೆಂಬ ಭಾವನೆಗಳಿದ್ದವು. ಶರಣರು ಈ ವೃತ್ತಿ ತಾರತಮ್ಯವನ್ನು ಹೋಗಲಾಡಿಸಿ, ಎಲ್ಲ ಕಾಯಕಗಳನ್ನು ಸಮಾನ ದೃಷ್ಟಿಯಿಂದ ನೋಡಿದರು. ಹೀಗಾಗಿ ಶರಣರಲ್ಲಿರುವ ಸಮಾನತೆಯಂತೆ, ಕಾಯಕಗಳಲ್ಲಿಯೂ ಸಮಾನತೆ ಕಾಣಿಸಿತು. ಶರಣರ ಕಾಲಕ್ಕಿದ್ದ ಕಾಯಕಗಳನ್ನು ಹೀಗೆ ವರ್ಗೀಕರಿಸಬಹುದಾಗಿದೆ:

1. ಉತ್ಪಾದನಾಮೂಲ ಕಾಯಕಗಳು
2. ಕೌಶಲ್ಯಮೂಲ ಕಾಯಕಗಳು
3. ಅಗತ್ಯಸೇವೆಯ ಕಾಯಕಗಳು
4. ವೃತ್ತಿನಿರತ ಕಾಯಕಗಳು
5. ಕಲಾಸಂಬಂಧಿ ಕಾಯಕಗಳು
6. ಮಹಿಳೆಯರ ಕಾಯಕಗಳು.

ಹೀಗೆ ಈ ವರ್ಗೀಕರಣವನ್ನು ಬೆಳೆಸುತ್ತ ಹೋಗಬಹುದಾಗಿದೆ. ಸಮಾಜ ವ್ಯವಸ್ಥೆಯಲ್ಲಿ ಮುಖ್ಯವಾಗಿದ್ದ ಇಂತಹ ಕೆಲವು ಕಾಯಕಗಳ ಬಗೆಗೆ ಇಲ್ಲಿ ಪ್ರಸ್ತಾಪಿಸಲಾಗಿದೆ. ಶರಣರ ಭಕ್ತಿಮೀಮಾಂಸೆ ಇದ್ದ ಹಾಗೆ ಕಾಯಕಮೀಮಾಂಸೆಯೂ ಇದೆ. ಶರಣರು ನಡೆಸಿದ ಗಂಭೀರ ಚರ್ಚೆಯಿಂದಲೇ ಈ ಕಾಯಕಗಳು, ಇವುಗಳ ಉದ್ದೇಶಗಳು ಹುಟ್ಟಿಕೊಂಡಿವೆ. ಮೊದಲೂ ಜನರಿದ್ದರು, ಆ ಜನರಲ್ಲಿ ಮೇಲು ಕೀಳು ಎದ್ದು ಕಾಣುತ್ತಿತ್ತು. ಮೊದಲೂ ವೃತ್ತಿಗಳಿದ್ದವು, ಆ ವೃತ್ತಿಗಳಲ್ಲಿ ಮೇಲು–ಕೀಳು ಭಾವನೆ ತುಂಬಿ ತುಳುಕುತಿತ್ತು. ವಚನ ಚಳವಳಿ, ಶರಣರಲ್ಲಿ ಸಮಾನತೆಯನ್ನು ತಂದಂತೆ, ಕಾಯಕಗಳಿಗೂ ಏಕರೂಪದ ಗೌರವವನ್ನು ತಂದುಕೊಟ್ಟಿತು.

ಶರಣರ ಕಾಯಕಮೀಮಾಂಸೆಯಲ್ಲಿ ಅನೇಕ ಹೊಸ ವಿಷಯಗಳಿವೆ. ಕಾಯಕವೆಂಬುದು ಶರಣರಿಗೆ ಸಮಾನತೆಯನ್ನು ಹುಟ್ಟುಹಾಕುವ ಪ್ರಮುಖ ಅಸ್ತ್ರವಾಯಿತು. ಅಂತೆಯೇ ಅವರು ಅದನ್ನು ಕೈಲಾಸವೆಂದು ಕರೆದರು. ಭಕ್ತ–ಶರಣನಾದಾಗ ಕಾಯಕ ಕೈಲಾಸವಾಗಿ ಕಾಣುತ್ತದೆ. ಹೀಗಾಗಿ ಭಕ್ತಿಮೀಮಾಂಸೆಗೂ ಕಾಯಕಮೀಮಾಂಸೆಗೂ ನೇರವಾದ ಸಂಬಂಧವಿದೆ. ವೃತ್ತಿಯಲ್ಲಿ ಭಕ್ತಿಯಿಲ್ಲ, ವೃತ್ತಿ ಕೈಲಾಸವಾಗುವುದಿಲ್ಲ. ಅಂತೆಯೇ ಶರಣರು ವೃತ್ತಿಯನ್ನು ಕಾಯಕವನ್ನಾಗಿ ಮಾಡಿದರು, ಕಾಯಕದಲ್ಲಿ ಕೈಲಾಸವನ್ನು ಕಂಡರು.

ಈ ಮೇಲೆ ವಿವರಿಸಿದ ಕಾಯಕಗಳಲ್ಲಿ ಯಾರು ಬೇಕಾದರೂ, ಯಾವ ಕಾಯಕವನ್ನಾದರೂ ಮಾಡಬಹುದಾಗಿತ್ತು. ಕಾಶ್ಮೀರದರಸ ಕಲ್ಯಾಣಕ್ಕೆ ಬಂದು ಕಟ್ಟಿಗೆಯನ್ನು ಮಾರುವ ಮೋಳಿಗೆ ಮಾರಯ್ಯನಾಗಿ ಕಾಣಿಸಿಕೊಂಡ. ಕರಣಿಕ, ಮಂತ್ರಿ ಅರಸನ ಕೆಲಸವು ಎಷ್ಟು ಮುಖ್ಯವಾಗಿತ್ತೋ ಕಟ್ಟಿಗೆ–ಕುಳ್ಳು–ಹುಲ್ಲುಗಳನ್ನು ಮಾರುವವರ ಕಾಯಕವೂ ಅಷ್ಟೇ ಮುಖ್ಯವಾಗಿತ್ತು. ಕಾಯಕದಲ್ಲಿ ನಿರತನಾದಾಗ ನಿಷ್ಠೆ, ಏಕಾಗ್ರಚಿತ್ತತೆ ಇರಬೇಕೆಂದು ಹೇಳಿದ ಶರಣರು ಕಾಯಕವೆಂಬುದನ್ನು ಒಂದು ಮೌಲ್ಯವನ್ನಾಗಿ ಮಾಡಿದರು. ಕಾಯಕದ ಮಾದರಿ ಬೇರೆಯಾಗಿರಬಹುದು, ಅದರ ಉಪಯೋಗ ಬೇರೆಯಾಗಿರಬಹುದು. ಆದರೆ ಕಾಯಕಜೀವಿಗಳು ಒಂದೇಯಾಗಿದ್ದರು, ಕಾಯಕದ ಗೌರವ ಕೂಡ ಒಂದೇ ಆಗಿತ್ತು. ಶರಣರಿಂದ ಕಾಯಕವೆಂಬುದು ಕ್ರಾಂತಿಕಾರಿಯಾಗಿ ಕಾಣಿಸಿಕೊಂಡಿತು, ಬದಲಾವಣೆಯ ಹರಿಕಾರನಾಗಿ ಬಂದಿತು.

ಭಾರತದಂತಹ ದೇಶದಲ್ಲಿ ವೃತ್ತಿಗಳೇ ಜಾತಿಗಳಾಗಿ ಬೆಳೆದುನಿಂತವು. ಜಾತಿ ತಾರತಮ್ಯದ ಮೂಲಕ ವೃತ್ತಿತಾರತಮ್ಯವೂ ಕಾಣಿಸಿಕೊಂಡಿತ್ತು. ಈ ಸತ್ಯವನ್ನರಿತ ಶರಣರು ಕಾಯಕದಂತಹ ಹೊಸ ಮೌಲ್ಯವೊಂದನ್ನು ಕಟ್ಟಿಕೊಟ್ಟರು. ಜಾತಿತಾರತಮ್ಯವನ್ನು ಹೋಗಲಾಡಿಸಿದಾಗ ಸಹಜವಾಗಿಯೇ ವೃತ್ತಿತಾರತಮ್ಯ ಹೊರಟುಹೋಯಿತು. ಜಾತಿ–ವೃತ್ತಿ, ಇವುಗಳಲ್ಲಿರುವ ನಿಕಟ ಸಂಬಂಧವನ್ನು ಗುರುತಿಸಿದ ಶರಣರು ಜಾತಿಸಂಘರ್ಷದ ಮೂಲಕ ವೃತ್ತಿಸಮಾನತೆಯನ್ನು ತಂದರು. ವೃತ್ತಿಗೌರವ ಹೆಚ್ಚಾದಾಗ, ವೃತ್ತಿಸಮಾನತೆ ಬಂದಾಗ ಅದು ಕಾಯಕವೆಂದು ಕರೆಯಿಸಿಕೊಂಡಿತು. ಮೊದಲಿದ್ದ ವೃತ್ತಿಗಳಲ್ಲಿ ಭಕ್ತಿ ಇರಲಿಲ್ಲ, ಹೀಗಾಗಿ ಅಸಮಾನತೆಯಿತ್ತು. ಶರಣರು ವೃತ್ತಿಗಳಿಗೆ ಭಕ್ತಿಯನ್ನು ಜೋಡಿಸಿದರು. ಆಗ ಅದು ಕಾಯಕವಾಯಿತು. ಅದೇ ಮುಂದೆ ದಾಸೋಹವಾಗಿ ಬೆಳೆಯಲು ಕಾರಣವಾಯಿತು. ಕಾಯಕದಲ್ಲಿ ಭಕ್ತಿ ಇದ್ದಾಗ ಮಾತ್ರ ದಾಸೋಹ ಸಾಧ್ಯ. ಈ ಕಾರಣದಿಂದಲೇ ಕಾಯಕ–ದಾಸೋಹ ಒಂದು ನಾಣ್ಯದ ಎರಡು ಮುಖಗಳಾದವು.

**1. ಉತ್ಪಾದನಾ ಮೂಲ ಕಾಯಕಗಳು**

ಉತ್ಪಾದನೆಯ ಕ್ರಿಯೆ ಅತಿ ಮುಖ್ಯವಾದುದು. ಉತ್ಪಾದನೆ ಇರದಿದ್ದರೆ ಬದುಕೇ ಇಲ್ಲ. ಉತ್ಪಾದನೆಯೇ ನಿಜವಾದ ಜೀವನವಾಗಿದೆ. ಜೀವಕ್ಕೂ ಜೀವನಕ್ಕೂ ನೇರವಾದ ಸಂಬಂಧವಿದೆ. ಜೀವ ಇರಬೇಕಾದರೆ ಗಾಳಿ, ನೀರು, ಊಟ ಬೇಕೇಬೇಕು. ಗಾಳಿ–

ನೀರು ಪ್ರಕೃತಿದತ್ತವಾಗಿ ಸಿಗುತ್ತವೆ. ಆದರೆ ಆಹಾರವನ್ನು ಉತ್ಪತ್ತಿ ಮಾಡಬೇಕಾಗುತ್ತದೆ. ಆಹಾರ ಉತ್ಪಾದನೆಗೆ ಕೃಷಿ ಬೇಕೇಬೇಕು. ಹೀಗಾಗಿ ಕೃಷಿ ಅಥವಾ ಒಕ್ಕಲುತನವು ಉತ್ಪಾದನಾ ಕಾಯಕಗಳಲ್ಲಿ ಮಹತ್ವದ್ದಾಗಿದೆ. ಉತ್ಪಾದನಾ ಮೂಲ ಕಾಯಕಗಳಲ್ಲಿ ಕೃಷಿ, ಹೈನುಗಾರಿಕೆ, ಕುರಿಸಾಕಾಣಿಕೆ, ಮೀನುಗಾರಿಕೆಯಂತಹ ಕಾಯಕಗಳು ಬರುತ್ತವೆ.

**(i) ಕೃಷಿ**

ಕೃಷಿಗೆ ಭಾರತದೇಶದಲ್ಲಿ ಬಹು ದೊಡ್ಡ ಪರಂಪರೆಯಿದೆ. ಹೊಯ್ಸಳರ ಶಾಸನವೊಂದರಲ್ಲಿ ಒಕ್ಕಲಿಗರನ್ನು ಭೂಮಿಕಾರರೆಂದು ಕರೆಯಲಾಗಿದೆ. ಇನ್ನು ಕೆಲವು ಶಾಸನಗಳಲ್ಲಿ ಕೃಷಿಕರನ್ನು ಒಕ್ಕಲಮಕ್ಕಳು ಎಂದು ಉಲ್ಲೇಖಿಸಲಾಗಿದೆ. ರೈತನು ಭೂಮಿಯನ್ನು ಹದಮಾಡಿ, ಬೆವರು ಸುರಿಸಿ ದುಡಿದು ಆಹಾರ ಉತ್ಪಾದನೆ ಮಾಡುತ್ತಾನೆ. ಆಯಗಾರರ ಸಹಕಾರದೊಂದಿಗೆ ವಿವಿಧ ಬಗೆಯ ದವಸ-ಧಾನ್ಯಗಳನ್ನು ಬೆಳೆಯುತ್ತಾನೆ. ಹೀಗೆ ಬೆಳೆದ ಬೆಳೆಯನ್ನು ರೈತ ತಾನೊಬ್ಬನೇ ಉಪಯೋಗಿಸುತ್ತಿರಲಿಲ್ಲ. ಅದರಲ್ಲಿ ಒಂದು ಭಾಗ ತೆರಿಗೆಗೆ ಹೋಗುತ್ತಿತ್ತು ಮತ್ತೊಂದು ಭಾಗ ಆಯಗಾರರಿಗೆ ಹೋಗುತ್ತಿತ್ತು. ಉಳಿದ ಭಾಗವನ್ನು ರೈತ ಉಪಯೋಗಿಸುತ್ತಿದ್ದ. ಕೃಷಿಯೆಂಬುದು ಈ ಕಾರಣಕ್ಕಾಗಿಯೇ ಈ ದೇಶದಲ್ಲಿ ಪವಿತ್ರ ವೃತ್ತಿಯಾಗಿದೆ. ಶರಣರು ಬಂದ ನಂತರ ಕೃಷಿಯನ್ನು ಕಾಯಕವನ್ನಾಗಿ ಮಾಡಿ ಕೃಷಿಕನ ಗೌರವವನ್ನು ಹೆಚ್ಚಿಸಿದರು.

ಶರಣರಲ್ಲಿ ಒಕ್ಕಲಿಗ ಮುದ್ದಣ್ಣ, ಅಜಗಣ್ಣ, ಏಲೇಶ್ವರ ಕೇತಯ್ಯ, ಇಳಿಹಾಳ ಬೊಮ್ಮಯ್ಯ, ಬಡಿಹೊರಿ ಬ್ರಹ್ಮಯ್ಯ ಇವರೆಲ್ಲಾ ಕೃಷಿಕರೇ ಆಗಿದ್ದರು. ಬಾಹೂರ ಬೊಮ್ಮಣ್ಣ, ನೀಲಕಂಠಯ್ಯ ಇವರು ತೋಟಗಾರಿಕೆಯ ಕೃಷಿ ಮಾಡುತ್ತಿದ್ದರೆಂದು ತಿಳಿದುಬರುತ್ತದೆ. ಅಕ್ಕಮ್ಮ, ರೆಮ್ಮವ್ವೆ, ಮುಕ್ತಾಯಕ್ಕ ಈ ಮೊದಲಾದ ಶರಣೆಯರು ಕೃಷಿಕಾಯಕದವರಾಗಿದ್ದರೆಂಬುದು ಗಮನಿಸಬೇಕಾದ ಸಂಗತಿಯಾಗುತ್ತದೆ.

ಸಿದ್ಧರಾಮೇಶ್ವರನು ತನ್ನ ವಚನವೊಂದರಲ್ಲಿ ಕೃಷಿಕನನ್ನು "ಕೃಷೀವಲ"ನೆಂದು ಕರೆದಿದ್ದಾನೆ (ವ. 131). "ಓಲೆಯಕಾರ ಭಕ್ತನಾದರೆ ಮನದ ಕ್ರೋಧ ಬಿಡದು. ಒಕ್ಕಲಿಗ ಭಕ್ತನಾದರೆ ಅವನ ಪೂರ್ವಾಶ್ರಮ ಬಿಡದು" (ವ. 160) ಎಂದು ಚೆನ್ನಬಸವಣ್ಣ ಹೇಳಿದ್ದಾನೆ. ಒಕ್ಕಲಿಗ ವೃತ್ತಿಯು ವಚನಕಾರರು ಬರುವುದಕ್ಕಿಂತ ಮೊದಲೇ ಇತ್ತು. ಆದರೆ ಅದು ಪೂರ್ವಾಶ್ರಮದಿಂದ ಬಿಡುಗಡೆ ಹೊಂದಿರಲಿಲ್ಲ. ಶರಣರು ಒಕ್ಕಲಿಗ ವೃತ್ತಿಯನ್ನು ಕೃಷಿಕಾಯಕವನ್ನಾಗಿ ಮಾಡಿದರು. ಆಗ ಅದು ಪೂರ್ವಾಶ್ರಮದಿಂದ ಮುಕ್ತವಾಯಿತು.

"ಹದನರಿದು ಹರಗುವ, ಬೆದೆಯರಿದು ಬಿತ್ತುವ,
ಸಸಿ ಮಂದವಾದರೆ ತೆಗೆವನಯ್ಯಾ.
ಒಂದೊಂದ ಹೊಕ್ಕು ಬೆಳವಸಿಯ ತೆನೆ ಮೆಲುವನಯ್ಯಾ.

ಕೊಯಿವನಯ್ಯಾ, ಕೊರೆವನಯ್ಯಾ, ಒಕ್ಕೂವೆನಯ್ಯಾ, ತೂರುವೆನಯ್ಯಾ
ಲೋಕಾದಿ ಲೋಕಂಗಳ ಹಗೆಯನಿಕ್ಕುವನಯ್ಯಾ ದೇವರಾಯ ಸೊಡ್ಡಳ."
– ಸೊಡ್ಡಳ ಬಾಚರಸ (ಸ.ವ.ಸಂ. 9, ವ. 826)

ಈ ವಚನದಲ್ಲಿ ಸೊಡ್ಡಳ ಬಾಚರಸನು ಕೃಷಿಕಾಯಕದ ವಿನ್ಯಾಸ ಹೇಗಿರುತ್ತದೆಂಬುದನ್ನು ವಿವರಿಸಿದ್ದಾನೆ. ಹೊಲವನ್ನು ಹರಗಬೇಕಾದರೆ ಭೂಮಿ ಹದಗೊಂಡಿರಬೇಕು. ಆಗ ಮಾತ್ರ ಹರಗಲು ಸಾಧ್ಯವಾಗುತ್ತದೆ. ಅದೇ ರೀತಿ ಬೀಜಗಳನ್ನು ಬಿತ್ತಬೇಕಾದರೆ ಭೂಮಿ ಬೆದೆಗೊಂಡಿರಬೇಕು. ಆಗ ಮಾತ್ರ ಬೀಜಗಳು ಹುಟ್ಟಿಕೊಳ್ಳುತ್ತವೆ. ಹೀಗೆ ಬೀಜವು ಭೂಮಿಯಲ್ಲಿ ಬಿದ್ದು ಸಸಿಯಾಗಿ ಬೆಳೆದು, ತೆನೆ ಬಿಟ್ಟು, ಕೊಯ್ಲು ಬರುತ್ತದೆ. ಆಗ ಕೊಯ್ಯುವ, ಕೊರೆವ, ಒಕ್ಕುವ, ತೂರುವ ಕಾರ್ಯಗಳು ಪ್ರಾರಂಭವಾಗುತ್ತವೆ. ಎಲ್ಲ ವೈರತ್ವವನ್ನು ಮರೆತು ಎಲ್ಲರಿಗೂ ಅನ್ನ ನೀಡುವ ರೈತ ನಿಜವಾದ ದೇವಮಾನವನಾಗಿದ್ದಾನೆ. ಇಂತಹ ದೇವಮಾನವನನ್ನು ಶರಣರು ಅತ್ಯಂತ ಗೌರವದಿಂದ ಕಂಡಿದ್ದಾರೆ. ಆತ ಮಾಡುವ ಕೃಷಿಕಾಯಕವನ್ನು ಪೂಜ್ಯತೆಯಿಂದ ನೋಡಿದ್ದಾರೆ.

"ನೀ ಕೊಟ್ಟ ಭೂಮಿಗೆ ಮುಂದೆ ಕರಲು, ಹಿಂದೆ ಇಗ್ಗರಲು
ಅಲ್ಲಿಂದ ಆಚೆ ಮಧ್ಯಭೂಮಿ,
ಮೂರು ನೆಲದ ಭೂಮಿಯ ಆರೈದು ಬೆಳೆದಿಹೆನೆಂದಡೆ
ಇದಾರ ವಶವೂ ಅಲ್ಲ.
ಕಾಮ ಭೀಮ ಜೀವ ಧನದೊಡೆಯ ನೀನೆ ಬಲ್ಲೆ"
– ಒಕ್ಕಲಿಗ ಮುದ್ದಣ್ಣ (ಸ.ವ.ಸಂ. 6, ವ. 1742)

ಒಕ್ಕಲಿಗ ಮುದ್ದಣ್ಣನು ಈ ವಚನದಲ್ಲಿ ಭೂಮಿಯ ಲಕ್ಷಣವನ್ನು ಹೇಳಿದ್ದಾನೆ. ಭೂಮಿ ಒಂದೇ ರೀತಿಯಾಗಿರುವುದಿಲ್ಲ. ತೆಗ್ಗು, ತೆಂಬ, ಕರಲು, ಕೊರಕಲು ಇದ್ದೇ ಇರುತ್ತದೆ. ಸಮತಟ್ಟಾದ ಫಲವತ್ತಾದ ಭೂಮಿ ಸಿಗುವುದು ವಿರಳ. ಕೃಷಿಕಾಯಕದಿಂದ ಹೀಗೆ ತೆಗ್ಗು-ತೆಂಬದಿಂದ ಕೂಡಿದ ಭೂಮಿಯನ್ನು ಸಮತಟ್ಟಾಗಿ ಮಾಡಬಹುದು. ಬಂಜರುಭೂಮಿಯನ್ನು ಫಲವತ್ತಾದ ಭೂಮಿಯನ್ನಾಗಿ ಮಾಡಬಹುದು. ಈ ಬದಲಾವಣೆ ಕೃಷಿಕಾಯಕದಿಂದ ಮಾತ್ರ ಸಾಧ್ಯವಾಗುತ್ತದೆಂದು ಒಕ್ಕಲಿಗ ಮುದ್ದಣ್ಣ ಹೇಳಿದ್ದಾನೆ. ಕೃಷಿಕಾಯಕದ ಈ ವ್ಯವಸಾಯವನ್ನು ಮುದ್ದಣ್ಣ ಆಧ್ಯಾತ್ಮದ ಪರಿಭಾಷೆಯಲ್ಲಿ ವಿವರಿಸಿದ್ದಾನೆ. ಭೂಮಿಯಲ್ಲಿಯೂ ಕೂಡ ಸಮತಟ್ಟು ಸಮಾನ ಅಳತೆಯಿಲ್ಲ. ಅದೇ ರೀತಿ ಜೀವಿಗಳಲ್ಲಿಯೂ ಕೂಡ ಒಂದೇ ರೀತಿಯಿಲ್ಲ. ಭೂಮಿಯನ್ನು ಸಮತಟ್ಟು ಮಾಡಿಕೊಳ್ಳಲು, ಜನಸಮುದಾಯದಲ್ಲಿ ಸಮಾನತೆಯನ್ನು ಹುಟ್ಟುಹಾಕಲು ಕಾಯಕ ಹೇಗೆ ಮುಖ್ಯವಾಗುತ್ತದೆಂಬುದನ್ನು ಶರಣರು ತಮ್ಮ ವಚನಗಳಲ್ಲಿ ವಿವರಿಸಿದ್ದಾರೆ.

ಅಲ್ಲಮಪ್ರಭು ತಮ್ಮ ವಚನವೊಂದರಲ್ಲಿ ತೋಟವನ್ನು ಒಂದು ಪ್ರತಿಮೆಯಾಗಿರಿಸಿಕೊಂಡು, ಆಧ್ಯಾತ್ಮವೆಂಬ ಕೃಷಿಯ ಕುರಿತು ಮಹತ್ವದ ವಿಚಾರಗಳನ್ನು ತಿಳಿಸಿದ್ದಾರೆ.

"ತನುವ ತೋಂಟವ ಮಾಡಿ ಮನವ ಗುದ್ದಲಿ ಮಾಡಿ
ಅಗೆದು ಕಳೆದೆನಯ್ಯಾ ಭ್ರಾಂತಿಯ ಬೇರ
ಒಡೆದು ಸಂಸಾರದ ಹಂಟೆಯ, ಬಗಿದು ಬಿತ್ತಿದೆನಯ್ಯಾ ಬ್ರಹ್ಮಬೀಜವ
ಅಖಂಡಮಂಡಲವೆಂಬ ಬಾವಿ, ಪವನವೆ ರಾಟಾಳ
ಸುಷುಮ್ನನಾಳದಿಂದ ಉದಕವ ತಿದ್ದಿ
ಸಮತೆ ಸೈರಣೆಯೆಂಬ ಬೇಲಿಯನಿಕ್ಕಿ
ಆವಾಗಲೂ ಈ ತೋಂಟದಲ್ಲಿ ಜಾಗರವಿದ್ದು
ಸಸಿಯ ಸಲುಹಿದೆನು ಕಾಣಾ ಗುಹೇಶ್ವರಾ"
– ಅಲ್ಲಮಪ್ರಭು (ಸ.ವ.ಸಂ. 2, ವ. 1231)

ಈ ವಚನದಲ್ಲಿ ತೋಟದ ಕೃಷಿಯ ಮೂಲಕ, ಆಧ್ಯಾತ್ಮ ಕೃಷಿಯನ್ನು ಹೇಳಲಾಗಿದೆ. ತನುವೇ ತೋಟ, ಮನವೇ ಗುದ್ದಲಿ ಬಹಳ ಸುಂದರವಾದ ಮತ್ತು ಸೂಕ್ತವಾದ ಹೋಲಿಕೆ. ತೋಟದಲ್ಲಿ ಕೃಷಿಕಾಯಕವ ಮಾಡಿ ಬೆಳೆ ತೆಗೆಯಬೇಕಾದರೆ ಏನೆಲ್ಲ ಮಾಡಬೇಕೊ, ಅವೆಲ್ಲಾ ಕ್ರಿಯೆಗಳನ್ನು ಆಧ್ಯಾತ್ಮದ ಕೃಷಿಯಲ್ಲಿ ಮಾಡಬೇಕೆಂದು ಪ್ರಭು ತಿಳಿಸಿದ್ದಾರೆ. ಹೀಗೆ ಕೃಷಿಕಾಯಕದ ಪ್ರತಿಮೆಯ ಮೂಲಕ ಆಧ್ಯಾತ್ಮವನ್ನು ಸರಳವಾಗಿ ಎಲ್ಲರಿಗೂ ತಿಳಿಯುವಂತೆ ಹೇಳಿದ್ದು ಕುತೂಹಲಕಾರಿಯಾಗಿದೆ. ಹೀಗಾಗಿ ಶರಣರಲ್ಲಿ ಕೃಷಿಯೆಂಬುದು ಕೇವಲ ಕಾಯಕ ಮಾತ್ರವಾಗಿರದೆ, ಅದು ಆಧ್ಯಾತ್ಮವನ್ನು ಅರಿತುಕೊಳ್ಳುವ ಸುಲಭ ಮಾರ್ಗವೂ ಆಗಿದೆ.

**(ii) ಹೈನುಗಾರಿಕೆ**

ಕೃಷಿ ಕಾಯಕದಲ್ಲಿ ರೈತ ಬೀಜಗಳನ್ನು ಬಿತ್ತಿ ಬೆಳೆಗಳನ್ನು ಬೆಳೆಯುತ್ತಾನೆ. ಹೈನುಗಾರಿಕೆಯಲ್ಲಿ ಹಸು, ಎಮ್ಮೆಗಳನ್ನು ಸಾಕಿ, ಹಾಲನ್ನು ಕರೆದು ಹಾಲಿನ ಉತ್ಪನ್ನಗಳು ದೊರೆಯುವಂತೆ ಈ ಕಸುಬುಗಾರರು ಮಾಡುತ್ತಾರೆ. ಕೃಷಿಯಿಂದ ಬರುವ ರೊಟ್ಟಿ, ರಾಗಿ, ಅನ್ನ ಹೇಗೆ ಮುಖ್ಯವೊ, ಅದೇ ರೀತಿ ಹಾಲು, ಮೊಸರು, ತುಪ್ಪ ಮುಖ್ಯವಾಗುತ್ತವೆ. ಹಿಂದೆ ಗೋವಳಿಗರು, ಗೋಪಾಲರು ಈ ವೃತ್ತಿಯನ್ನು ಮಾಡುತ್ತಿದ್ದರು. ಹೈನುಗಾರಿಕೆಗೆ ಸಂಬಂಧಿಸಿದಂತೆ ಶರಣರ ವಚನಗಳಲ್ಲಿ ಅನೇಕ ಮಾಹಿತಿಗಳು ದೊರೆಯುತ್ತವೆ.

ಬಸವಣ್ಣ ತಮ್ಮ ವಚನವೊಂದರಲ್ಲಿ 'ಒರೆಯಾವು' ಎಂದು ಬಳಸಿದ್ದಾನೆ. ಒರೆಯಾವು ಎಂದರೆ ಕರುವಿದ್ದ ಆಕಳೆಂದು ಅರ್ಥ. ಇನ್ನೊಂದು ವಚನದಲ್ಲಿ "ಹೆಪ್ಪನೆರೆದ ಹಾಲು ಕೆಟ್ಟು ತುಪ್ಪವಪ್ಪಂತೆ ಇಪ್ಪರು" (ವ. 869) ಎಂದು ಹೇಳಿದ್ದಾರೆ. "ಹಾಲ ಸಾಗರಲೊಳಗೋಲಾಡುತಿರ್ದು ಓರೆಮಾವಿನ ಬೆನ್ನ ಹರಿವನಲ್ಲ" (ವ. 1756) ವೆಂದು ಚೆನ್ನಬಸವಣ್ಣ ತಮ್ಮ ವಚನದಲ್ಲಿ ತಿಳಿಸಿದ್ದಾನೆ. "ಹಂದಿ ಹೈನವಲ್ಲ, ಸಂಸಾರಿ ಜಂಗಮವಲ್ಲ. (ವ. 713)" ಎಂದು ಚಂದಿಮರಸ ತನ್ನ ವಚನದಲ್ಲಿ ಹೇಳುತ್ತ ಹೈನುಗಾರಿಕೆ ಮಾಡಲು ಆಕಳು, ಎಮ್ಮೆ, ಆಡು, ಕುರಿಗಳನ್ನು ಸಾಕಾಣಿಕೆ ಮಾಡಬೇಕೆಂದು ಹೇಳಿದ್ದಾನೆ. ಹಾಲಿನ ಉತ್ಪನ್ನಗಳನ್ನು ವಚನ ಭಂಡಾರಿ ಶಾಂತರಸನು "ಕೀಲೋತ್ಪನ್ನದಂತೆ (ವ. 31)"

ಎಂದು ತಿಳಿಸಿದ್ದಾನೆ. "ದಧಿಯ ಕಡೆವಾಕೆಯ ತುದಿಗಂಡವ ಕೊಯಿದು (ವ. 553)" ಎಂದು ಸಗರ ಬೊಮ್ಮಣ್ಣನ ವಚನದಲ್ಲಿ ಬರುತ್ತದೆ.

"ಹಾಲು ತುಪ್ಪವ ನುಂಗಿ ಬೇರಾಗಬಲ್ಲುದೆ ?" (ವ. 418) ಎಂದು ಅಕ್ಕಮಹಾದೇವಿ ಪ್ರಶ್ನಿಸಿದ್ದಾಳೆ. "ಎಮ್ಮೆಗೊಂದು ಚಿಂತೆ, ಸಮ್ಮಗಾರಗೊಂದು ಚಿಂತೆ (ವ. 108)" ಎಂದು ಇನ್ನೊಂದು ವಚನದಲ್ಲಿ ಹೇಳಿದ್ದಾಳೆ. ಶರಣರ ಕಾಲಕ್ಕೆ ಆಕಳು ಎಮ್ಮೆಗಳನ್ನು ಸಾಕಿ ಹೈನುಗಾರಿಕೆಯ ಕಾಯಕವನ್ನು ಮಾಡುತ್ತಿದ್ದರೆಂಬುದು ಇದರಿಂದ ಸ್ಪಷ್ಟವಾಗುತ್ತದೆ. ದನಗಳನ್ನು ಕಾಯುತ್ತಿದ್ದ ತುರುಗಾಹಿ ರಾಮಣ್ಣನು, ಆಕಳು ಮತ್ತು ಹೋರಿ ಕೂಡುವುದರಿಂದ ಕರು ಹುಟ್ಟುವುದನ್ನು ಹೇಳುತ್ತ, ಆಗ ಆಕಳಿನಿಂದ ಕ್ಷೀರಧಾರೆಯೇ ಹರಿಯುತ್ತದೆಂದು ಹೈನುಗಾರಿಕೆ ಕಾಯಕದ ಸಂಭ್ರಮವನ್ನು ತಿಳಿಸಿದ್ದಾನೆ.

### (iii) ಕುರಿ ಸಾಕಾಣಿಕೆ

12ನೇ ಶತಮಾನದಲ್ಲಿ ಕುರಿ ಸಾಕಾಣಿಕೆಯು ಮುಖ್ಯ ಕಾಯಕವಾಗಿತ್ತೆಂದು ತಿಳಿದು ಬರುತ್ತದೆ. ಕೆಲವು ವಚನಗಳಲ್ಲಿ ಕುರಿ ಸಾಕಾಣಿಕೆಯ ವಿಚಾರ ಪ್ರಸ್ತಾಪವಾಗಿದೆ. ಕಬ್ಬಿನ ತೋಟಕ್ಕೆ ಹೊಕ್ಕ ಕುರಿ, ಕಬ್ಬಿನ ಹೊರಗಿನ ಎಲೆಯನ್ನು ತಿನ್ನುತ್ತದೆ. ಅದೇ ಆನೆ ಕಬ್ಬನ್ನೇ ತಿನ್ನುತ್ತದೆ. ಕಬ್ಬಿನ ಎಲೆಯನ್ನೇ ತಿಂದರೂ ಕುರಿ ಹಾಲು ಕೊಡುತ್ತದೆ. ಬಸವಣ್ಣ ತನ್ನ ವಚನವೊಂದರಲ್ಲಿ (ವ. 597) ಈ ವಿಷಯವನ್ನು ಪ್ರಸ್ತಾಪಿಸಿದ್ದಾನೆ. ಶರಣರಲ್ಲಿ ವೀರಗೊಲ್ಲಾಳನು ಕುರಿ ಕಾಯುತ್ತ ಕುರಿ ಸಾಕಾಣಿಕೆ ಕಾಯಕದಲ್ಲಿ ತೊಡಗಿದ್ದನೆಂಬುದು ಸ್ಪಷ್ಟವಾಗುತ್ತದೆ.

> "ಆಡು ಅರುದಿಂಗಳು ಹುಟ್ಟಿ, ಮೂರು ದಿನ ಬದುಕಿ
> ಒಂದು ದಿನ ಸತ್ತಿತ್ತು
> ಕುರಿ ಕುರುಹ ಮೇದು, ಮರಿಗೆ ಮೊಲೆಗೊಟ್ಟಿತ್ತು.
> ಮರಿಯು ಮೊಲೆಯ ನುಂಗಿ, ಕುರುಹಿನೊಳಗಡಗಿತ್ತು
> ಆಡು ಕುರಿ ಬಂದ ಬಟ್ಟೆಯ ಸೋಧಿಸಿಕೊಂಡು,
> ತೋಳನ ತೊಡಕಿನಲ್ಲಿ ಸಾಯದೆ, ಅರಿ ವೀರಬೀರೇಶ್ವರಲಿಂಗವ"
> – ವೀರಗೊಲ್ಲಾಳ (ಸ.ವ.ಸಂ. 9, ವ. 86)

ವೀರಗೊಲ್ಲಾಳನ ಈ ವಚನದಲ್ಲಿ ಆಡು, ಕುರಿ, ಮರಿ, ತೋಳಗಳ ಪ್ರಸ್ತಾಪವಿದೆ. ಕುರಿಸಾಕಾಣಿಕೆ ಎಷ್ಟೊಂದು ಕಷ್ಟದಿಂದ ಕೂಡಿತ್ತೆಂಬುದು ಇದರಿಂದ ತಿಳಿದುಬರುತ್ತದೆ. ಆಡು ಮತ್ತು ಕುರಿಗಳಿಂದ ಅನೇಕ ಲಾಭಗಳಿವೆ. ಆಡಿನ ಹಾಲನ್ನು ಔಷಧವಾಗಿಯೂ ಉಪಯೋಗಿಸುತ್ತಾರೆ. ಕುರಿಯ ಉಣ್ಣೆ, ಉಡುಪುಗಳನ್ನು ಸಿದ್ಧಪಡಿಸಲು, ಕಂಬಳಿ ಮಾಡಲು ಬರುತ್ತದೆ. ಆಡು–ಕುರಿಗಳನ್ನು ತೋಳಗಳಿಂದ ರಕ್ಷಿಸಿಕೊಂಡು ಈ ಕಾಯಕವನ್ನು ಮುಂದುವರಿಸಿಕೊಂಡು ಹೋಗಬೇಕಾದರೆ ಕುರಿ ಕಾಯುವವನ ಮೈಯೆಲ್ಲಾ ಕಣ್ಣಾಗಿರಬೇಕಾಗಿರುತ್ತದೆ. ತೋಳನ ತೊಡಕಿನಲ್ಲಿ ಸಾಯದೇ ಹೇಗೆ ಕುರಿ ಪಾರಾಗುತ್ತದೆಯೋ, ಹಾಗೆಯೇ ಮನುಷ್ಯ ಈ ಸಂಸಾರ ಜಂಜಾಟದಿಂದ ಮೇಲೆದ್ದು

ಬರಬೇಕೆಂದು ಇಲ್ಲಿ ವೀರಗೊಲ್ಲಾಳ ಹೇಳಿದ್ದಾನೆ. ವೀರಗೊಲ್ಲಾಳನ ನಿಜವಾದ ಹೆಸರು ಕಾಟ ಕೂಟನೆಂದು ತಿಳಿದುಬರುತ್ತದೆ. ಗೊಲ್ಲಾಳನ ಈ ಕಾಯಕನಿಷ್ಠೆಯನ್ನು ಕಂಡು ಗುಪ್ತಮಂಚಣ್ಣ ವರ್ಣನೆ ಮಾಡಿದ್ದಾನೆ. "ಅರಿದಡೆ ಗೊಲ್ಲಾಳನಂತಿರಬೇಕು, ಮರೆದಡೆ ಚಂದಯ್ಯನಂತಿರಬೇಕು" (ವ. 307) ಎಂದು ಗುಪ್ತಮಂಚಣ್ಣ ಹೇಳಿದ್ದಾನೆ.

**(iv) ಮೀನುಗಾರಿಕೆ**

ಹೊಳೆ, ಕೆರೆ, ನದಿಗಳಲ್ಲಿ ಮೀನು ಹಿಡಿದು, ಮೀನುಗಾರಿಕೆ ಕಾಯಕ ಮಾಡುತ್ತಿದ್ದ ಶರಣರ ಬಗೆಗೆ ಅನೇಕ ವಚನಗಳಲ್ಲಿ ಪ್ರಸ್ತಾಪವಿದೆ. 12ನೇ ಶತಮಾನದಲ್ಲಿ ಮೀನುಗಾರಿಕೆಯನ್ನು ಒಂದು ಕಾಯಕವನ್ನಾಗಿ ಮಾಡಿದ ಶರಣರು, ಈ ಕಾಯಕ ಜೀವಿಗಳ ಬಗೆಗೆ ಪ್ರಸ್ತಾಪಿಸಿದ್ದಾರೆ. ಮೀನುಗಾರನಿಗೆ ಕಬ್ಬಿಲನೆಂದು ಕರೆಯುತ್ತಿದ್ದರೆಂದು ಚೆನ್ನಬಸವಣ್ಣ ಹೇಳಿದ್ದಾನೆ. ಮೀನು ಹಿಡಿಯುವ ಕ್ರಿಯೆಗೆ ಜನವೇಂಟೆಯೆಂದು ಕರೆಯುತ್ತಿದ್ದರು. ಮೀನು ಹಿಡಿಯಲು ಬಲೆ ಬೀಸಿ ಗಾಳವನ್ನು ಹಾಕುತ್ತಿದ್ದರು. ಇದಕ್ಕೆ ಗಾಣವೆಂದು ಕೂಡ ಕರೆಯುತ್ತಿದ್ದರು. ಆ ಕಾಲದಲ್ಲಿ ತೆಪ್ಪ, ದೋಣಿಗಳನ್ನು ಬಳಸಿಕೊಂಡು ಮೀನು ಹಿಡಿಯುತ್ತಿದ್ದರು. ಅಂತೆಯೇ ಗಾಳದ ಕಣ್ಣಪ್ಪನಿಗೆ, ಗಾಣದ ಕಣ್ಣಪ್ಪನೆಂದು ಕರೆಯುತ್ತಿದ್ದರು. ಈತ ಗಾಣಿಗನಾಗಿರದೆ, ಮೀನುಗಾರನಾಗಿದ್ದಾನೆ. ಕಂಭದ ಮಾರಿತಂದೆ ಕೂಡ ಕಬ್ಬಿಲಿಗನಾಗಿದ್ದನು. ಅಂಬಿಗರು ದೋಣಿ ನಡೆಸುವುದರೊಂದಿಗೆ ಮೀನುಗಾರಿಕೆಯ ಕಾಯಕವನ್ನು ಮಾಡುತ್ತಿದ್ದರೆಂದು ಹಡಪದಪ್ಪಣ್ಣನ ಪುಣ್ಯಸ್ತ್ರೀ ಲಿಂಗಮ್ಮ ಹೇಳಿದ್ದಾಳೆ. "ತುಂಬಿದ ಕೆರೆಗೆ ಅಂಬಿಗ ಹರಿಗೋಲ ಹಾಕಿ ಬಲೆಯ ಬೀಸಿದಂತೆ" (ವ. 1289) ಎಂದು ಹೇಳಿರುವ ಲಿಂಗಮ್ಮನ ಈ ನುಡಿಯಲ್ಲಿ ಅಂಬಿಗರ ಕಾಯಕದ ಬಗೆಗೆ ಸ್ಪಷ್ಟತೆಯಿದೆ.

"ಗಾಣವ ಹಾಕಲಾಗಿ ಆರಾರು ಸಿಕ್ಕಿದರು ಆರೈಕೆಗೊಳ್ಳಯ್ಯ" (ವ. 264) ಎಂದು ತನ್ನ ವಚನದಲ್ಲಿ ಹೇಳಿರುವ ಗಾಳದ ಕಣ್ಣಪ್ಪನು ಈ ಕಾಯಕದಲ್ಲಿ ಹೆಸರುವಾಸಿಯಾಗಿದ್ದನು. ತನ್ನ ವೃತ್ತಿಪ್ರತಿಮೆಯ ಮೂಲಕ, ಆಧ್ಯಾತ್ಮದ ಮಹತ್ವವನ್ನು ಈ ಶರಣ ಕಂಡುಕೊಂಡಿದ್ದಾನೆ. ಇನ್ನೊಬ್ಬ ವಚನಕಾರ ಕಂಬದ ಮಾರಿತಂದೆಯು ಮೀನು ಹಿಡಿಯುವ ಬಲೆಯ ಪ್ರತಿಮೆಯ ಮೂಲಕ ಆಧ್ಯಾತ್ಮದ ವಿಷಯವನ್ನು ತಿಳಿಸಿಕೊಟ್ಟಿದ್ದಾನೆ. ಮಹಾನದಿಯಲ್ಲಿ ಆಡುತ್ತಿದ್ದ ಮತ್ಸ್ಯಕ್ಕೆ ಒಂದು ಮಾಂಸದ ತುಂಡು ಕಟ್ಟಿ ಬಲೆಯ ಬೀಸಿದರೆ, ಬಲೆಗೆ ಆ ಮತ್ಸ್ಯ ಸಿಕ್ಕಿಹಾಕಿಕೊಳ್ಳಲಿಲ್ಲವೆಂದು ಹೇಳುತ್ತಾ ಈ ಕಾಯಕದ ಕ್ರಿಯೆಯನ್ನು ಆಧ್ಯಾತ್ಮದ ಪರಿಭಾಷೆಯನ್ನಾಗಿ ಬಳಸಿಕೊಂಡಿದ್ದಾನೆ. "ಆ ಮತ್ಸ್ಯದಂಗದ ಕವಚ ದುಸ್ಸಂಗದ ನೀರ ಮುಟ್ಟದಾಗಿ ಅದು ನಿರಂಗದ ಮತ್ಸ್ಯ" (ವ. 7) ಎಂದು ಹೇಳಿರುವ ಕಂಬದ ಮಾರಿತಂದೆಯು ಇಲ್ಲಿ ವೃತ್ತಿ ಪ್ರತಿಮೆಯ ಮೂಲಕ ಮಹತ್ವದ ಅನುಭಾವದ ನುಡಿಗಳನ್ನಾಡಿದ್ದಾನೆ. ಹೀಗಾಗಿ ಶರಣರಿಗೆ ಕಾಯಕವೆಂದರೆ ಅದು ಕೇವಲ ದುಡಿಮೆಯಾಗಿರಲಿಲ್ಲ. ಅದೊಂದು ಅನುಭಾವದ ಮಾರ್ಗವಾಗಿತ್ತು.

□

# ಕೃಷಿ ವಿಜ್ಞಾನಿ ಭತ್ತದ ಡಾ. ಎಂ. ಮಹದೇವಪ್ಪ (1937--2021)

**ನಗರ್ಲೆ ಶಿವಕುಮಾರ**

ಅಂಗವೆ ಭೂಮಿಯಾಗಿ, ಲಿಂಗವೆ ಬೆಳೆಯಾಗಿ,
ವಿಶ್ವಾಸವೆಂಬ ಬತ್ತ ಒಲಿದು ಉಂಡು
ಸುಖಿಯಾಗಿರಬೇಕೆಂದ ಕಾಮಭೀಮ ಜೀವಧನದೊಡೆಯ

**– ಒಕ್ಕಲಿಗ ಮುದ್ದಣ್ಣ**

ಮೈಸೂರು ಜಿಲ್ಲೆಯಿಂದ 1997 ರಲ್ಲಿ ಚಾಮರಾಜನಗರ ಜಿಲ್ಲೆಯು ಬೇರ್ಪಟ್ಟು ಪ್ರತ್ಯೇಕವಾದ ಜಿಲ್ಲೆಯ ಅಸ್ತಿತ್ವವನ್ನು ಪಡೆದಿದೆ. ಈ ಜಿಲ್ಲೆಯು ನೀರಾವರಿ ಹಾಗೂ ಒಣಬೇಸಾಯ ಎರಡನ್ನು ಒಳಗೊಂಡಿದೆ. ಅಲ್ಲದೆ ಶ್ರೀಮಂತಿಕೆ ಮತ್ತು ಬಡತನ ಎರಡನ್ನು ಹೊಂದಿರುವ ಜಿಲ್ಲೆಯಲ್ಲಿ ಕಾವೇರಿ ಹಾಗೂ ನುಗು ನದಿಗಳು ಹರಿದು ಪ್ರಕೃತಿ ಸಿರಿಸಂಪತ್ತಿನ ಜಿಲ್ಲೆಯಾಗಿ ರೂಪುಗೊಳ್ಳುವಂತೆ ಮಾಡಿದೆ. ಇಂತಹ ನಾಡಿನಲ್ಲಿ ಯದುವಂಶ ಮೊಳಕೆಯೊಡೆದು ನಾಡನ್ನು ಆಳಿತು ಎಂದರೆ ಎಲ್ಲರೂ ಹೆಮ್ಮೆ ಪಡಬೇಕು. ಅದೇ ರೀತಿ ತೆರಕಣಾಂಬಿ, ಉಮ್ಮತ್ತೂರು ಪಾಳೆಗಾರರು ಸೇರಿದಂತೆ ಚೋಳರು, ಗಂಗರು, ವಿಜಯನಗರದ ಅರಸರು ಹಾಗೂ ಶ್ರೀರಂಗಪಟ್ಟಣದ ಸುಲ್ತಾನರು ಈ ಜಿಲ್ಲೆಯಲ್ಲಿ ಆಳ್ವಿಕೆ ನಡೆಸಿ ಐತಿಹಾಸಿಕ ಸ್ಥಾನವನ್ನು ನೀಡಿದ್ದಾರೆ.

ಮೈಸೂರು, ಬೆಂಗಳೂರು, ಕೇರಳ ಹಾಗೂ ತಮಿಳುನಾಡು ಗಡಿಭಾಗಕ್ಕೆ ಹೊಂದಿಕೊಂಡಿರುವ ಚಾಮರಾಜನಗರ ಜಿಲ್ಲೆಯು, ಕೊಳ್ಳೇಗಾಲದ ಮಲೆಮಾದೇಶ್ವರ ಬೆಟ್ಟ, ಬಿಳಿಗಿರಿರಂಗಯ್ಯನ ಬೆಟ್ಟ ಹಾಗೂ ಬಂಡಿಪುರ ಅರಣ್ಯಗಳಿಂದ ಆವೃತಗೊಂಡು ಶ್ರೀಗಂಧದ ಬೀಡೆಂದು ಹೆಸರು ಪಡೆದಿದೆ. ಧಾರ್ಮಿಕ, ಐತಿಹಾಸಿಕ ನಾಡು ಸಾಹಿತ್ಯಿಕವಾಗಿಯೂ ಸಹ ಹಿಂದುಳಿದಿಲ್ಲವೆನ್ನಬಹುದು. ಶ್ರೀ ನಿಜಗುಣ ಶಿವಯೋಗಿಗಳು, ಶ್ರೀ ಮುಪ್ಪಿನ ಷಡಕ್ಷರಿದೇವರು, ಶ್ರೀ ತೋಂಟದ ಸಿದ್ಧಲಿಂಗ ಸ್ವಾಮಿಗಳು ಸೇರಿದಂತೆ ಅನೇಕ ಮಹನೀಯರಿಗೆ ಜನ್ಮ ಹಾಗೂ ಕರ್ಮಭೂಮಿಯಾದ ಜಿಲ್ಲೆಯಲ್ಲಿ ಹುಟ್ಟಿ ನಮ್ಮೊಡನೆ ಬಾಳಿ, ಬದುಕಿ ಹೋದವರು ಕೃಷಿ ಕ್ಷೇತ್ರದ ಬೆರಗು, ಭತ್ತದ ತಳಿ ವಿಜ್ಞಾನಿ ಡಾ. ಎಂ. ಮಹದೇವಪ್ಪನವರು.

ಇತ್ತೀಚೆಗೆ ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯಿಂದ 'ಜೀವಮಾನ ಸಾಧನೆ ಪ್ರಶಸ್ತಿ'ಗೂ ಭಾಜನರಾಗಿದ್ದ ಚಾಮರಾಜನಗರ ತಾಲ್ಲೂಕಿನ ಮಾದಾಪುರ

ಗ್ರಾಮದವರಾದ ಡಾ. ಎಂ. ಮಹದೇವಪ್ಪನವರು ಮೈಸೂರಿನಲ್ಲಿ 6 ಮಾರ್ಚ್ 2021 ರಂದು ಶಿವೈಕ್ಯರಾದರು. ಶಿವೈಕ್ಯರ ಸ್ಮರಣಾರ್ಥ ಸುತ್ತೂರು ಪರಮಪೂಜ್ಯ ಜಗದ್ಗುರುಗಳವರು ಹಾಗೂ ವಿಜಯಪುರ ಜ್ಞಾನಯೋಗಾಶ್ರಮದ ಶ್ರೀ ಸಿದ್ಧೇಶ್ವರ ಮಹಾಸ್ವಾಮಿಗಳವರ ದಿವ್ಯ ಸಾನ್ನಿಧ್ಯದಲ್ಲಿ 14 ಮಾರ್ಚ್ 2021 ರಂದು ಮೈಸೂರಿನಲ್ಲಿ 'ಸಮರ್ಪಣೆ' ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಕೃಷಿಕ್ಷೇತ್ರಕ್ಕೆ ತಮ್ಮ ಬದುಕನ್ನು ಮೀಸಲಾಗಿರಿಸಿದ್ದ ಭತ್ತದ ಮಹದೇವಪ್ಪನವರ ಪರಿಚಯವನ್ನು ಸಾಹಿತಿಗಳಾದ ಪ್ರೊ. ಮಲೆಯೂರು ಗುರುಸ್ವಾಮಿಯವರು ರಚಿಸಿರುವ 'ಸಾಹಿತ್ಯ ಸುವರ್ಣಾವತಿ' ಗ್ರಂಥದಿಂದ ಆಯ್ದುಕೊಳ್ಳಲಾಗಿದೆ.

ಜನನ : 04-08-1937, ಮಾದಾಪುರ, ಚಾಮರಾಜನಗರ ತಾಲ್ಲೂಕು

ಕೌಟುಂಬಿಕ ವಿವರ : ಮಾದಪ್ಪ-ತಂದೆ, ಪುಟ್ಟಬಸಮ್ಮ-ತಾಯಿ,
ಶ್ರೀಮತಿ ಸುಧಾ-ಪತ್ನಿ, ಮಮತಾ-ಪುತ್ರಿ, ಎಂ. ರಾಜೇಂದ್ರ-ಪುತ್ರ

ವಿದ್ಯಾಭ್ಯಾಸ : ಎಂ.ಎಸ್ಸಿ (ಅಗ್ರಿ) ಮದ್ರಾಸ್ ವಿ.ವಿ. ಕೊಯಂಬತ್ತೂರು, 1962
ಪಿಎಚ್.ಡಿ. ಕೊಯಂಬತ್ತೂರ್, ತಮಿಳುನಾಡು-1965

ವೃತ್ತಿ : ಪ್ರಾಧ್ಯಾಪಕರು, ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯ
ಕುಲಪತಿಗಳು: ಧಾರವಾಡ ಕೃಷಿ ವಿ.ವಿ.-ಎರಡು ಅವಧಿಗೆ
(1994 -2000)

ಸಂಶೋಧನೆ : ಮಧು, ಮಂಗಳ, ಪುಷ್ಪ, ಪ್ರಾಗ್ಮಾಟಿಕ್ಸ್, ಇನ್‌ಟಾನ್, ವಿಕ್ರಮ್, ಜಿ.ಎಂ.ಕೆ.-17, ಮುಕ್ತಿ, ಬಿಳಿಮುಕ್ತಿ-ಈ ಒಂಬತ್ತು ರೀತಿಯ ಭತ್ತದ ತಳಿಗಳ ಸಂಶೋಧನೆ.
41 ಎಂ.ಎಸ್ಸಿ (ಅಗ್ರಿ) ವಿದ್ಯಾರ್ಥಿಗಳಿಗೆ, 16 ಪಿಎಚ್.ಡಿ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ.

**ಕೃತಿಗಳು :**

1. ಕರ್ನಾಟಕದಲ್ಲಿ ಭತ್ತದ ಕೃಷಿ (ಕನ್ನಡ) 1977 ಪ್ರ : ಇಂಡಿಯನ್ ಇನ್ಸ್‌ಸ್ಟಿಟ್ಯೂಟ್ ಆಫ್ ಸೋಷಿಯೋ-ಎಕೋನಾಮಿಕ್ಸ್ ಸ್ಟಡೀಸ್, ಬೆಂಗಳೂರು.
2. ಭತ್ತದ ಕೃಷಿ (ಕನ್ನಡ) 1977, ಪ್ರ : ಸಿಂಡಿಕೇಟ್ ಅಗ್ರಿಕಲ್ಚರ್ ಫೌಂಡೇಷನ್, ಮಣಿಪಾಲ್, ಕರ್ನಾಟಕ
3. ಭತ್ತ (ಕನ್ನಡ) 1984 ಪ್ರ : ಇಂಡಿಯಾ ಬುಕ್‌ಹೌಸ್, ಬೆಂಗಳೂರು
4. ಬೀಜೋತ್ಪಾದನೆ ಮತ್ತು ತಾಂತ್ರಿಕತೆ (ಕನ್ನಡ) 1985, ಪ್ರ : ಇಂಡಿಯಾ ಬುಕ್‌ಹೌಸ್, ಬೆಂಗಳೂರು

5. ಭತ್ತದ ಉತ್ಪಾದನೆಯ ಸಮಸ್ಯೆಗಳು ಮತ್ತು ಪರಿಹಾರ (ಕನ್ನಡ) 1985, ಪ್ರ : ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು.
6. ಭತ್ತ (ಮಾನೋಗ್ರಾಫ್) (ಕನ್ನಡ) 1985, ಪ್ರ : ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು
7. Rice (English), 1988, Pub : India Book House Bangalore (IBH)
8. ಸುಧಾರಿತ ಬೀಜೋತ್ಪಾದನೆ (ಕನ್ನಡ) 1993, ಪ್ರ : ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು
9. Parthenium, (English) 1994, Pub:University of Mysore, Mysore
10. Ten years of Hybrid Rice research in Karnataka, India, (English) 1994, Pub: Karnataka University, Dharwad
11. ಪಾರ್ಥೇನಿಯಂ (ಕನ್ನಡ), 1994, ಪ್ರ : ಕನ್ನಡ ಸಾಹಿತ್ಯ ಪರಿಷತ್, ಕರ್ನಾಟಕ ಸರ್ಕಾರ, ಬೆಂಗಳೂರು.
12. ಪಾರ್ಥೇನಿಯಂ ಕಳೆ ಮತ್ತು ಅದರ ನಿರ್ವಹಣೆ (ಇಂಗ್ಲಿಷ್-1999; ಕನ್ನಡ-2003), ಪ್ರ : ಕೃಷಿ ವಿಶ್ವವಿದ್ಯಾಲಯ ಧಾರವಾಡ ಮತ್ತು ಬೆಂಗಳೂರು
13. ಪಾರ್ಥೇನಿಯಂ ಮತ್ತು ಅದರ ನಿರ್ವಹಣೆ (ಕನ್ನಡ)-2003, ಪ್ರ : ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು.
14. ಸಮಗ್ರ ಬಿಜೋತ್ಪಾದನೆ (ಕನ್ನಡ), 2005, ಪ್ರ : ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು
15. ಸಮಗ್ರ ಬಿಜೋತ್ಪಾದನೆ (ಕನ್ನಡ), 2006, ಪ್ರ : ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು
16. ರೈತಗೀತೆ (ಕನ್ನಡ), 2009, ಪ್ರ : ಸಂವಹನ ಪ್ರಕಾಶಕರು, ಮೈಸೂರು
17. ಪಾರ್ಥೇನಿಯಂ-ಪರಿಸರ ಮತ್ತು ನಿರ್ವಹಣೆ, 2010, ಪ್ರ : ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿ, ಕರ್ನಾಟಕ ಸರ್ಕಾರ, ಬೆಂಗಳೂರು
18. ಕೃಷಿ ಸಂಗಮ (ಕನ್ನಡ)-2011, ಪ್ರ : ಸ್ನೇಹ ಪ್ರೆಸ್, ವಿಜಯನಗರ, ಬೆಂಗಳೂರು-560040
19. ಅನ್ನದಾತನ ಹಾಡುಗಳು -2013
20. ಸಮಗ್ರ ಕೃಷಿ ಕಾವ್ಯ, 100ಕ್ಕೂ ಹೆಚ್ಚು ಇಂಗ್ಲಿಷ್ ಲೇಖನಗಳು, 150ಕ್ಕೂ ಹೆಚ್ಚು ಕನ್ನಡ ಲೇಖನಗಳ ಪ್ರಕಟಣೆ

ಆಸ್ಟ್ರೇಲಿಯಾ, ಕೀನ್ಯಾ, ಯುರೋಪ್, ಯು.ಎಸ್.ಎ., ಕ್ಯೂಬಾ, ಯುಎಸ್ ಎಸ್ಆರ್., ಚೀನಾ, ಯುಕೆ, ಜಪಾನ್, ಫಿಲಿಫೈನ್ಸ್ ಮುಂತಾದ 18 ದೇಶಗಳಲ್ಲಿ ಪ್ರಬಂಧ ಮಂಡನೆ.

**ಪ್ರಶಸ್ತಿ, ಪುರಸ್ಕಾರಗಳು**

**ರಾಷ್ಟ್ರಮಟ್ಟದವು**

1. ವಾಟುಮಲ್ ಫೌಂಡೇಶನ್ ಅಂತಾರಾಷ್ಟ್ರೀಯ ಪ್ರಶಸ್ತಿ, ಹವಾಯಿ 1987
2. ಪದ್ಮಶ್ರೀ ಪ್ರಶಸ್ತಿ, 2005

3. ಹೂಕರ್ ಪ್ರಶಸ್ತಿ, 1981
4. ಸರ್. ಎಂ. ವಿಶ್ವೇಶ್ವರಯ್ಯ ಪ್ರಶಸ್ತಿ, 1999
5. ಸರ್ ಚೋಟುರಾಂ ಪ್ರಶಸ್ತಿ, 1996
6. ಜೀವಮಾನ ಸಾಧನೆ ಪ್ರಶಸ್ತಿ, 2009
   (Leader summit -Agri Today)
7. ಜೀವಮಾನ ಸಾಧನೆ ಪ್ರಶಸ್ತಿ, 2011
   (Indian Society for Applied Bio-tech)
8. ಎಲ್.ಟಿ.ಎ. ಪ್ರಶಸ್ತಿ, 2011
   (Society of Extension education-Agra.
9. ಪದ್ಮಭೂಷಣ ಪ್ರಶಸ್ತಿ, 2013

**ರಾಜ್ಯಮಟ್ಟದವು**

1. ರಾಜ್ಯೋತ್ಸವ ಪ್ರಶಸ್ತಿ, 2013
2. ಕನ್ನಡದ ಶ್ರೇಷ್ಠ ಕೃತಿ ಬರಹ ಪ್ರಶಸ್ತಿ, 2005

**ವಿಶ್ವವಿದ್ಯಾಲಯಗಳ ಪ್ರಶಸ್ತಿ**

ಕೆ.ಕೆ.ಎಂ. ಪ್ರಶಸ್ತಿ, 1972

ನಾಗಮ್ಮ ದತ್ತಾತ್ರೇಯ ಪ್ರಶಸ್ತಿ, 1989

ಗೌರವ ಡಾಕ್ಟರೇಟ್ : orissa university of Agriculture and Technology

**ಅಭಿನಂದನಾ ಗ್ರಂಥಗಳು**

1. Krishi prathibhe, 2000, ಬೆಂಗಳೂರು
2. **ಹೊನ್ನೇರು :** ಸಂಪಾದಕ: ಪ್ರೊ. ಮಲೆಯೂರು ಗುರುಸ್ವಾಮಿ, 2013
3. **ಡಾ.ಎಂ. ಮಹದೇವಪ್ಪ**-ಸಿದ್ಧಗಂಗಾ ಶ್ರೀಗಳ ಶತಮಾನೋತ್ಸವ ಸಂದರ್ಭದ ಪ್ರಕಟಣೆ.

**ನಿರ್ವಹಿಸಿದ ಜವಾಬ್ದಾರಿಗಳು**

1. Past chairman, Agri Scientists Recruitment Board-Govt. of India
2. Director, JSS Rural Development Foundation, Mysore-Present
3. Past President-Indian Agricultural Universities Association New Delhi.
4. Indian Society of Genetics and Plant Breeding, New Delhi

**Serving as Chairman of**

* Farmer first Committee of ICAR, New Delhi

* Research Coordination Committee, Central Silk Board, Ministry of Textiles, GOI, Bangalore
* Publication, Library, R & D Committee, Karnataka State Pollution Control Board
* RAC, Directorate of oil seeds research, ICAR, Hyderabad
* QRT, Centre for Research on Jute and Allied Fibres, ICAR, (CRIJAF), Kolkata.
* QRT, Institute of Spices research, ICAR, Calicut, Kerala

**Served as Chairman of**

* Policy committee, Protection of Plant-Varieties and Farmers Rights Authority, GOI
* Task Force of DBT, GOI-Biotechnology for SC/ST and Rural Population, New Delhi.
* RACs of TWELVE ICAR Directorates/Institutes and ONE Central Silk Board Institute.
* QRTs of FOUR ICAR Directorates/Institutes
* RAC, Karnataka State Sericultural Research Institute, GOK, Bangalore.

**Serving as Member of**

* Karnataka State Planning Board, Bangalore
* Karnataka State Krishi mission, Bangalore
* National Advisory Board on Management of Genetic Resources, ICAR, New Delhi
* Research Council, Central Coffee Research Institute, Coffee Board, Balehonnur
* Research Council, CFTRI, Mysore, CSIR, GOI (IInd term),
* AIRD Trust, Bangalore and AME Foundation, Bangalore
* Us Indo-American chamber of commerce and Industries, Washington
* Academy of General Education, T.A. pai Management Institute, Manipal

* Agriculture, Man & Ecology (AME) Board of Trustees, Bangalore

**Fellow of**

* National Academy of Agricultural Sciences
* Indian Society of Genetics and Plant Breeding
* National Academy of Sericultural Sciences
* Indaian Society of Seed Technologists
* Indian Science Writers Association
* Indian Academy of Biological Sciences
* Society for Hunger elimination, Tirupathi, Andhra Pradesh

**Served as Member of**

* Governing Council and Governing Body of ICAR Society, GOI, New Delhi
* US Indo-American Chamber of Commerce and Industries, Washington
* Consultative Group-Agriculture, Planning Commission, GOI
* National Commission on Agriculture-Rice Study Team
* Academic Council, Indian Agricultural Research Institute, New Delhi
* High Power Panel set up by Govt of Karnataka for Restructuring Agriculture Univsities
* Karnataka State Science and Technology Academy Council, Bangalore
* Sports Authority of Karnataka, Bangalore
* Governing Council, Water and Land Management Institute, Dharwad
* High Power Panel setup by Govt. of India in 2002 for restructuring ICAR
* National Commission on Women-Served as Task Force Member during late nineties

* Executive Council, Manage (Hyderabad), Ministry of Agric and Coop, GOI
* And many more

**ನಿಯತಕಾಲಿಕೆಗಳ ಪ್ರಧಾನ ಸಂಪಾದಕತ್ವ**

1. Indian Journal of Genetics and Plant Breeding -2001-2007
2. ಕೃಷಿ ಕಾಯಕ (ಕನ್ನಡ), ತ್ರೈಮಾಸಿಕ
   ಪ್ರ: ಅಖಿಲ ಭಾರತ ವೀರಶೈವ ಮಹಾಸಭಾ, ಬೆಂಗಳೂರು
3. ಪರಿಸರವಾಹಿನಿ (ಕನ್ನಡ)
   ಕರ್ನಾಟಕ ರಾಜ್ಯ ಪರಿಸರ ನಿಯಂತ್ರಣ ಇಲಾಖೆ

**ಸಹ ಸಂಪಾದಕತ್ವ**

1. Journal of Science of Food and Agriculture (International)
   ಈಗ

**ನಿರ್ದೇಶಕರು**

1. ಶರದ್ ಕೃಷಿ : (ಪೂನಾ)-ನಾಲ್ಕು ಭಾಷೆಗಳಲ್ಲಿ ಪ್ರಕಟಿತ-ಈಗ

**1. ರೈತಗೀತೆ (ಕವನಸಂಕಲನ), 2009, 2. ಕೃಷಿ ಸಂಗಮ (ಕವನಸಂಕಲನ), 2010, 3. ಅನ್ನದಾತನ ಹಾಡುಗಳು (ಕವನಸಂಕಲನ), 2013**

ಈ ಸಂಕಲನಗಳು ಮೂರಾದರೂ, ಎಲ್ಲ ಕೃತಿಗಳ ಮೂಲಧಾತು-ರೈತನ ಸ್ಥಿತಿಗಳು, ವ್ಯವಸಾಯದ ಕಷ್ಟ ಸುಖಗಳ ಅನಾವರಣ.

ಸಧ್ಯ, ಯಾರ ಕೈಗೂ ಸಿಕ್ಕಿಲ್ಲ ಸೂರ್ಯ, ಆತ್ಮದ ಮಾರಾಟ, ಕೃಷಿ ಸಂಪನ್ಮೂಲಗಳ ರಾಜಬೀಜ, ರಸಗೊಬ್ಬರ ಔಷಧಿಯಷ್ಟೇ. ಮನೆಯ ಬೀಜ ಬಂಗಾರ. ಮಣ್ಣು ಮಾತಾಡಿದಾಗ-ಇಂತಹ ಅಪರೂಪದ ವಸ್ತುವಿನ ಕವನಗಳು ನಮ್ಮನ್ನು ಚಿಂತನೆಗೆ ಹಚ್ಚುತ್ತವೆ; ರೈತನಿಗೆ ದಾರಿದೀಪದಂತಿವೆ. ಅಲ್ಲಲ್ಲಿ ಇರುವ ರೇಖಾ ಚಿತ್ರಗಳು ಕೃತಿಗಳ ಅಂದವನ್ನು ಹೆಚ್ಚಿಸಿವೆ.

ಮೊದಲ ಮಾತು ಬರೆದಿರುವ ನಾಡಿನ ಹಿರಿಯ ಚಿಂತಕರಾದ ಗೊ.ರು. ಚನ್ನಬಸಪ್ಪನವರು ಹೀಗೆ ಹೇಳಿದ್ದಾರೆ:

ಬೇಸಾಯದ ಬದುಕಿನ ಬುಡ-ಹೊಡೆಗಳನ್ನೆಲ್ಲ ಬಲ್ಲ ಮಹದೇವಪ್ಪನವರಿಂದ ಸಹಜವಾಗಿ ಮೂಡಿಬಂದಿರುವ ಈ ಗೀತೆಗಳು ನಮ್ಮ ರೈತರೊಡನೆ ಸರಸಸಲ್ಲಾಪ ನಡೆಸುತ್ತವೆ; ಅವರ ನೋವು-ನಲಿವುಗಳನ್ನು ಹಂಚಿಕೊಳ್ಳುತ್ತವೆ. ಇದು ಉಪಚಾರದ ಕಾವ್ಯವಲ್ಲ. ಯಾರ ಮೆಚ್ಚುಗೆಯ ನಿರೀಕ್ಷೆಯೂ ಅವರಿಗಿಲ್ಲ. ಅವರಲ್ಲಿರುವ ಕವಿಹೃದಯದ ಒಂದೇ ಹಂಬಲವೆಂದರೆ, ಬೆವರು ಹರಿಸಿ ದುಡಿಯುವ ರೈತರ ಬದುಕು ಹಸನಾಗಬೇಕು ಎಂಬುದಷ್ಟೇ. ಮಾತಿನ ಮೂಲಕ ಹೇಳಬೇಕಾದುದನ್ನು ಗದ್ಯಗೀತೆಗಳ ರೂಪದಲ್ಲಿ ಹೇಳಿದ್ದಾರೆ.

ಕುವೆಂಪು ಅವರು 'ಋಷಿ ಕವಿ' ಎನಿಸಿದ್ದರೆ, ಶ್ರೀ ಮಹದೇವಪ್ಪನವರನ್ನು 'ಕೃಷಿ ಕವಿ' ಎನ್ನಬಹುದು.

ಹೆಚ್ಚು ಅಂತ್ಯಪ್ರಾಸಪ್ರಿಯರಾದ ಲೇಖಕರು ಯಾವ ಆಡಂಬರವೂ ಇಲ್ಲದೆ, ಆರ್ಭಟವಿಲ್ಲದೆ ನೇರವಾಗಿ ತಮ್ಮ ಅನಿಸಿಕೆಯನ್ನು ಹರಿಯಬಿಟ್ಟಿದ್ದಾರೆ.

ಪ್ರಬುದ್ಧತೆ, ಬದ್ಧತೆ ಹಾಗೂ ಮುಗ್ಧತೆಗಳು ಮುಪ್ಪುರಿಗೊಂಡ ವ್ಯಕ್ತಿತ್ವಕ್ಕೆ ಮತ್ತೊಂದು ಹೆಸರು ಪದ್ಮಶ್ರೀ ಡಾ. ಎಂ. ಮಹದೇವಪ್ಪನವರು.

ಕೃಷಿ ವಿಜ್ಞಾನ ಕ್ಷೇತ್ರದಲ್ಲಿ ಅರಳಿದ ಕರ್ನಾಟಕದ ಈ ಏಕೈಕ 'ಪದ್ಮ'ದ ಬೀಜ ಮೊಳೆತದ್ದು ಗ್ರಾಮೀಣ ನಿರಕ್ಷರಕುಕ್ಷಿಗಳ ಕಾಯಕದ ಒಡಲಲ್ಲಿ. ತಾನು ಕಂಡುಂಡ ಕೃಷಿ ಕ್ಷೇತ್ರದ ಸಂಕೀರ್ಣ ಸತ್ಯಗಳನ್ನು ಖಂಡಾಂತರಗಳಲ್ಲಿಯೂ ಪಸರಿಸಿದ ಕೀರ್ತಿ ಇವರದು. ಅಧಿಕಾರದ ಗದ್ದುಗೆಗಳಲ್ಲಿ ಪೀಠಸ್ಥರಾದಾಗಲೂ ಇವರಿಗೆ ನೇಗಿಲಯೋಗಿಯದೇ ನಿತ್ಯಧ್ಯಾನ; ಫಸಲುಗಳ ಪರಿವೀಕ್ಷಣೆಯೇ ಪ್ರಾತಃ ಪೂಜೆ; ಮುಗಿಲಯಾನದಲ್ಲಿದ್ದರೂ ಮಣ್ಣಿನ ಕಣಕಣದೊಡನೆ ನಿರಂತರ ಅನುಸಂಧಾನ. ಮಾತುಗಳಲ್ಲಿ ವ್ಯರ್ಥ ಮೋಡಿಯಿಲ್ಲ. ಪ್ರತಿ ಮಾತೂ ಸಂಶೋಧನೆಯ ಆಗಸದಿಂದ ಇಳಿದುಬಂದ ಒಂದೊಂದು ಅಮೃತದ ಹನಿ. ನೇಗಿಲ ಗೆರೆಗಳೇ ಪದ್ಯದ ಸಾಲುಗಳು; ಅಕ್ಕರ ಅಕ್ಕರವೂ ಬಿತ್ತನೆಯ ಕಾಳು; ಶಾಸ್ತ್ರ, ಮೀಮಾಂಸೆಯ ಸಿಕ್ಕುಗಳಿಗೆ ಸಿಕ್ಕದ ದರ್ಶನವೇ ನಿಜದ ಮೊಳಕೆ. ವಾಸ್ತವದ ಅರ್ಥದಲ್ಲಿ ಈ ಕೃತಿ ನಿಜವಾದ 'ಭೂಮಿಗೀತೆ.' ಇವರಿಗೆ ಭತ್ತವೇ ಗುರು ಲಿಂಗ ಜಂಗಮ; ಸಂಶೋಧನೆಯ ಸಲಕರಣೆಗಳೇ ವಿಭೂತಿ ರುದ್ರಾಕ್ಷಿಗಳು; ನಿರೀಕ್ಷಿತ ಫಲವೇ ಪಾದೋದಕ ಪ್ರಸಾದ. ಈ ಅಷ್ಟಾವರಣದೊಳಗೆ ನಿರಂತರ ಧ್ಯಾನಸ್ಥ, ಕೃಷಿ ವಿಜ್ಞಾನದ ಈ 'ರಸ'ಋಷಿ.

ಈ ಕಾರಣಗಳಿಗಾಗಿಯೇ ನಮ್ಮ 'ಮಾದೇವಪ್ಪ' ಹೊಸಗನ್ನಡ ಸಾಹಿತ್ಯದ 'ಆದಿ ಕೃಷಿಕವಿ' ಎನ್ನುವುದು ಮಣ್ಣಿನ ಮಕ್ಕಳಿಗೆ ಹೆಮ್ಮೆ ತರುವ ಸಂಗತಿ.

**ಸಧ್ಯ ಯಾರ ಕೈಗೂ ಸಿಕ್ಕಿಲ್ಲ ಸೂರ್ಯ**

ಅಳೆಯಬಲ್ಲವರಾರು ಪ್ರಕೃತಿಯ ಔದಾರ್ಯ?
ಸವಿದುಳಿಸಿ ಬೆಳೆಸುವರಿಲ್ಲ ನಿಸರ್ಗದ ಸೌಂದರ್ಯ
ಮಾನವನ ಹಾದಿ ಆಗಿದೆ ಅದನ್ನು ಮುಗಿಸುವ ಕ್ರೌರ್ಯ
ಈಗ ಆರಂಭವಾಗಿದೆ ಪ್ರಕೃತಿಯನ್ನೇ ವಿಕಾರಗೊಳಿಸುವ ಕಾರ್ಯ
ಸಧ್ಯ ಯಾರ ಕೈಗೂ ಇನ್ನೂ ಸಿಕ್ಕಿಲ್ಲ, ಬಾನಿನ ಸೂರ್ಯ!

ಕೃಷಿ ಸಂಗಮಕ್ಕೆ ಮುನ್ನುಡಿ ಬರೆದ ಹಿರಿಯ ಕವಿ ಚೆನ್ನವೀರಕಣವಿ ಅವರ ಮಾತುಗಳು ಹೀಗಿವೆ:

"ಅನೇಕ ಬಗೆಯ ವಿಚಾರಗಳನ್ನು, ಭಾವನೆಗಳನ್ನು, ಒಂದೊಂದು ಪ್ರಾಸದ ಮಾತಿನಲ್ಲಿ ಹಿಡಿದಿಟ್ಟಿರುವುದರಿಂದ ಅವು ಸಾರವತ್ತಾಗಿವೆ. ಇಂತಹ ಹಿತೋಕ್ತಿಗಳಲ್ಲಿ ಕೆಲವನ್ನು ಇಲ್ಲಿ ಉದಾಹರಿಸಬಹುದು.

ಕೃಷಿ ಸಂಪನ್ಮೂಲಗಳ ರಾಜ "ಬೀಜ"
ಮರೆಯಬೇಡ ಕೃಷಿಕ ನೀನು ಮನೆ ಬೀಜವ
ಧಾನ್ಯಗಳಲಿ ಮೇಲು ಕೀಳೆಂಬುದಿಲ್ಲ
ಸಾಮೆ, ನವಣೆ, ಹಾರಕ, ಸೆಜ್ಜೆ, ಈ ಧಾನ್ಯಗಳಿಗೆ ಸಾಟಿ ಇಲ್ಲ.

ಕೊನೆಯಲ್ಲಿರುವ ಪ್ರಬಂಧ 'ಮಣ್ಣು ಮಾತನಾಡಿದಾಗ' ಇಡೀ ನಿಸರ್ಗದ ಮರ್ಮವನ್ನೇ ಮಾರ್ಮಿಕವಾಗಿ ನಿರೂಪಿಸುತ್ತದೆ.

'ಇಳೆಯಂದರೆ ಬರಿ ಮಣ್ಣಲ್ಲ
ನಮಗೇ ನೋಡುವ ಕಣ್ಣಿಲ್ಲ'
ಎಂಬ ಬೇಂದ್ರೆಯವರ ಕವಿತೆ ನೆನಪಾಗುತ್ತವೆ.

ಕುವೆಂಪು ಅವರು ರೈತನನ್ನು 'ನೇಗಿಲಯೋಗಿ' ಎಂದು ಬಣ್ಣಿಸಿ ಲೋಕದ ಕಣ್ಣು ತೆರೆಸಿದ್ದರು. ಆಧುನಿಕ ಯುಗದಲ್ಲಿ ಅನೇಕ ತಾಂತ್ರಿಕ ಸಂಶೋಧನೆಗಳು ಬದಲಾವಣೆ ತರುತ್ತಿರುವ ಸಂದರ್ಭದಲ್ಲಿ ಡಾ. ಮಹದೇವಪ್ಪನವರ ಈ ಗದ್ಯ ಗೀತೆಗಳು ಅಥವಾ ವಚನ-ಕವನಗಳು ರೈತರಿಗೆ ಮಾರ್ಗದರ್ಶಕವಾಗುವುದರಲ್ಲಿ ಸಂದೇಹವಿಲ್ಲ.

**ಭಾರತದ ಬೆನ್ನೆಲುಬು ಕೃಷಿ**

ಎಲ್ಲಾ ಭಾಷಣಗಳಲಿ ಮಾಡುವರು ಘೋಷಣೆ
ಕೃಷಿಯೇ ಭಾರತದ ಬೆನ್ನೆಲುಬೆಂದು
ಕಾಣದು ಒಂದಿಷ್ಟೂ ಶಾಲೆಗಳ ಪಾಠ-
ಪರಿಸರಗಳಲ್ಲಿ ಕೃಷಿ ಕಾಯಕವೆಂದರೇನೆಂದು?
ಸಮಯವಿಲ್ಲ ನಾಯಕರಿಗೆ ಮಾಡಲು ನೆಲ-ಜಲದ ಯೋಚನೆಯ
ಕ್ರಿಕೆಟ್-ಚುನಾವಣೆಗಳಿಗಾದರೆ ಇದೆಯಂತೆ ಅವರೆಲ್ಲರಿಗೂ ಸಾಕಷ್ಟು ಸಮಯ!
ಬೆಳೆಯುವನು ರೈತ ಹಗಲಿರುಳು ಬೆವರು ಹರಿಸಿ ದಿನಸಿ ದಾನ್ಯಗಳನ್ನೆಲ್ಲಾ
ಇವನಿಗಿಲ್ಲ ಸ್ಥಾನ ಬೆಲೆ ನಿಗದಿ ಮಾಡುವಲ್ಲಿ, ದಳ್ಳಾಳಿಗಳದೇ ಎಲ್ಲಾ!

'ಅನ್ನದಾತನ ಹಾಡುಗಳು' ಲೇಖಕರ ಮೂರನೆಯ ಕವನಸಂಕಲನ. ಕೃತಿಯ ಶೀರ್ಷಿಕೆಯೇ ಆಕರ್ಷಕವಾಗಿದೆ. ಮುನ್ನುಡಿಯಲ್ಲಿ ಡಾ. ದೇಜಗೌ ಹೀಗೆ ಪ್ರತಿಕ್ರಿಯಿಸಿದ್ದಾರೆ:

"ನಮ್ಮ ದೇಶದಲ್ಲಿ ಕೃಷಿ ವಿಜ್ಞಾನಿಗಳು ಆಗಿಹೋಗಿರಬಹುದು. ಆದರೆ ಡಾ. ಮಹದೇವಪ್ಪನವರಂತೆ ರೈತರ ಬಗ್ಗೆ ಕಾಳಜಿ ವಹಿಸಿರುವ ವಿಜ್ಞಾನಿಗಳು ವಿರಳವೆಂದೆ ತೋರುತ್ತದೆ. ಎಲ್ಲರೂ ಇವರಂತೆ ಘೋಷಿಸಿದ್ದರೆ, ಸರ್ಕಾರ ರೈತರ ಬಗ್ಗೆ ಅಸಡ್ಡೆಯಿಂದಿರುತ್ತಿರಲಿಲ್ಲ; ರೈತಾಪಿ ಜೀವನ ಉತ್ತಮ ಸ್ಥಿತಿಯಲ್ಲಿರುತ್ತಿತ್ತು. ಇಂದಿನ ಟೆಕ್ನಾಲಜಿ ಯುಗದಲ್ಲಿ ಮಾನವೀಯತೆಗೆ ಸ್ಥಾನವಿದೆಯೆ? ಇಲ್ಲಿದೆ, ನೋಡಿ

ಇಂದು ಬೆಳೆದಿದೆ ಮಾಹಿತಿ ಟೆಕ್ನಾಲಜಿ, ಇದೊಂದೇ ಸಾಕೆ?
ಬಿರುಸಿನಿಂದ ಬೆಳೆಯುತ್ತಿದೆ ಜೈವಿಕ ಟೆಕ್ನಾಲಜಿ, ಇದಿಷ್ಟೇ ಸಾಕೆ?

ಬೇಕಾಗಿದೆ ಕೂಡಿ ಬಾಳುವ, ರೈತರಿಗೆ ಚೇತನ ತುಂಬುವ ಟೆಕ್ನಾಲಜಿ.
ನರಳುತ್ತಿರುವ ರೈತರ ನೋವಿಳಿಸುವ ಟೆಕ್ನಾಲಜಿ
ಬೆಳೆದದ್ದನ್ನು ರಕ್ಷಿಸಿ, ಮೌಲ್ಯ ಏರಿಸಿ, ಜೋಪಿಡುವ ಕಾಳಜಿ,
ವೈಜ್ಞಾನಿಕ ಬೆಲೆ ಕೈಗೆನಿನ ಮಾಡುವ ಟೆಕ್ನಾಲಜಿ
ರೈತನ ಸರ್ವ ಸಸ್ಯಗಳಿಗೂ ಇಲ್ಲಿದೆ ಪರಿಹಾರ!

ಪರಿಸರ ರಕ್ಷಣೆಯ ಬಗ್ಗೆ ಸರ್ಕಾರಕ್ಕಾಗಲಿ, ಧನದಾಹಿಗಳಿಗಾಗಲಿ ಕಾಳಜಿಯೆ ಇಲ್ಲ. ದೇಶ ಹಾಳಾದರೇನಂತೆ, ತಾವು ತಮ್ಮವರು ಚೆನ್ನಾಗಿದ್ದರೆ ಸಾಕೆನ್ನುವುದು ಕುಬ್ಜ ಜನರ ಇಷ್ಟಾರ್ಥ. ಮರದ ವಿಷಾದದ ಆತ್ಮಗೀತೆ ಈ ಸಂಕಲನದ ವಿಶೇಷ.

ಆಗಾಗ ತಲೆಯೆತ್ತುತ್ತಿದೆ ಗಣಿಗಾರಿಕೆಯ ಅಪಸ್ವರ
ಸರ್ಕಾರ ಯೋಚಿಸಬೇಕು ತಪ್ಪಿಸಲು ಪರಿಸ್ಥಿತಿ ಆಗುವುದು ಗಂಭೀರ
ಗಣಿಗಾರಿಕೆ ನನ್ನ ಶತ್ರು, ವನ್ಯಜೀವಿಗಳು ನನ್ನ ಮಿತ್ರರು
ಮಾಡಿದರೆ ನನ್ನತ್ತ ತಾತ್ಸಾರ, ಜನ-ಜಾನುವಾರುಗಳಿಗೆ ನಷ್ಟ ಅಪಾರ

ಕಟುಕರಿಗೆ ಅಹಿಂಸೆಯ ಪಾಠ ಮಾಡಿದಂತಾಗಿದೆ, ಮಹದೇವಪ್ಪನವರಂಥ ವಿಜ್ಞಾನಿಗಳ ಸಲಹೆ, 'ಈಜುವ ಭತ್ತ'ದ ಸ್ವಗತ ಗೀತೆ ವಿನೂತನವೂ ಸ್ವಾರಸ್ಯಕರವೂ ಆದ ಕವಿತೆಯಾಗಿದೆ.

**(ದೇಜಗೌ)**

ಕೃಷಿ ವಿಜ್ಞಾನಿಯ ಪ್ರತಿಭೆ, ರೈತಪರ ಕಾಳಜಿಯ ಬಗ್ಗೆ ಇದಕ್ಕಿಂತ ಹೆಚ್ಚಿಗೆ ಹೇಳುವ ಅಗತ್ಯ ಕಂಡುಬರುವುದಿಲ್ಲ.

□

ಬೆವಸಾಯವ ಮಾಡಿ ಮನೆಯ ಬೀಯಕ್ಕೆ ಬತ್ತವಿಲ್ಲದಿರ್ದಡೆ
ಆ ಬೆವಸಾಯದ ಘೋರವೇತಕ್ಕಯ್ಯಾ ?
ಕ್ರಯವಿಕ್ರಯವ ಮಾಡಿ ಮನೆಯ ಸಂಚ ನಡೆಯದನ್ನಕ್ಕ
ಆ ಕ್ರಯವಿಕ್ರಯದ ಘೋರವೇತಕ್ಕಯ್ಯಾ ?
ಒಡೆಯನನೋಲೈಸಿ ತನುವಿಂಗೆ ಅಷ್ಟಭೋಗವ ಪಡೆಯದಿರ್ದಡೆ
ಆ ಓಲಗದ ಘೋರವೇತಕ್ಕಯ್ಯಾ ?
ಭಕ್ತನಾಗಿ ಭವಂ ನಾಸ್ತಿಯಾಗದಿರ್ದಡೆ
ಆ ಉಪದೇಶವ ಕೊಟ್ಟ ಗುರು, ಕೊಂಡ ಶಿಷ್ಯ
ಇವರಿಬ್ಬರ ಮನೆಯಲ್ಲಿ ಮಾರಿ ಹೊಗಲಿ
ಗುಹೇಶ್ವರನೆಂಬವನತ್ತಲೆ ಹೋಗಲಿ .

**– ಅಲ್ಲಮಪ್ರಭು**

# ವಾರ್ತಾವಿಹಾರ

**ಕುಮಾರಸ್ವಾಮಿ ವಿರಕ್ತಮಠ**

**ಸಮಾಜದ ಎಲ್ಲ ಸಮುದಾಯಗಳಿಗೂ ಸಮಾನ ಸೌಲಭ್ಯ ದೊರಕಬೇಕು**

ಸಮಾಜದ ಎಲ್ಲ ಸೌಲಭ್ಯವಂಚಿತ ಸಮುದಾಯಗಳಿಗೂ ಸಮಾನವಾದ ಸೌಲಭ್ಯಗಳು ದೊರಕಬೇಕು ಎಂದು ಪರಮಪೂಜ್ಯ ಜಗದ್ಗುರುಗಳು ಹೇಳಿದರು.

ಫೆಬ್ರವರಿ 14ರಂದು ಮೈಸೂರಿನಲ್ಲಿ ನಡೆದ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ನೂತನ ಕಟ್ಟಡ ಶಿಲಾನ್ಯಾಸ ಕಾರ್ಯಕ್ರಮದ ದಿವ್ಯ ಸಾನ್ನಿಧ್ಯ ವಹಿಸಿ, ಮೊದಲು ಸೌಲಭ್ಯವಂಚಿತ ಸಮುದಾಯಗಳಿಗೆ ಸೌಲಭ್ಯ ಒದಗಿಸಬೇಕು. ಯಾವುದೇ ಒಂದು ಸಮುದಾಯಕ್ಕೆ ಪ್ರತ್ಯೇಕವಾಗಿ ಸೌಲಭ್ಯ ಕಲ್ಪಿಸುವುದಕ್ಕಿಂತ ಎಲ್ಲ ಸಮುದಾಯ ಗಳನ್ನೂ ಒಟ್ಟುಗೂಡಿಸಿ ಸೌಲಭ್ಯಗಳನ್ನು ನೀಡುವುದು ಅಗತ್ಯ. ಸಮುದಾಯದಲ್ಲಿ ತುಳಿತಕ್ಕೊಳಗಾದವರಿಗೆ ಇದು ಸಿಗಬೇಕು. ಈ ವಿಷಯವನ್ನು ಸಮಾನ ದೃಷ್ಟಿಕೋನದಲ್ಲಿ ನೋಡಬೇಕು. ಸೌಲಭ್ಯಕ್ಕಾಗಿ ಒತ್ತಾಯಿಸುವವರು ಸರ್ಕಾರದ ಗುರುತರವಾದ ಹೊಣೆಗಾರಿಕೆಯನ್ನು ಗಮನಿಸಬೇಕು. ಸರ್ಕಾರವೂ ಇದನ್ನು ಸೂಕ್ಷ್ಮವಾಗಿ ಪರಾಮರ್ಶಿಸಬೇಕು ಎಂದು ತಿಳಿಸಿದರು.

ವಿಜಯಪುರ ಜ್ಞಾನಯೋಗಾಶ್ರಮದ ಶ್ರೀ ಸಿದ್ಧೇಶ್ವರ ಮಹಾಸ್ವಾಮಿಗಳು ಸ್ವಚ್ಛತೆ ಇರುವೆಡೆ ದೇವರು ಇರುತ್ತಾನೆ ಎಂದು ಬಸವಣ್ಣನವರು ಹೇಳಿದ್ದಾರೆ. ಅವರ ಕಾಯಕ, ದಾಸೋಹ ಮತ್ತು ಅನುಭಾವ ತತ್ತ್ವದ ಆಧಾರದ ಮೇಲೆ ಸುಂದರವಾದ ಸಮಾಜ ನಿರ್ಮಾಣವಾಗಬೇಕು. ಕಲ್ಯಾಣ ಸಮಾಜ ರೂಪುಗೊಳ್ಳಬೇಕು ಎಂದರು.

ರಾಜ್ಯ ಬಿಜೆಪಿ ಉಪಾಧ್ಯಕ್ಷರಾದ ಶ್ರೀ ಬಿ.ವೈ. ವಿಜಯೇಂದ್ರ ಸಮಾಜವನ್ನು ಒಗ್ಗೂಡಿಸುವ ಕಾರ್ಯವಾಗಬೇಕೇ ಹೊರತು ಒಡೆಯುವ ಕೆಲಸ ಮಾಡಬಾರದು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಹೊಸಮಠ ಶ್ರೀಗಳು, ಸಚಿವರಾದ ಶ್ರೀ ಎಸ್.ಟಿ. ಸೋಮಶೇಖರ್, ಶಾಸಕರುಗಳಾದ ಶ್ರೀ ಜಿ.ಟಿ. ದೇವೇಗೌಡ, ಶ್ರೀ ತನ್ವೀರ್ ಸೇಠ್, ಶ್ರೀ ಎಲ್. ನಾಗೇಂದ್ರ, ಡಾ. ಯತೀಂದ್ರ ಸಿದ್ದರಾಮಯ್ಯ, ಶ್ರೀ ಸಿ.ಎಸ್. ನಿರಂಜನಕುಮಾರ್, ಮುಡಾ ಅಧ್ಯಕ್ಷರಾದ ಶ್ರೀ ಹೆಚ್.ವಿ. ರಾಜೀವ್, ಮಾಜಿ ವಿಧಾನಪರಿಷತ್ ಸದಸ್ಯರಾದ ಶ್ರೀ ತೋಂಟದಾರ್ಯ, ಶ್ರೀ ಕೆ.ಆರ್. ಮಲ್ಲಿಕಾರ್ಜುನಪ್ಪ, ಕನ್ನಡ ಪುಸ್ತಕ ಪ್ರಾಧಿಕಾರದ

ಅಧ್ಯಕ್ಷರಾದ ಡಾ. ಎಂ.ಎನ್. ನಂದೀಶ್ ಹಂಚೆ, ಮೃಗಾಲಯ ಪ್ರಾಧಿಕಾರದ ಅಧ್ಯಕ್ಷರಾದ ಶ್ರೀ ಎಲ್.ಆರ್. ಮಹದೇವಸ್ವಾಮಿ, ಜಿಲ್ಲಾ ಪಂಚಾಯತ್ ಉಪಾಧ್ಯಕ್ಷರಾದ ಶ್ರೀಮತಿ ಗೌರಮ್ಮ ಸೋಮಶೇಖರ್, ಸದಸ್ಯರಾದ ಶ್ರೀಮತಿ ಮಂಗಳ ಸೋಮಶೇಖರ್, ನಗರಪಾಲಿಕೆ ಸದಸ್ಯರಾದ ಶ್ರೀ ಬಿ.ವಿ. ಮಂಜುನಾಥ್, ಮಹಾಸಭಾದ ಜಿಲ್ಲಾಧ್ಯಕ್ಷರಾದ ಶ್ರೀ ಎಸ್. ಶಿವಮೂರ್ತಿ ಕಾನ್ಯ, ರಾಷ್ಟ್ರೀಯ ಘಟಕದ ನಿರ್ದೇಶಕರಾದ ಶ್ರೀ ಟಿ.ಎಸ್. ಲೋಕೇಶ್, ರಾಜ್ಯ ಘಟಕದ ನಿರ್ದೇಶಕರಾದ ಶ್ರೀ ಸಿ. ಗುರುಸ್ವಾಮಿ, ನಗರ ಘಟಕದ ಅಧ್ಯಕ್ಷರಾದ ಶ್ರೀ ಎಂ.ಹೆಚ್. ಚಂದ್ರಶೇಖರ್ ಮೊದಲಾದವರು ಉಪಸ್ಥಿತರಿದ್ದರು.

**ಮಾತೃಭಾಷೆಗಾಗಿ ಹೋರಾಡಿ**

ಅಧಿಕಾರಕ್ಕಾಗಿ ಹೋರಾಡುವ ರಾಜಕಾರಣಿಗಳು ಮಾತೃಭಾಷೆಯ ಉಳಿವಿಗಾಗಿ ಹೋರಾಟ ಮಾಡಿದರೆ ಕನ್ನಡ ಭಾಷೆ ಸಮೃದ್ಧವಾಗಿ ಪ್ರಜ್ವಲಿಸುತ್ತದೆ ಎಂದು ಪರಮಪೂಜ್ಯ ಜಗದ್ಗುರುಗಳು ಹೇಳಿದರು.

ಫೆಬ್ರವರಿ 15ರಂದು ಕುಂತಿಬೆಟ್ಟದಲ್ಲಿ ನಡೆದ ಪಾಂಡವಪುರ ತಾಲ್ಲೂಕು 8ನೇ ಕನ್ನಡ ಸಾಹಿತ್ಯ ಸಮ್ಮೇಳನದ ದಿವ್ಯ ಸಾನ್ನಿಧ್ಯ ವಹಿಸಿ, ಕರ್ನಾಟಕದಲ್ಲಿ ಸರ್ಕಾರಿ ಪತ್ರವ್ಯವಹಾರಗಳು ಕನ್ನಡದಲ್ಲೇ ನಡೆಯಬೇಕು. ಇಂಗ್ಲಿಷ್ ಭಾಷೆಯ ಬಳಕೆಯನ್ನು ಆಡಳಿತ ವ್ಯವಸ್ಥೆ ನಿಲ್ಲಿಸಬೇಕಾಗಿದೆ. ಮಾತೃಭಾಷೆ ನಮ್ಮ ಜೀವನದ ಅವಿಭಾಜ್ಯ ಅಂಗವಾಗಿದೆ. ಕನ್ನಡ ಮಾಧ್ಯಮದ ಶಾಲೆಗಳು ಹೆಚ್ಚು ಅಭಿವೃದ್ಧಿ ಹೊಂದಬೇಕು. ಕನ್ನಡ ಭಾಷೆಗೆ ತೊಂದರೆಯಾದಾಗ ಎಲ್ಲರೂ ಸಂಘಟಿತರಾಗಿ ಸ್ವಾಭಿಮಾನ ಪ್ರದರ್ಶಿಸಬೇಕು. ಭಾಷಾಭಿವೃದ್ಧಿಗೆ ಸರ್ಕಾರಗಳು ಪ್ರಾಮಾಣಿಕವಾದ ಕೆಲಸ ಮಾಡಬೇಕು ಎಂದು ತಿಳಿಸಿದರು.

ಸಾಹಿತಿಗಳಾದ ಡಾ. ನರಹಳ್ಳಿ ಬಾಲಸುಬ್ರಹ್ಮಣ್ಯಂರವರು ಪ್ರತಿ ಗ್ರಾಮ ಪಂಚಾಯತಿಯಲ್ಲಿ ಒಂದು ಗ್ರಂಥಾಲಯ ಸ್ಥಾಪನೆಯಾಗಬೇಕು. ಅದರ ಮೂಲಕ ರೈತರಿಗೆ ಅಗತ್ಯವಾದ ಮಾಹಿತಿ ದೊರೆಯುವಂತಾಗಬೇಕು. ಗ್ರಂಥಾಲಯಗಳು ಮಾಹಿತಿ ಕೇಂದ್ರಗಳಾಗಿ ಪರಿವರ್ತನೆಯಾಗಬೇಕು. ಸಾಹಿತ್ಯ ಸಮಾಜಕ್ಕೆ ಉಪಯೋಗವಾಗುವಂತಿರ ಬೇಕು. ಜನರ ಬದುಕನ್ನು ಹಸನುಗೊಳಿಸುವ ಸಾಮಾಜಿಕ ಚಿಂತನೆಯತ್ತ ಸಾಗಬೇಕು ಎಂದು ಹೇಳಿದರು.

ಹಿರಿಯ ಕಲಾವಿದರಾದ ಡಾ. ಮುಖ್ಯಮಂತ್ರಿ ಚಂದ್ರುರವರು ಭಾಷೆಯ ಆಧಾರದ ಮೇಲೆ ರಾಜ್ಯಗಳನ್ನು ಏಕೀಕರಣ ಮಾಡಲಾಗಿದೆ. ಆದರೆ ರಾಜ್ಯದಲ್ಲಿ ಕನ್ನಡ ಭಾಷೆಯ ಉಳಿವಿಗಾಗಿ ಹೋರಾಟ ಮಾಡುವ ಸ್ಥಿತಿ ಎದುರಾದದ್ದು ದುರಂತದ ಸಂಗತಿ ಎಂದರು.

ಸಮ್ಮೇಳನಾಧ್ಯಕ್ಷರಾದ ಡಾ. ಹೆಚ್.ಆರ್. ಮಣಿಕರ್ಣಿಕ, ಮಾಜಿ ಸಚಿವರು ಹಾಗೂ ಶಾಸಕರಾದ ಶ್ರೀ ಸಿ.ಎಸ್. ಪುಟ್ಟರಾಜು, ವಿಧಾನಪರಿಷತ್ ಸದಸ್ಯರಾದ ಶ್ರೀ ಕೆ.ಟಿ. ಶ್ರೀಕಂಠೇಗೌಡ, ಕಸಾಪ ಜಿಲ್ಲಾಧ್ಯಕ್ಷರಾದ ಶ್ರೀ ಸಿ.ಕೆ. ರವಿಕುಮಾರ್, ತಹಶೀಲ್ದಾರರಾದ ಶ್ರೀ ಪ್ರಮೋದ್ ಎಲ್. ಪಾಟೀಲ್, ಪ್ರೊ. ಎಂ. ಕೃಷ್ಣೇಗೌಡ ಮುಂತಾದವರು ಉಪಸ್ಥಿತರಿದ್ದರು.

**ಡಾ. ಎಂ. ಮಹದೇವಪ್ಪನವರ ರೈತಪರ ಕಾಳಜಿ ಅಪಾರವಾದುದು**

ಪ್ಯಾಡಿ ಮಹದೇವಪ್ಪನವರು ಎಂದು ಖ್ಯಾತರಾದ ಡಾ. ಎಂ. ಮಹದೇವಪ್ಪನವರ ರೈತಪರ ಕಾಳಜಿ ಅಪಾರವಾದುದು ಎಂದು ಪರಮಪೂಜ್ಯ ಜಗದ್ಗುರುಗಳವರು ಹೇಳಿದರು.

ಫೆಬ್ರವರಿ 16ರಂದು ಪದ್ಮಭೂಷಣ ಪುರಸ್ಕೃತ ಕೃಷಿ ವಿಜ್ಞಾನಿ, ಜೆಎಸ್‌ಎಸ್ ಮಹಾವಿದ್ಯಾಪೀಠದ ಗ್ರಾಮೀಣಾಭಿವೃದ್ಧಿ ವಿಭಾಗದ ನಿರ್ದೇಶಕರಾದ ಡಾ. ಎಂ. ಮಹದೇವಪ್ಪನವರ 'ಸಮಗ್ರ ಕೃಷಿ ಕಾವ್ಯ' ಕೃತಿ ಲೋಕಾರ್ಪಣೆಯ ಸಾನ್ನಿಧ್ಯ ವಹಿಸಿ, ಮಹದೇವಪ್ಪನವರು ರೈತ ಸ್ವಾವಲಂಬಿಯಾಗಿ ಬದುಕಲು ಅನೇಕ ಯೋಜನೆಗಳನ್ನು ರೂಪಿಸಿದ್ದಾರೆ. ಅನೇಕ ಭತ್ತದ ತಳಿಗಳ ಸಂಶೋಧನೆ ಮಾಡಿ ನಾಡಿನಲ್ಲಿ 'ಪ್ಯಾಡಿ ಮಹದೇವಪ್ಪ' ಎಂದೇ ಹೆಸರಾಗಿದ್ದಾರೆ. ಅವರ ಸೇವೆಗಾಗಿ ಪದ್ಮಶ್ರೀ ಹಾಗೂ ಪದ್ಮಭೂಷಣ ಪುರಸ್ಕಾರಗಳು ಸಂದಿವೆ. ಇಳಿವಯಸ್ಸಿನಲ್ಲಿಯೂ ಕ್ರಿಯಾಶೀಲರಾಗಿರುವ ಇವರು ಇಂದಿನ ಯುವ ಸಮೂಹಕ್ಕೆ ಮಾದರಿಯಾಗಿದ್ದಾರೆ. ಅವರ ಈ ಕೃತಿಯು ರೈತರ ಕುರಿತಾಗಿ ಇರುವ ಅವರ ಅಪಾರ ಪ್ರೀತಿಗೆ ಸಾಕ್ಷಿಯಾಗಿದೆ ಎಂದು ತಿಳಿಸಿದರು.

ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಗೌರವ ಸಲಹೆಗಾರಾದ ಶ್ರೀ ಗೊ.ರು. ಚನ್ನಬಸಪ್ಪನವರು ಕುವೆಂಪುರವರು ಋಷಿಕವಿಯಾದರೆ ಮಹದೇವಪ್ಪನವರು ಕೃಷಿಕವಿ ಎಂದು ಬಣ್ಣಿಸಿದರು.

ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಕುಲಪತಿಗಳಾದ ಡಾ. ಎಸ್. ರಾಜೇಂದ್ರ ಪ್ರಸಾದ್‌ರವರು ಮಾತನಾಡಿ ಧಾರವಾಡ ಕೃಷಿ ವಿಶ್ವವಿದ್ಯಾಲಯದ ಕುಲಪತಿಗಳಾಗಿದ್ದಾಗ ನೆನಪಿನಲ್ಲಿ ಉಳಿಯುವಂತಹ ಅನೇಕ ಅಮೂಲ್ಯ ಕಾರ್ಯಗಳನ್ನು ಮಾಡಿದ್ದಾರೆ ಎಂದರು.

ಸಾಹಿತಿಗಳಾದ ಪ್ರೊ. ಮಲೆಯೂರು ಗುರುಸ್ವಾಮಿಯವರು ಕೃತಿ ಪರಿಚಯಿಸಿದರು. ಡಾ. ಎಂ. ಮಹದೇವಪ್ಪನವರ ಪುತ್ರಿಯಾದ ಡಾ. ಮಮತಾ ಚಂದ್ರಶೇಖರ್‌ರವರು ತಮ್ಮ ತಂದೆಯವರನ್ನು ಕುರಿತು ವಾತ್ಸಲ್ಯದ ಮಾತುಗಳನ್ನಾಡಿದರು. ಶ್ರೀಮತಿ ಕಲ್ಪನಾ ಶಿವಣ್ಣ ಡಾ. ಮಹದೇವಪ್ಪನವರ ಗೀತೆಯೊಂದನ್ನು ಹಾಡಿದರು.

ಕಾರ್ಯಕ್ರಮದಲ್ಲಿ ಜೆಎಸ್‌ಎಸ್ ಮಹಾವಿದ್ಯಾಪೀಠದ ಅಧಿಕಾರಿಗಳು, ಕೃಷಿ ವಿಜ್ಞಾನಿಗಳು, ಅಭಿಮಾನಿಗಳು ಭಾಗವಹಿಸಿದ್ದರು

**ಸಂಸ್ಕಾರ ಬೆಳೆಸುವಲ್ಲಿ ಮಠಗಳ ಪಾತ್ರ ಪ್ರಮುಖವಾದುದು**

ಸಂಸ್ಕಾರ ಬೆಳೆಸುವಲ್ಲಿ ಮಠಗಳ ಪಾತ್ರ ಬಹಳ ಪ್ರಮುಖವಾದುದು ಎಂದು ಪರಮಪೂಜ್ಯ ಜಗದ್ಗುರುಗಳು ತಿಳಿಸಿದರು.

ಫೆಬ್ರವರಿ 17ರಂದು ಹಾವೇರಿ ಜಿಲ್ಲೆ ರಟ್ಟಿಹಳ್ಳಿ ತಾಲ್ಲೂಕಿನ ತಿಪ್ಪಾಯಿಕೊಪ್ಪದ ಶ್ರೀ ಗುರು ಮೂಕಪ್ಪ ಶಿವಯೋಗಿಗಳ ಮಠದ ಶ್ರೀ ಮಹಾಂತದೇವರ ನಿರಂಜನ ಪಟ್ಟಾಧಿಕಾರ ಮಹೋತ್ಸವ ಉದ್ಘಾಟನೆಯ ದಿವ್ಯ ಸಾನ್ನಿಧ್ಯ ವಹಿಸಿ ವಿಶ್ವಕ್ಕೆ ಸಂಸ್ಕೃತಿ ಮತ್ತು ಸಂಪ್ರದಾಯ

ಹೇಳಿಕೊಟ್ಟಿದ್ದು ಭಾರತ. ನೊಂದ ಮನಸ್ಸಿಗೆ ಸಾಂತ್ವನ, ಶಾಂತಿ, ಏಕಾಗ್ರತೆ, ಇವುಗಳ ಜೊತೆಗೆ ಸಾತ್ವಿಕ ಶಕ್ತಿಯನ್ನು ನೀಡುವ ಶಕ್ತಿ ಮಠಗಳಿಗಿದೆ. ಮನುಷ್ಯನ ಹೃದಯ ಮತ್ತು ಮನಸ್ಸಿಗೆ ಸಂಪತ್ತು ಸಿಗುವುದು ಆಧ್ಯಾತ್ಮದಿಂದ ಮಾತ್ರ ಸಾಧ್ಯ. ಜೀವನದಲ್ಲಿ ಕಷ್ಟಗಳು ಬರುವುದು ಸಹಜ. ಅವು ನೀರಿನ ಅಲೆಗಳಂತೆ ಬಂದು ಹೋಗುತ್ತವೆ. ದಯೆಯಿದ್ದಲ್ಲಿ ದೇವರಿರುತ್ತಾನೆ. ಮಠದಲ್ಲಿ ಸ್ವಾಮಿಗಳು ಸ್ವಾರ್ಥಕ್ಕಾಗಿ ಇರುವುದಿಲ್ಲ, ಸ್ವಾರ್ಥವನ್ನು ತ್ಯಾಗ ಮಾಡಿ ಸ್ವಾಮಿಗಳಾಗಿರುತ್ತಾರೆ. ಶ್ರೀ ಮಹಾಂತ ದೇವರು ಭಕ್ತರಿಗೆ ಮಾರ್ಗದರ್ಶನ ಮಾಡುತ್ತಾ ಮಠದ ಪರಂಪರೆಯನ್ನು ಉಜ್ವಲಗೊಳಿಸಲಿ ಎಂದು ಹಾರೈಸಿದರು.

ಸಂಸದರಾದ ಶ್ರೀ ಬಿ.ವೈ. ರಾಘವೇಂದ್ರರವರು ಭಾರತದ ಆಧ್ಯಾತ್ಮಿಕ ಕ್ಷೇತ್ರದಲ್ಲಿ ಅನೇಕ ಮಹನೀಯರು ಸಮಾಜಕ್ಕೆ ಮಾರ್ಗದರ್ಶನ ಮಾಡಿದ್ದಾರೆ. ಸಮಾಜೋದ್ಧಾರಕ್ಕಾಗಿ ತಮ್ಮ ಜೀವನವನ್ನೇ ಮುಡಿಪಾಗಿರಿಸಿದ್ದಾರೆ. ಗುರುಗಳ ಮಾರ್ಗದರ್ಶನದಿಂದಲೇ ಸಮಾಜದಲ್ಲಿ ಶಾಂತಿ ಮತ್ತು ಮಾನವೀಯತೆ ನೆಲೆಸಿದೆ ಎಂದು ಹೇಳಿದರು.

ತಿಪ್ಪಾಯಿಕೊಪ್ಪದ ಶ್ರೀ ವಿರೂಪಾಕ್ಷ ಸ್ವಾಮಿಗಳು, ಶ್ರೀ ಮಹಾಂತದೇವರು, ಕೂಡಲದ ಶ್ರೀ ಗುರು ಮಹೇಶ್ವರ ಸ್ವಾಮಿಗಳು ಮೊದಲಾದವರು ಉಪಸ್ಥಿತರಿದ್ದರು.

**ಛಾಯಾಗ್ರಹಣ ಕೆಲಸ ಕ್ಲಿಷ್ಟಕರವಾದರೂ ಅತ್ಯಂತ ಮಹತ್ವವಾದದ್ದು**

ಛಾಯಾಗ್ರಹಣದ ಕೆಲಸ ಕ್ಲಿಷ್ಟಕರವಾದರೂ ಅತ್ಯಂತ ಮಹತ್ವವಾದದ್ದು ಎಂದು ಪರಮಪೂಜ್ಯ ಜಗದ್ಗುರುಗಳು ತಿಳಿಸಿದರು.

ಫೆಬ್ರವರಿ 20ರಂದು ಮೈಸೂರಿನ ಪತ್ರಕರ್ತರ ಭವನದಲ್ಲಿ ನಡೆದ ಮೈಸೂರು ಫೋಟೋ ಜರ್ನಲಿಸ್ಟ್ ಅಸೋಸಿಯೇಷನ್ ಉದ್ಘಾಟನೆಯ ದಿವ್ಯ ಸಾನ್ನಿಧ್ಯ ವಹಿಸಿ ಫೋಟೋ ತೆಗೆಯುವುದು ಅಷ್ಟು ಸುಲಭದ ಕೆಲಸವಲ್ಲ. ಅದೊಂದು ಸಾಹಸಮಯವಾದ ವೃತ್ತಿಯಾಗಿದೆ. ಅದೊಂದು ಉತ್ತಮ ಕಲೆ. ಬಹಳಷ್ಟು ಜನರು ಅದನ್ನು ಪ್ರವೃತ್ತಿಯಾಗಿಯೂ ಸ್ವೀಕರಿಸಿದ್ದಾರೆ ಎಂದು ಹೇಳಿದರು.

ವಿರೋಧ ಪಕ್ಷದ ನಾಯಕ ಮತ್ತು ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯನವರು ವಿದ್ಯುನ್ಮಾನ ಮಾಧ್ಯಮಗಳಿಗಿಂತ ಮುದ್ರಣ ಮಾಧ್ಯಮದ ಮೇಲೆ ವಿಶ್ವಾಸಾರ್ಹತೆ ಹೆಚ್ಚು. ಇತ್ತೀಚಿನ ದಿನಗಳಲ್ಲಿ ಸಾಮಾಜಿಕ ಜಾಲತಾಣಗಳನ್ನು ಬಳಸುವವರ ಸಂಖ್ಯೆ ಹೆಚ್ಚುತ್ತಿರುವುದರಿಂದ ಎಲ್ಲ ಸುದ್ದಿಗಳು ವೇಗವಾಗಿ ದೊರೆಯುತ್ತಿರುವುದರಿಂದ ಪತ್ರಿಕಾ ಛಾಯಾಗ್ರಾಹಕರ ಬೇಡಿಕೆ ಕಡಿಮೆಯಾದರು ಅವರ ಮಹತ್ವ ಕುಗ್ಗಿಲ್ಲ ಎಂದು ತಿಳಿಸಿದರು.

ಮಾಜಿ ಸಚಿವ ಮತ್ತು ಶಾಸಕರಾದ ಶ್ರೀ ಜಿ.ಟಿ. ದೇವೇಗೌಡ ಲಾಂಛನ ಬಿಡುಗಡೆಗೊಳಿಸಿದರು. ಮಾಜಿ ಸಚಿವರು ಮತ್ತು ಶಾಸಕರಾದ ಶ್ರೀ ಜಮೀರ್ ಅಹಮದ್, ವಿಧಾನಪರಿಷತ್ ಸದಸ್ಯರಾದ ಶ್ರೀ ಧರ್ಮಸೇನ, ಮುಡಾ ಅಧ್ಯಕ್ಷರಾದ ಶ್ರೀ ಹೆಚ್.ವಿ. ರಾಜೀವ್, ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷರಾದ ಶ್ರೀ ಎಸ್.ಟಿ. ರವಿಕುಮಾರ್,

ರಾಜ್ಯ ಫೋಟೋ ಜರ್ನಲಿಸ್ಟ್ ಅಸೋಸಿಯೇಷನ್ ಅಧ್ಯಕ್ಷರಾದ ಶ್ರೀ ಎಸ್. ಈಶ್ವರ್, ಜಿಲ್ಲಾ ಅಸೋಸಿಯೇಷನ್ ಅಧ್ಯಕ್ಷರಾದ ಶ್ರೀ ಪ್ರಗತಿ ಗೋಪಾಲಕೃಷ್ಣ ಉಪಸ್ಥಿತರಿದ್ದರು.

**ಲೌಕಿಕ ಸುಖ ಭೋಗಗಳು ಕ್ಷಣಿಕ : ಭಕ್ತಿ, ನಿಷ್ಠೆ, ಪ್ರಾಮಾಣಿಕತೆ ಮಾತ್ರ ಶಾಶ್ವತ**

ಲೌಕಿಕ ಸುಖ ಭೋಗಗಳು ಕ್ಷಣಿಕವಾದವು. ಭಕ್ತಿ, ನಿಷ್ಠೆ, ಪ್ರಾಮಾಣಿಕತೆ ಮಾತ್ರ ಶಾಶ್ವತವಾದಂತವು ಎಂದು ಪರಮಪೂಜ್ಯ ಜಗದ್ಗುರುಗಳು ಹೇಳಿದರು.

ಫೆಬ್ರವರಿ 22ರಂದು ಮೈಸೂರು ತಾಲ್ಲೂಕು ದಾರಿಪುರದಲ್ಲಿ ಶ್ರೀ ಗುರುಕರೂರು ಸ್ವಾಮಿಗಳ ಗದ್ದುಗೆ ಉದ್ಘಾಟನೆ ಮತ್ತು ಪುಣ್ಯಾರಾಧನೆ ಹಾಗೂ ಶ್ರೀ ಬಸವೇಶ್ವರರ ಪುತ್ಥಳಿ ನಿರ್ಮಾಣದ ಶಂಕುಸ್ಥಾಪನೆಯು ಪೂಜ್ಯರಿಂದ ನೆರವೇರಿತು. ನಂತರ ನಡೆದ ಧಾರ್ಮಿಕ ಸಭೆಯ ದಿವ್ಯ ಸಾನ್ನಿಧ್ಯ ವಹಿಸಿ ಮನುಷ್ಯತ್ವಕ್ಕೆ ನಂಬಿಕೆ ಮುಖ್ಯ. ಮನುಷ್ಯತ್ವ ಇದ್ದ ಕಡೆ ಯಶಸ್ಸು ದೊರೆಯುತ್ತದೆ. ಮಾನವ ಸದ್ಗುಣಸಂಪನ್ನನಾಗಿ, ಪರೋಪಕಾರ ವ್ಯಕ್ತಿತ್ವವನ್ನು ಹೊಂದಬೇಕು. ಭಾರತೀಯ ಪರಂಪರೆಯಲ್ಲಿ ಧಾರ್ಮಿಕ ಸಂತರು ಪುಣ್ಯಕ್ಷೇತ್ರಗಳನ್ನು ಉಳಿಸಿಕೊಂಡು ಬಂದಿದ್ದಾರೆ. ಅವುಗಳ ಗೌರವ ಕಾಪಾಡುವುದರ ಜೊತೆಗೆ ದೇಶದ ಸಂಸ್ಕೃತಿ, ಪರಂಪರೆಯನ್ನು ಉಳಿಸಿ, ಬೆಳೆಸುವ ಕೆಲಸವಾಗಬೇಕಿದೆ ಎಂದರು.

ಕುಂದೂರು ಮಠದ ಡಾ. ಶ್ರೀ ಶರತ್‌ಚಂದ್ರ ಸ್ವಾಮಿಗಳು ಉಪನ್ಯಾಸ ನೀಡಿದರು. ದೇವನೂರು, ಹುಲ್ಲಹಳ್ಳಿ, ಬರಡನಪುರ, ಪುರಮಠ, ಕಾರ್ಯಸ್ವಾಮಿ ಮಠದ ಶ್ರೀಗಳು ಹಾಗೂ ಮಾಜಿ ಸಚಿವರು ಹಾಗೂ ಶಾಸಕರಾದ ಶ್ರೀ ಜಿ.ಟಿ. ದೇವೇಗೌಡ, ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್‌ನ ಅಧ್ಯಕ್ಷರಾದ ಶ್ರೀ ಜಿ.ಡಿ. ಹರೀಶ್‌ಗೌಡ, ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರಾದ ಶ್ರೀ ನಂದೀಶ್ ಹಂಚೆ, ಮಹಾಸಭಾದ ಜಿಲ್ಲಾಧ್ಯಕ್ಷರಾದ ಶ್ರೀ ಎಸ್. ಶಿವಮೂರ್ತಿ ಕಾನ್ಯ ಉಪಸ್ಥಿತರಿದ್ದರು.

**ಅಹಂಕಾರವನ್ನು ತೊಡೆದುಹಾಕುವುದೇ ಸಾಧನೆಯ ಮಾರ್ಗ**

ಮನುಷ್ಯ ಅಹಂನ್ನು ತೊಡೆದುಹಾಕಿದರೆ ಮಾತ್ರ ಸಾಧನೆಯ ಮಾರ್ಗ ಸುಲಭವಾಗುತ್ತದೆ ಎಂದು ಶ್ರೀ ಎಂ ರವರು ಹೇಳಿದರು.

ಫೆಬ್ರವರಿ 23ರಂದು ಮೈಸೂರು ಜೆಎಸ್‌ಎಸ್ ಮಹಿಳಾ ಕಾಲೇಜಿನ ನವಜ್ಯೋತಿ ಸಭಾಂಗಣದಲ್ಲಿ ಏರ್ಪಡಿಸಲಾಗಿದ್ದ ಜೆಎಸ್‌ಎಸ್ ಮಹಾವಿದ್ಯಾಪೀಠದ ಸುವರ್ಣ ಮಹೋತ್ಸವ ದತ್ತಿ ಉಪನ್ಯಾಸದಲ್ಲಿ 'ಸಾಧನೆ – ವಿಮೋಚನೆಯ ಹಾದಿ' ವಿಷಯ ಕುರಿತು ಮಾತನಾಡುತ್ತಾ ತಿಳಿಸಿದರು. ಲೌಕಿಕ ಜೀವನದಲ್ಲಿ ಅನೇಕ ಸವಾಲುಗಳನ್ನು ಎದುರಿಸುತ್ತೇವೆ. ಲೌಕಿಕ ಜೀವನದಲ್ಲಿ ಅಹಂನ್ನು ತೊಡೆದುಹಾಕುವುದು ಕಷ್ಟಸಾಧ್ಯವಾದ ಕೆಲಸ. ಯೋಗಿಗಳು ಮಾತ್ರವಲ್ಲದೇ ಸಾಮಾನ್ಯರೂ ಸಹ ಆಧ್ಯಾತ್ಮಿಕ ಸಾಧನೆಯಲ್ಲಿ ತೊಡಗಿಸಿಕೊಳ್ಳಬಹುದು. ಇಲ್ಲಿ ಯಾರು ಸಾಮಾನ್ಯರಲ್ಲ, ಎಲ್ಲರೂ ಅಸಾಮಾನ್ಯ ವ್ಯಕ್ತಿಗಳೆ. ಎಲ್ಲರಲ್ಲು ಒಂದು ಸುಪ್ತ ಪ್ರತಿಭೆ ಇದ್ದೇ ಇರುತ್ತದೆ. ಮನಸ್ಸಿನ ಬಯಕೆಗಳಿಗೆ

ಮಾರುಹೋಗಿ ಸಾಧನೆಯ ಮಾರ್ಗವನ್ನು ಕಂಡುಕೊಳ್ಳುವಲ್ಲಿ ಎಡುವುತ್ತಿದ್ದೇವೆ. ಬಯಕೆಗಳ ಚಿಂತೆಯಲ್ಲೇ ಮುಳುಗಿರುವ ಮನಸ್ಸನ್ನು ದೇವರ ಸ್ಮರಣೆಯಲ್ಲಿ ತೊಡಗಿಸಬೇಕು. ಇದಕ್ಕೆ ಗುರುವಿನ ಆಶೀರ್ವಾದ ಮತ್ತು ಮಾರ್ಗದರ್ಶನ ಬೇಕು ಎಂದು ತಿಳಿಸಿದರು.

ಪರಮಪೂಜ್ಯ ಜಗದ್ಗುರುಗಳು ಲೌಕಿಕ ಜಗತ್ತಿನಿಂದ ಹೊರಬರುವುದು ಸುಲಭ–ಸಾಧ್ಯವಲ್ಲ. ಸಾಧನೆಯಲ್ಲಿ ತೊಡಗಿಕೊಂಡ ಸಾಧಕನ ಬದುಕಿನಲ್ಲಿ ಆಕರ್ಷಣೆಗಳು ಎಡರು–ತೊಡರಿನಂತೆ ಬರುತ್ತಲೆ ಇರುತ್ತವೆ. ಮನಸ್ಸಿನ ಆಕರ್ಷಣೆಗಳಿಂದ ಬಿಡುಗಡೆಗೊಳ್ಳುವುದೇ ಮೋಕ್ಷ. ಲೌಕಿಕ ಮತ್ತು ಆಧ್ಯಾತ್ಮವನ್ನು ಪ್ರತ್ಯೇಕಿಸದೆ ಸಾಧನೆ ಮಾಡುವುದೇ ಜಾಣತನ ಎಂದು ನಿಜಗುಣ ಶಿವಯೋಗಿಗಳು ಹೇಳಿದ್ದಾರೆ. ಲೌಕಿಕ ಜಂಜಾಟಗಳ ನಡುವೆಯೂ ಶ್ರದ್ಧೆ ಮತ್ತು ನಿಷ್ಠೆಯಿಂದ ಬದುಕು ಸಾಗಿಸಬೇಕು. ಪ್ರತಿ ಕಾರ್ಯವನ್ನು ಭಗವಂತನ ಸೇವೆ ಎಂದೆ ಮಾಡಬೇಕು ಎಂದು ಶಂಕರಾಚಾರ್ಯರು ತಿಳಿಸಿದ್ದಾರೆ. ನಾನು ಹೋದರೆ ಹೋದೇನೂ ಎಂದು ದಾಸರ ವಾಣಿಯಂತೆ ನಾನು ಎಂಬುದನ್ನು ಮೊದಲು ಬಿಡಬೇಕು. ರಾಮಕೃಷ್ಣ ಪರಮಹಂಸರು ಧ್ಯಾನದಲ್ಲಿ, ಭಕ್ತಿಯಲ್ಲಿ ಭಗವಂತನನ್ನು ಹೃದಯತುಂಬಿ ಕಾಣುವ ಸುಖ ಲೌಕಿಕ ಸುಖಕ್ಕಿಂತಲೂ ಸಾವಿರಪಟ್ಟು ಹೆಚ್ಚು ಎಂದು ಹೇಳುತ್ತಾರೆ. ಸಣ್ಣಪುಟ್ಟ ವಿಚಾರಗಳಲ್ಲೂ ಸಹ ನಾನು ಎಂಬುದನ್ನು ಬಿಡಬೇಕು ಎಂದು ಹೇಳಿದರು.

ಬೆಂಗಳೂರು ಬ್ರೈನ್ಸ್ ನ್ಯೂರೋ ಸ್ಪೈನ್ ಆಸ್ಪತ್ರೆಯ ಸಂಸ್ಥಾಪಕ ಅಧ್ಯಕ್ಷರು ಮತ್ತು ಮುಖ್ಯ ನರಶಸ್ತ್ರ ಚಿಕಿತ್ಸಕರಾದ ಡಾ. ಎನ್.ಕೆ. ವೆಂಕಟರಮಣರವರು 7 ಮತ್ತು 9ರ ದತ್ತಿ ಉಪನ್ಯಾಸಗಳಾದ ಡಾ. ಎ.ಎಸ್. ಕಿರಣ್‌ಕುಮಾರ್‌ರವರ 'ಸ್ಪೇಸ್ ಟೆಕ್ನಾಲಜಿ ಅಂಡ್ ಸೊಸೈಟಲ್ ಅಪ್ಲಿಕೇಷನ್ಸ್' ಹಾಗೂ ಡಾ. ಗೀತಾ ಗೋಪಿನಾಥ್‌ರವರ 'ಗ್ಲೋಬಲೈಸೇಷನ್: ಚಾಲೆಂಜಸ್ ಅಂಡ್ ದಿ ನೀಡ್ ಫಾರ್ ಕೋ–ಆಪರೇಷನ್' ಕೃತಿಗಳನ್ನು ಲೋಕಾರ್ಪಣೆಗೊಳಿಸಿ ಅವುಗಳನ್ನು ಪರಿಚಯಿಸಿದರು.

ಮೈಸೂರಿನ ಮೆರಿಟರ್ ಎಚ್‌ವಿಎಸ್ ಇಂಡಿಯಾ ಪ್ರೈ.ಲಿ., ಅಧ್ಯಕ್ಷರು ಮತ್ತು ಕಾರ್ಯನಿರ್ವಾಹಕ ನಿರ್ದೇಶಕರಾದ ಡಾ. ಎನ್. ಮುತ್ತುಕುಮಾರ್‌ರವರು ಅಧ್ಯಕ್ಷತೆ ವಹಿಸಿದ್ದರು. ಕು. ಮಾನಸ ಮತ್ತು ತೇಜಸ್ವಿನಿ ಪ್ರಾರ್ಥಿಸಿದರು. ಡಾ. ಸಿ.ಜಿ. ಬೆಟಸೂರಮಠ ಸ್ವಾಗತಿಸಿದರು. ಪ್ರೊ. ಮೊರಬದ ಮಲ್ಲಿಕಾರ್ಜುನ ವಂದಿಸಿದರು. ಪ್ರೊ. ಕೆ.ಎಸ್. ಸುರೇಶ್ ಕಾರ್ಯಕ್ರಮ ನಿರೂಪಿಸಿದರು.

**ಧರ್ಮ ಮಾರ್ಗದಲ್ಲಿ ನಡೆಯಬೇಕು**

ಜೀವನದಲ್ಲಿ ಸತ್ಯವನ್ನು ಅಳವಡಿಸಿಕೊಂಡು ಧರ್ಮ ಮಾರ್ಗದಲ್ಲಿ ನಡೆಯಬೇಕು ಎಂದು ಪರಮಪೂಜ್ಯ ಜಗದ್ಗುರುಗಳು ತಿಳಿಸಿದರು.

ಮಾರ್ಚ್ 1ರಂದು ಮಂಡ್ಯ ಜಿಲ್ಲೆ ಪಾಂಡವಪುರ ತಾಲ್ಲೂಕಿನ ಎಂ. ಶೆಟ್ಟಿಹಳ್ಳಿ ಗ್ರಾಮದಲ್ಲಿ ಜೀರ್ಣೋದ್ಧಾರಗೊಂಡ ಶ್ರೀ ಬಸವೇಶ್ವರ ದೇವಸ್ಥಾನದ ನೂತನ ಕಟ್ಟಡವನ್ನು

ಉದ್ಘಾಟಿಸಿ ಧರ್ಮವನ್ನು ನಾವು ರಕ್ಷಿಸಿದರೆ, ಧರ್ಮ ನಮ್ಮನ್ನು ರಕ್ಷಿಸುತ್ತದೆ. ದೇವಸ್ಥಾನಕ್ಕೆ ಹೋಗುವ ಭಕ್ತರು ಪವಿತ್ರವಾದ ಮನಸ್ಸಿನಿಂದ ಹೋಗಬೇಕು. ಪರಿಶುದ್ಧವಾದ ಮನಸ್ಸಿನಿಂದ ಪ್ರಾರ್ಥನೆ ಮಾಡಬೇಕು. ಭಾರತ ದೇಶ ತನ್ನದೇ ಆದ ಸಂಸ್ಕೃತಿಯನ್ನು ಹೊಂದಿದೆ. ಧರ್ಮವನ್ನು ಕುರಿತು ಕೇವಲ ಹೇಳಿಕೊಂಡರೆ ಸಾಲದು. ಮಾನವೀಯ ಮೌಲ್ಯಗಳ ಮೂಲಕ ಅದನ್ನು ಪರಸ್ಪರ ಪ್ರದರ್ಶಿಸಬೇಕು ಎಂದು ಹೇಳಿದರು.

ಶ್ರೀ ಆದಿಚುಂಚನಗಿರಿ ಮೈಸೂರು ಶಾಖಾಮಠದ ಶ್ರೀ ಸೋಮನಾಥಾನಂದ ಸ್ವಾಮಿಗಳು ದೇವಾಲಯಗಳು ಸಂಸ್ಕಾರ ಸೂಚಿಸುವ ಕೇಂದ್ರಗಳಾಗಿವೆ. ಪೂರ್ವಿಕರು ಗ್ರಾಮದಲ್ಲಿ ಶಾಂತಿ, ನೆಮ್ಮದಿ ನೆಲೆಸಲು ದೇವಾಲಯಗಳನ್ನು ಸ್ಥಾಪಿಸುತ್ತಿದ್ದರು ಎಂದು ಹೇಳಿದರು.

ಶಾಸಕರು ಹಾಗೂ ಮಾಜಿ ಸಚಿವರಾದ ಶ್ರೀ ಸಿ.ಎಸ್. ಪುಟ್ಟರಾಜುರವರು ಅಧ್ಯಕ್ಷತೆ ವಹಿಸಿದ್ದರು. ಶ್ರೀ ಎಸ್.ಕೆ. ರಾಜೇಗೌಡ ಪ್ರಾಸ್ತಾವಿಕವಾಗಿ ಮಾತನಾಡಿದರು. ಮನಮುಲ್ ನಿರ್ದೇಶಕರಾದ ಶ್ರೀ ಕೆ. ರಾಮಚಂದ್ರು, ಮುಖಂಡರುಗಳಾದ ಶ್ರೀ ಹೆಚ್.ಸಿ. ಪುಟ್ಟಸ್ವಾಮಿಗೌಡ, ಶ್ರೀ ಹೆಚ್.ಎನ್. ಮಂಜುನಾಥ್, ಶ್ರೀ ಎಂ.ಬಿ. ಶ್ರೀನಿವಾಸ್, ವಾಣಿಜ್ಯ ತೆರಿಗೆ ಇಲಾಖೆಯ ಉಪ ಆಯುಕ್ತರಾದ ಶ್ರೀ ಎಸ್.ಎನ್. ಶಿವಪ್ಪ, ತಾಲ್ಲೂಕು ವೈದ್ಯಾಧಿಕಾರಿಗಳಾದ ಡಾ. ಅರವಿಂದ್ ಮತ್ತು ಸ್ಥಳೀಯ ಜನಪ್ರತಿನಿಧಿಗಳು, ಗ್ರಾಮಾಭಿವೃದ್ಧಿ ಸಮಿತಿ ಸದಸ್ಯರುಗಳು ಪಾಲ್ಗೊಂಡಿದ್ದರು.

**ಶರಣರ ನುಡಿಗಳನ್ನು ಆಚರಣೆಗೆ ತರಬೇಕು**

ಶರಣರ ವಚನಗಳನ್ನು ಕೇವಲ ಮಾತಿನಲ್ಲಿ ಆಡದೆ ಅವುಗಳನ್ನು ಜೀವನದಲ್ಲಿ ಅಳವಡಿಸಿ ಕೊಂಡು ಆಚರಣೆಗೆ ತರಬೇಕು ಎಂದು ಪರಮಪೂಜ್ಯ ಜಗದ್ಗುರುಗಳು ಹೇಳಿದರು.

ಮಾರ್ಚ್ 2ರಂದು ಮೈಸೂರಿನ ಶ್ರೀ ರಾಜೇಂದ್ರ ಭವನದಲ್ಲಿ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ವತಿಯಿಂದ ಏರ್ಪಡಿಸಿದ್ದ 2020ನೇ ಸಾಲಿನ ಶಕುಂತಲ ಜಯದೇವ ಪ್ರಶಸ್ತಿ ಪ್ರದಾನ ಕಾರ್ಯಕ್ರಮದ ದಿವ್ಯ ಸಾನ್ನಿಧ್ಯ ವಹಿಸಿ ಬಸವಣ್ಣನವರ ಇವನಾರವ ಇವನಾರವ ಎನ್ನಿಸದೆ, ಇವನಮ್ಮವ ಇವನಮ್ಮವ ಎಂದೆನ್ನಿಸಯ್ಯಾ ಎಂಬ ವಚನವನ್ನು ಕೇವಲ ಪಠಿಸಿದರೆ ಸಾಲದು, ಅದರಂತೆ ನಡೆದುಕೊಳ್ಳಬೇಕು. ಹೇಳುವುದು ಸುಲಭವಾದ ಕೆಲಸ, ಆದರೆ ಆಚರಣೆಗೆ ತರುವುದು ಕಷ್ಟದ ಕೆಲಸವಾಗಿದೆ. ಬಸವಣ್ಣನವರ ಇಂತಹ ವಚನಗಳನ್ನು ಪ್ರತಿದಿನ ಒಮ್ಮೆ ಓದಿ ಮನೆಯಿಂದ ಹೊರಬರಬೇಕು. ಶರಣರ ನುಡಿಗಳನ್ನು ಆಚರಣೆಗೆ ತಂದು ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ತಿಳಿಸಿದರು.

ಪರಿಷತ್ತಿನ ಗೌರವ ಸಲಹೆಗಾರರಾದ ಶ್ರೀ ಗೊ.ರು. ಚನ್ನಬಸಪ್ಪನವರು ಜನರು ಇಂದು ಸಾಮಾಜಿಕವಾಗಿ–ಆರ್ಥಿಕವಾಗಿ ಸಾಕಷ್ಟು ಮುಂದುವರೆದಿದ್ದಾರೆ. ಆದರೆ ನೈತಿಕವಾಗಿ ಪಾತಾಳಕ್ಕೆ ಕುಸಿಯುತ್ತಿದ್ದಾರೆ ಎಂದರು.

ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರಾದ ಡಾ. ಎಂ.ಎನ್. ನಂದೀಶ್ ಹಂಚೆಯವರು 12ನೇ ಶತಮಾನದ ವಚನಕಾರರು ಸಂಸ್ಕೃತಿಯ ಹರಿಕಾರರು. ಅವರು ದೇವರ ಅಸ್ತಿತ್ವವನ್ನು ಪ್ರಶ್ನಿಸಿಲ್ಲ, ಬದಲಾಗಿ ದೇವಸ್ಥಾನಗಳನ್ನು ಆರ್ಥಿಕ ಸ್ವರೂಪವಾಗಿ ಪರಿವರ್ತಿಸುವುದಕ್ಕೆ ಪ್ರಬಲವಾದ ವಿರೋಧವನ್ನು ವ್ಯಕ್ತಪಡಿಸಿದರು ಎಂದು ಹೇಳಿದರು.

ಸಾಹಿತಿಗಳಾದ ಡಾ. ಈಶ್ವರ ಮಂಟೂರ ಹಾಗೂ ನಿವೃತ್ತ ಶಿಕ್ಷಕರಾದ ಶ್ರೀಮತಿ ಬಸಮ್ಮ ಹಳಕೊಪ್ಪರವರಿಗೆ 2020ನೇ ಸಾಲಿನ ಪ್ರಶಸ್ತಿಯನ್ನು ಪ್ರದಾನ ಮಾಡಲಾಯಿತು. ಶ್ರೀ ಅಪ್ಪಾರಾವ್ ಅಕ್ಕೋಣಿಯವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ದತ್ತಿ ದಾಸೋಹಿಗಳಾದ ಡಾ. ಶಕುಂತಲ ಜಯದೇವ, ಶ್ರೀ ಮ.ಗು. ಸದಾನಂದಯ್ಯ, ಶ್ರೀ ಎಂ. ಚಂದ್ರಶೇಖರ್, ಶ್ರೀಮತಿ ಶಾರದಾ ಶಿವಲಿಂಗಸ್ವಾಮಿ, ಶ್ರೀ ಎಸ್.ಬಿ. ಅಂಗಡಿ ಮತ್ತು ಪರಿಷತ್ತಿನ ರಾಜ್ಯ, ಜಿಲ್ಲಾ ಮತ್ತು ನಗರ ಘಟಕದ ಪದಾಧಿಕಾರಿಗಳು ಪಾಲ್ಗೊಂಡಿದ್ದರು.

**ಸುತ್ತೂರು ಶ್ರೀಮಠಕ್ಕೂ ಶ್ರೀಕ್ಷೇತ್ರ ಧರ್ಮಸ್ಥಳಕ್ಕೂ ಅವಿನಾಭಾವ ಸಂಬಂಧ**

ಸುತ್ತೂರು ಶ್ರೀಮಠಕ್ಕೂ ಶ್ರೀಕ್ಷೇತ್ರ ಧರ್ಮಸ್ಥಳಕ್ಕೂ ಅವಿನಾಭಾವವಾದ ಸಂಬಂಧವಿದೆ ಎಂದು ಧರ್ಮಸ್ಥಳದ ಧರ್ಮಾಧಿಕಾರಿಗಳಾದ ಡಾ. ಡಿ. ವೀರೇಂದ್ರ ಹೆಗ್ಗಡೆಯವರು ಹೇಳಿದರು.

ಮಾರ್ಚ್ 3ರಂದು ಮೈಸೂರು ಶ್ರೀ ಸುತ್ತೂರು ಶಾಖಾಮಠದಲ್ಲಿ ಪರಮಪೂಜ್ಯ ಜಗದ್ಗುರುಗಳ ದಿವ್ಯ ಸಾನ್ನಿಧ್ಯದಲ್ಲಿ ಡಾ. ಡಿ. ವೀರೇಂದ್ರ ಹೆಗ್ಗಡೆಯವರಿಗೆ ಏರ್ಪಡಿಸಿದ್ದ ಅಭಿನಂದನಾ ಕಾರ್ಯಕ್ರಮದಲ್ಲಿ ಮಾತನಾಡುತ್ತಾ, ಮೈಸೂರಿಗೆ ಬಂದರೆ ಸುತ್ತೂರು ಮಠಕ್ಕೆ ಸದಾ ಭೇಟಿ ನೀಡುತ್ತೇನೆ. ರಾಜೇಂದ್ರ ಶ್ರೀಗಳೊಂದಿಗೆ ಅತ್ಯಂತ ಆತ್ಮೀಯವಾದ ಪ್ರೀತಿ ಮತ್ತು ಸಂಬಂಧವಿತ್ತು. ಅದು ಇಂದಿನ ಪೂಜ್ಯರೊಂದಿಗೂ ಮುಂದುವರೆದು ಕೊಂಡು ಬಂದಿದೆ. ಶ್ರೀಮಠ ಮಾಡುವ ಎಲ್ಲ ಕೆಲಸಗಳು ಮಾದರಿಯಾದಂಥವು. ಈ ಎರಡು ಕ್ಷೇತ್ರಗಳ ಸಂಬಂಧ ಹೀಗೆಯೇ ಬೆಳೆಯಲಿ ಎಂದು ಆಶಿಸಿದರು.

ಪರಮಪೂಜ್ಯ ಜಗದ್ಗುರುಗಳು ಶ್ರೀಮಠ ಮತ್ತು ಧರ್ಮಸ್ಥಳಗಳು ಭೌಗೋಳಿಕವಾಗಿ ಬೇರೆಬೇರೆಯಾಗಿದ್ದರೂ ಮಾನಸಿಕವಾಗಿ ಎರಡು ಒಂದೆಯಾಗಿವೆ. ಹೆಗ್ಗಡೆಯವರು ಜಗತ್ತಿಗೆ ಬೇಕಾದಂತಹ ಶ್ರೇಷ್ಠ ಸಾಧಕರಾಗಿದ್ದಾರೆ. ಸಮಾಜದ ಅಭಿವೃದ್ಧಿಗಾಗಿ ಧರ್ಮಸ್ಥಳ ಮಾಡದೇ ಇರುವ ಕಾರ್ಯಗಳೇ ಇಲ್ಲ ಎನ್ನುವ ಮಾತು ಜನಜನಿತವಾಗಿದೆ. ಮಹಿಳೆಯರು, ಮಕ್ಕಳು ಮತ್ತು ಹಿರಿಯರ ಕಲ್ಯಾಣಕ್ಕೆ ಅನೇಕ ಯೋಜನೆಗಳನ್ನು ಜಾರಿಗೆ ತಂದಿದ್ದಾರೆ. ಅವರ ಎಲ್ಲ ಕಾರ್ಯಗಳಿಗೂ ಶ್ರೀಮತಿ ಹೇಮಾವತಿ ಹೆಗ್ಗಡೆಯವರು ಬೆನ್ನೆಲುಬಾಗಿ ನಿಂತಿದ್ದಾರೆ. ಜನರ ಕಷ್ಟಗಳಿಗೆ ಸ್ಪಂದಿಸುತ್ತಾ ಉದಾರವಾದ ಕೊಡುಗೆಯನ್ನು ನೀಡುತ್ತಿದ್ದಾರೆ ಎಂದು ಹೇಳಿದರು.

ಸಚಿವರಾದ ಶ್ರೀ ಸಿ.ಪಿ. ಯೋಗೇಶ್ವರ್‌ರವರು ರಾಜ್ಯದ ಪುರಾತನ ದೇವಸ್ಥಾನಗಳನ್ನು ಪುನರುತ್ಥಾನಗೊಳಿಸುವ ಕಾರ್ಯಕ್ಕೆ ಡಾ. ವೀರೇಂದ್ರ ಹೆಗ್ಗಡೆಯವರು ಮುಂದಾಗಿದ್ದಾರೆ.

ಅವರ ಮಾರ್ಗದರ್ಶನದಲ್ಲಿ ಈ ಕಾರ್ಯಕ್ರಮ ಯಶಸ್ವಿಯಾಗಿ ಮುನ್ನಡೆಯುತ್ತಿದೆ. ಸುತ್ತೂರು ಶ್ರೀಗಳು ನನ್ನ ಎಲ್ಲ ಕೆಲಸಗಳಿಗೂ ಮಾರ್ಗದರ್ಶನ ಮತ್ತು ಆಶೀರ್ವಾದ ಮಾಡುತ್ತಿದ್ದಾರೆ ಎಂದು ಹೇಳಿದರು.

ಮೇಯರ್‌ರಾದ ಶ್ರೀಮತಿ ರುಕ್ಮಿಣಿ ಮಾದೇಗೌಡರು ನಾನು ಮೇಯರ್ ಆದ ನಂತರ ಡಾ. ವೀರೇಂದ್ರ ಹೆಗ್ಗಡೆಯವರು ಮೊದಲ ಬಾರಿಗೆ ಮೈಸೂರಿಗೆ ಆಗಮಿಸಿದ್ದಾರೆ. ನಾನು ಅವರನ್ನು ಹತ್ತಿರದಿಂದ ನೋಡಿರಲಿಲ್ಲ. ಇಂದು ನೋಡಿ ಸಂತೋಷವಾಯಿತು ಎಂದು ಹೇಳಿದರು. ಅವರ ವಿವಾಹದ ಸಂದರ್ಭದಲ್ಲಿ ಪೋಷಕರು ವಿವಾಹದ ಆಹ್ವಾನ ಪತ್ರಿಕೆಯನ್ನು ಧರ್ಮಸ್ಥಳ ಶ್ರೀಕ್ಷೇತ್ರಕ್ಕೆ ಹೋಗಿ ನೀಡಿ ಹೆಗ್ಗಡೆಯವರ ಆಶೀರ್ವಾದ ಪಡೆದು ಬಂದಿದ್ದನ್ನು ಕೃತಜ್ಞತೆಯಿಂದ ಸ್ಮರಿಸಿದರು.

ನಿವೃತ್ತ ಪ್ರಾಧ್ಯಾಪಕರಾದ ಪ್ರೊ. ಎನ್.ಎಸ್. ತಾರಾನಾಥ್, ಡಾ. ಸಿ.ಜಿ. ಬೆಟಸೂರಮಠರವರು ಅಭಿನಂದನಾ ನುಡಿಗಳನ್ನಾಡಿದರು. ಜೆಎಸ್‌ಎಸ್ ಲಲಿತಕಲಾ ವೃಂದದ ಶ್ರೀಮತಿ ರೂಪಾ ರವೀಶ್ ಮತ್ತು ಶ್ರೀಮತಿ ಕೆ.ಜಿ. ವಿನುತಾ ಪ್ರಾರ್ಥಿಸಿದರು. ಜೆಎಸ್‌ಎಸ್ ಎಎಚ್‌ಇಆರ್‌ನ ಸಮಕುಲಾಧಿಪತಿಗಳಾದ ಡಾ. ಬಿ. ಸುರೇಶ್ ಸ್ವಾಗತಿಸಿದರು. ಶ್ರೀ ಎಸ್.ಪಿ. ಮಂಜುನಾಥ್ ವಂದಿಸಿದರು. ಪ್ರೊ. ಕೆ.ಎಸ್. ಸುರೇಶ್ ಕಾರ್ಯಕ್ರಮ ನಿರೂಪಿಸಿದರು.

**ವೈದ್ಯರಾದವರು ಮಾನವೀಯ ಗುಣಗಳನ್ನು ರೂಢಿಸಿಕೊಳ್ಳಿ**

ವೈದ್ಯರಾದವರು ಮಾನವೀಯ ಗುಣಗಳನ್ನು ರೂಢಿಸಿಕೊಳ್ಳಬೇಕು ಎಂದು ರಾಜೀವ್ ಗಾಂಧಿ ಆರೋಗ್ಯವಿಜ್ಞಾನ ವಿಶ್ವವಿದ್ಯಾಲಯದ ಕುಲಪತಿಗಳಾದ ಡಾ. ಎಸ್. ಸಚ್ಚಿದಾನಂದರವರು ಹೇಳಿದರು.

ಮಾರ್ಚ್ 5ರಂದು ಮೈಸೂರು ಜೆಎಸ್‌ಎಸ್ ವೈದ್ಯಕೀಯ ಮಹಾವಿದ್ಯಾಲಯದಲ್ಲಿ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ನಡೆದ ಪದವೀಧರರ ದಿನಾಚರಣೆಯಲ್ಲಿ ಮಾತನಾಡುತ್ತಾ ವಿದೇಶಗಳಲ್ಲಿ ವೈದ್ಯರಿಗೆ ನೀಡಿರುವ ಮನ್ನಣೆಯನ್ನು ಇಲ್ಲಿನ ವೈದ್ಯರೂ ಪಡೆಯುವಂತಾಗಬೇಕು. ಮುಂದಿನ ದಿನಗಳಲ್ಲಿ ಕುಟುಂಬ ವೈದ್ಯರಿಗೆ ಹೆಚ್ಚಿನ ಬೇಡಿಕೆ ಬರಲಿದೆ. ವೈದ್ಯಕೀಯ ಶಿಕ್ಷಣದಲ್ಲಿ ಬದಲಾಗುತ್ತಿರುವ ಪ್ರವೃತ್ತಿ ಗಮನಿಸದರೆ ಸನ್ನಿವೇಶವೂ ಬದಲಾಗುತ್ತಿದೆ ಎನಿಸುತ್ತದೆ. ಕೊರೋನಾದಿಂದಾಗಿ ಈಗ ಬಯೋಮೆಡಿಕಲ್ ಸಂಶೋಧನೆಯ ಮಹತ್ವವನ್ನು ಪ್ರತಿಪಾದಿಸಲಾಗಿದೆ. ಇದು ಕಡಿಮೆ ಸಮಯದಲ್ಲಿ ಲಸಿಕೆಯನ್ನು ಅಭಿವೃದ್ಧಿ ಪಡಿಸಲಿದೆ. ಜೆಎಸ್‌ಎಸ್ ಸಂಸ್ಥೆ ದೇಶದಲ್ಲಿ ವೈದ್ಯಕೀಯ ಶಿಕ್ಷಣದ ಗುಣಮಟ್ಟವನ್ನು ಎತ್ತಿಹಿಡಿದು ಜಗತ್ತಿನ ಅತ್ಯುತ್ತಮ ಶೈಕ್ಷಣಿಕ ಮತ್ತು ಸಂಶೋಧನಾ ಸಂಸ್ಥೆಯಾಗಿ ಬೆಳೆದು ನಿಂತಿದೆ ಎಂದು ಶ್ಲಾಘಿಸಿದರು.

ಕಾರ್ಯಕ್ರಮದಲ್ಲಿ 217 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಯಿತು. ಡಾ. ಸಿ.ಜಿ. ಬೆಟಸೂರಮಠ 'ಸಾಮರ್ಥ್ಯ' ನಿಯತಕಾಲಿಕೆಯನ್ನು ಬಿಡುಗಡೆಗೊಳಿಸಿದರು.

ಸಮಕುಲಾಧಿಪತಿಗಳಾದ ಡಾ. ಬಿ. ಸುರೇಶ್, ಕುಲಪತಿಗಳಾದ ಡಾ. ಸುರೀಂದರ್ ಸಿಂಗ್, ಕುಲಸಚಿವರಾದ ಡಾ. ಬಿ. ಮಂಜುನಾಥ್, ಜೆಎಸ್‌ಎಸ್ ಆಸ್ಪತ್ರೆಯ ನಿರ್ದೇಶಕರಾದ ಕರ್ನಲ್ ಡಾ. ಎಂ. ದಯಾನಂದ್ ಉಪಸ್ಥಿತರಿದ್ದರು. ಡಾ. ಬಿ.ಜೆ. ಸುಭಾಷ್‌ಚಂದ್ರ ಪ್ರತಿಜ್ಞಾ ವಿಧಿ ಬೋಧಿಸಿದರು. ಪ್ರಾಂಶುಪಾಲರಾದ ಡಾ. ಹೆಚ್. ಬಸವನಗೌಡಪ್ಪ ಸ್ವಾಗತಿಸಿದರು. ಕು. ನೀಲಾಂಜನಾ ಪ್ರಾರ್ಥಿಸಿದರು. ಡಾ. ಎಂ.ಎನ್. ಸುಮಾ ವಂದಿಸಿದರು. ಡಾ. ಪಿ. ಶಾಸ್ತ್ರಾ ಮತ್ತು ಡಾ. ಪ್ರಜ್ವಲಾ ಕಾರ್ಯಕ್ರಮ ನಿರೂಪಿಸಿದರು.

**ಸುತ್ತೂರು ಶ್ರೀಕ್ಷೇತ್ರದಲ್ಲಿ ಸಂಭ್ರಮದ ಮಹಾಶಿವರಾತ್ರಿ**

ಸುತ್ತೂರು ಶ್ರೀಕ್ಷೇತ್ರದಲ್ಲಿ ಮಾರ್ಚ್ 11ರಂದು ಮಹಾಶಿವರಾತ್ರಿಯ ಅಂಗವಾಗಿ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ವಿಶೇಷ ಪೂಜಾ ಕಾರ್ಯಕ್ರಮಗಳು ಜರುಗಿದವು. ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಕರ್ತೃಗದ್ದುಗೆ, ಶ್ರೀ ಮಹದೇಶ್ವರ, ಶ್ರೀ ಸೋಮೇಶ್ವರ, ಶ್ರೀ ವೀರಭದ್ರೇಶ್ವರ, ಶ್ರೀ ನಾರಾಯಣಸ್ವಾಮಿ ದೇವಾಲಯಗಳಲ್ಲಿ ರುದ್ರಾಭಿಷೇಕ, ಅಷ್ಟೋತ್ತರ ಮತ್ತು ವಿಶೇಷ ಪೂಜೆಗಳು ನೆರವೇರಿದವು.

ಮೈಸೂರಿನ ರಘುಲೀಲಾ ಸಂಗೀತ ಮಂದಿರದ ಕಲಾವಿದರಿಂದ 'ಭಕ್ತಿ ಸಂಕೀರ್ತನೆ' ವಿಶೇಷ ಭಜನಾ ಕಾರ್ಯಕ್ರಮ ಜರುಗಿತು. ಸುತ್ತೂರು ವಸತಿ ಶಾಲೆಯ ಸಂಗೀತ ಶಿಕ್ಷಕರು ವಚನ ಗಾಯನ ಮಾಡಿದರು. ಸುತ್ತೂರು ಜೆಎಸ್‌ಎಸ್ ವಸತಿ ಶಾಲೆಯ ವಿದ್ಯಾರ್ಥಿಗಳು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಿಕೊಟ್ಟರು. ಕಲಬುರ್ಗಿಯ ಶ್ರೀಮತಿ ಇಂದುಮತಿ ಸಾಲಿಮಠ ಮತ್ತು ತಂಡದವರಿಂದ 'ಜೀವನೋತ್ಸಾಹ' ಕಾರ್ಯಕ್ರಮ ನಡೆಯಿತು. ಸುತ್ತೂರಿನ ಶ್ರೀ ಗುರುಶಾಂತಪ್ಪ ಮತ್ತು ತಂಡದವರು ಭಕ್ತಿ ಗೀತೆಗಳ ಗಾಯನ ಹಾಗೂ ಬಾಣಹಳ್ಳಿ, ಭೋಗಯ್ಯನಹುಂಡಿ, ಹೊಸಹಳ್ಳಿ, ಚುಂಚನಹಳ್ಳಿ ಮತ್ತು ಹೊರಳವಾಡಿಯ ಭಜನಾ ತಂಡದವರು ಅಖಂಡ ಭಜನೆ ನಡೆಸಿಕೊಟ್ಟರು. ಇದೇ ಸಂದರ್ಭದಲ್ಲಿ 80ಕ್ಕೂ ಹೆಚ್ಚು ವಟುಗಳಿಗೆ ಶಿವದೀಕ್ಷೆ ನೀಡಲಾಯಿತು. ನೂರಾರು ಭಕ್ತರು ಶಿವಪೂಜೆಯಲ್ಲಿ ಪಾಲ್ಗೊಂಡಿದ್ದರು.

**ಕೃಷಿ ಕ್ಷೇತ್ರಕ್ಕೇ ಸಂಪೂರ್ಣ ಬದುಕನ್ನು ಮೀಸಲಿಟ್ಟವರು ಡಾ. ಎಂ. ಮಹದೇವಪ್ಪ**

ಕೃಷಿ ಕ್ಷೇತ್ರಕ್ಕೇ ಸಂಪೂರ್ಣ ಬದುಕನ್ನು ಮೀಸಲಿಟ್ಟವರು ಡಾ. ಎಂ. ಮಹದೇವಪ್ಪನವರು ಎಂದು ಪರಮಪೂಜ್ಯ ಜಗದ್ಗುರುಗಳು ಹೇಳಿದರು.

ಮಾರ್ಚ್ 14ರಂದು ಮೈಸೂರಿನ ಸರಸ್ವತಿಪುರಂನಲ್ಲಿರುವ ಜೆಎಸ್‌ಎಸ್ ಮಹಿಳಾ ಕಾಲೇಜಿನ ನವಜ್ಯೋತಿ ಸಭಾಂಗಣದಲ್ಲಿ ಏರ್ಪಡಿಸಿದ್ದ ಕೃಷಿವಿಜ್ಞಾನಿ ಡಾ. ಎಂ. ಮಹದೇವಪ್ಪನವರ ಸ್ಮರಣೆ ಕಾರ್ಯಕ್ರಮದ ದಿವ್ಯ ಸಾನ್ನಿಧ್ಯ ವಹಿಸಿ, ರೈತರು ಸ್ವಾವಲಂಬಿಗಳಾಗಬೇಕು ಎಂದು ಮಹದೇವಪ್ಪನವರ ಆಶಯವಾಗಿತ್ತು. ವ್ಯವಸಾಯವನ್ನು ಲಾಭದಾಯಕವಾಗಿಸುವ ನಿಟ್ಟಿನಲ್ಲಿ ಅನೇಕ ಜನಪರ ಯೋಜನೆಗಳನ್ನು ಅವರು ರೂಪಿಸಿದ್ದರು. ಹತ್ತಾರು ಹೈಬ್ರಿಡ್ ಭತ್ತದ ತಳಿಗಳನ್ನು ಸಂಶೋಧಿಸಿ ರೈತರ ಸುಸ್ಥಿರ

ಬದುಕಿಗೆ ಶ್ರಮಿಸಿದ ಹೆಮ್ಮೆಯ ಕೃಷಿವಿಜ್ಞಾನಿಯಾಗಿದ್ದರು ಎಂದು ತಿಳಿಸಿದರು.

ವಿಜಯಪುರ ಜ್ಞಾನಯೋಗಾಶ್ರಮದ ನಿರಾಭಾರಿ ಚರಮೂರ್ತಿಗಳಾದ ಶ್ರೀ ಸಿದ್ಧೇಶ್ವರ ಮಹಾಸ್ವಾಮಿಗಳು ಬಹಿರಂಗದ ಕೃಷಿಯಂತೆ ಅಂತರಂಗದ ಕೃಷಿಯು ಮನುಷ್ಯನಿಗೆ ಬಹಳ ಅವಶ್ಯಕ. ಬಹಿರಂಗದ ಕೃಷಿಯಿಂದ ಮನುಷ್ಯನಿಗೆ ಉತ್ತಮ ಆಹಾರ ಲಭಿಸಿದರೆ, ಅಂತರಂಗದ ಕೃಷಿಯಿಂದ ಮನುಷ್ಯನಿಗೆ ನೆಮ್ಮದಿ ಲಭಿಸುತ್ತದೆ. ಡಾ. ಮಹದೇವಪ್ಪನವರು ಬಹಿರಂಗದ ಕೃಷಿಯಿಂದ ದೇಶಕ್ಕೆ ಒಳಿತನ್ನು ಮಾಡಿದರೆ, ಅಂತರಂಗದ ಕೃಷಿಯಿಂದ ಸ್ನೇಹಿತರು, ಬಂಧು–ಬಳಗ ಮತ್ತು ಕುಟುಂಬ ವರ್ಗದಲ್ಲಿ ನೆಮ್ಮದಿಯನ್ನು ಕಂಡರು ಎಂದರು.

ಶ್ರೀ ಕೆ.ಸಿ. ಶಿವಪ್ಪನವರು ಮಹದೇವಪ್ಪನವರು ಹಾಗೂ ಅವರು ಶಾಲೆಯಲ್ಲಿ ಸಹಪಾಠಿಗಳು. ಅವರು ಅತ್ಯಂತ ಶಿಸ್ತಿನ ವ್ಯಕ್ತಿಯಾಗಿದ್ದರು. ಕ್ರಿಯಾಶೀಲ ವ್ಯಕ್ತಿತ್ವವನ್ನು ಹೊಂದಿದ್ದರಿಂದಲೇ ಅವರು ಕೃಷಿಯಲ್ಲಿ ಸಾಧನೆಯನ್ನು ಮಾಡಿ ಅಂತಾರಾಷ್ಟ್ರೀಯ ಮಟ್ಟದಲ್ಲಿ ಖ್ಯಾತಿಯನ್ನು ಗಳಿಸಲು ಸಾಧ್ಯವಾಯಿತು ಎಂದು ಸ್ಮರಿಸಿದರು.

ಇದೇ ಸಂದರ್ಭದಲ್ಲಿ ಶ್ರೀ ಜಿ.ಎಲ್. ತ್ರಿಪುರಾಂತಕರವರು ಡಾ. ಮಹದೇವಪ್ಪನವರಿಗೆ ಸಮರ್ಪಿಸಿದ ನೂರೊಂದು ಚೌಪದಿಗಳ 'ಅಪ್ರಮೇಯ ವಾಣಿ' ಕೃತಿಯನ್ನು ಬಿಡುಗಡೆ ಮಾಡಲಾಯಿತು. ಡಾ. ಎಂ. ಮಹದೇವಪ್ಪನವರ ಪುತ್ರಿ ಶ್ರೀಮತಿ ಮಮತಾ ಶೇಖರ್‌ರವರು ಅವರ ತಂದೆಯವರ ಜೀವನದ ಪ್ರಮುಖ ಘಟನೆಗಳನ್ನು ಪವರ್ ಪಾಯಿಂಟ್ ಮೂಲಕ ಪ್ರದರ್ಶಿಸಿ ವಿವರಣೆ ನೀಡಿದರು.

ಮಹಾತ್ಮ ಬಾ ಪುಲೆ ಕೃಷಿ ವಿವಿಯ ವಿಶ್ರಾಂತ ಕುಲಪತಿಗಳಾದ ಪ್ರೊ. ಕೆ.ಪಿ. ವಿಶ್ವನಾಥ್, ಸಿಎಫ್‌ಟಿಆರ್‌ಐನ ವಿಶ್ರಾಂತ ಉಪನಿರ್ದೇಶಕರಾದ ಡಾ. ಅಲಿ, ಶ್ರೀ ಮೂಗೂರು ನಂಜುಂಡಸ್ವಾಮಿ, ಕುಟುಂಬ ಸದಸ್ಯರುಗಳಾದ ಶ್ರೀಮತಿ ಸುನೀತಾ, ಶ್ರೀ ಉಲ್ಲಾಸ್ ಹಾಗೂ ಅಭಿಷೇಕ್‌ರವರುಗಳು ಮಹದೇವಪ್ಪನವರೊಂದಿಗಿನ ಒಡನಾಟವನ್ನು ಹಂಚಿಕೊಂಡರು. ಕಾರ್ಯಕ್ರಮದಲ್ಲಿ ಮಹದೇವಪ್ಪನವರ ಕುಟುಂಬ ವರ್ಗದವರು, ಮಿತ್ರರು, ಜೆಎಸ್‌ಎಸ್ ಮಹಾವಿದ್ಯಾಪೀಠದ ಅಧಿಕಾರಿಗಳು, ಮೊದಲಾದವರು ಪಾಲ್ಗೊಂಡಿದ್ದರು.

**ಸಹಸ್ರಾರು ಮಂದಿಗೆ ಬೆಳಕು ನೀಡಿದ ಪಂಚಾಕ್ಷರಿ ಗವಾಯಿಗಳು**

ಪಂಚಾಕ್ಷರಿ ಗವಾಯಿಗಳು ಗದುಗಿನಲ್ಲಿ ವೀರೇಶ್ವರ ಪುಣ್ಯಾಶ್ರಮವನ್ನು ಸ್ಥಾಪಿಸಿ ಸಂಗೀತ ಕಲಿಯಲು ಅವಕಾಶ ಕಲ್ಪಿಸಿಕೊಟ್ಟು ಸಹಸ್ರಾರು ಮಂದಿಗೆ ಬೆಳಕು ನೀಡಿದರು ಎಂದು ಪರಮಪೂಜ್ಯ ಜಗದ್ಗುರುಗಳು ಹೇಳಿದರು

ಮಾರ್ಚ್ 14ರಂದು ಮೈಸೂರಿನಲ್ಲಿ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಶ್ರೀ ಕುನ್ನಾಳು ಬಸವಲಿಂಗೇಗೌಡರ ದತ್ತಿ ವತಿಯಿಂದ ಗಾನಯೋಗಿ ಪಂಚಾಕ್ಷರಿ ಗವಾಯಿಗಳವರ ಸ್ಮರಣಾರ್ಥ ಆಯೋಜಿಸಿದ್ದ 'ವಚನ ಸಂಗೀತೋತ್ಸವ'ದ ದಿವ್ಯ

ಸಾನ್ನಿಧ್ಯ ವಹಿಸಿ ಪಂಚಾಕ್ಷರಿ ಗವಾಯಿಗಳು ಅಪರೂಪದ ಸಂತರು. ಅವರು ಎಂದೂ ಬಹಿರಂಗದ ಬೆಳಕು ನೋಡಲಿಲ್ಲ. ಆದರೆ ಅವರೊಳಗಿನ ಶಕ್ತಿ ಅಪಾರವಾಗಿತ್ತು. ಹುಟ್ಟುವಾಗಲೇ ದೃಷ್ಟಿಯ ವಿಶೇಷಚೇತನರಾಗಿದ್ದರೂ ಅಂತರಂಗದಲ್ಲಿ ಮಹಾಬೆಳಕನ್ನು ಹೊಂದಿದ್ದರು. ಸಂಗೀತವು ಮನಸ್ಸಿಗೆ ಮುದ, ಸಂತಸ ನೀಡುತ್ತದೆ. ಮನುಷ್ಯನ ನೋವು ಮರೆಸುವ ಶಕ್ತಿ ಸಂಗೀತಕ್ಕೆ ಇದೆ. ಕರ್ನಾಟಕ ಮತ್ತು ಹಿಂದೂಸ್ತಾನಿ ಸಂಗೀತದ ಪರಂಪರೆ ಸಮಾನವಾಗಿ ಇರುವುದು ನಮ್ಮ ರಾಜ್ಯದಲ್ಲಿ ಮಾತ್ರ ಎಂದು ಹೇಳಿದರು.

ಖ್ಯಾತ ಹಿಂದೂಸ್ತಾನಿ ಗಾಯಕರಾದ ಪಂ. ಇಂದೂಧರ ನಿರೋಡಿಯವರು ಪಂಚಾಕ್ಷರಿ ಗವಾಯಿಗಳು ಸಂಗೀತವನ್ನೇ ಸಾಧನವಾಗಿಸಿಕೊಂಡು ಬೆಳೆದವರು. ಅವರು ಹಲವರಿಗೆ ಸಂಗೀತ ಕಲಿಸಿಕೊಟ್ಟರು. ಅವರಿಂದ ಸಂಗೀತ ಕಲಿತವರು ದೇಶದ ವಿವಿಧ ಭಾಗಗಳಲ್ಲಿ ಸಂಗೀತ ಕಾರ್ಯಕ್ರಮ ನೀಡಿದ್ದು ಮಾತ್ರವಲ್ಲದೆ, ಅಸಂಖ್ಯಾತ ಮಂದಿಗೆ ಸಂಗೀತ ಕಲಿಸಿ ಕೊಟ್ಟಿದ್ದಾರೆ. ಈ ಕ್ಷೇತ್ರಕ್ಕೆ ಅವರು ನೀಡಿದ ಕೊಡುಗೆ ಅಪಾರ ಎಂದು ಸ್ಮರಿಸಿದರು.

ಕಾರ್ಯಕ್ರಮದಲ್ಲಿ ಪಂ. ಜೆ. ನಿರಂಜನ ಮತ್ತು ಕು. ಜೆ. ಪೂರ್ವಿ ಮತ್ತು ಶ್ರೀಮತಿ ಸುನೀತ ಹಿರೇಮಠ ವಚನ ಸಂಗೀತ ನಡೆಸಿಕೊಟ್ಟರು. ಶ್ರೀಮತಿ ಸುದರ್ಶಿನಿ ಚಂದ್ರಪ್ಪ ಪ್ರಾರ್ಥಿಸಿದರು. ಶ್ರೀ ಮ.ಗು. ಸದಾನಂದಯ್ಯ ಸ್ವಾಗತಿಸಿದರು. ಶ್ರೀಮತಿ ಮಂಗಳ ಮುದ್ದುಮಾದಪ್ಪ ವಂದಿಸಿದರು. ಶ್ರೀ ಚಂಚಲಸ್ವಾಮಿ ಕಾರ್ಯಕ್ರಮ ನಿರೂಪಿಸಿದರು. ದತ್ತಿ ದಾನಿಗಳಾದ ಶ್ರೀಮತಿ ದಾಕ್ಷಾಯಿಣಿ ಸೋಮಶೇಖರಪ್ಪ ಉಪಸ್ಥಿತರಿದ್ದರು.

**ವಚನ ಸಾಹಿತ್ಯ ಕೇವಲ ಮಾತಿಗೆ ಸೀಮಿತವಾಗದೆ ಆಚರಣೆಗೂ ಬರಬೇಕು**

ವಚನ ಸಾಹಿತ್ಯ ಕೇವಲ ಮಾತಿಗೆ ಸೀಮಿತವಾಗದೆ ಆಚರಣೆಗೂ ಬರಬೇಕು ಎಂದು ಪರಮಪೂಜ್ಯ ಜಗದ್ಗುರುಗಳು ಹೇಳಿದರು

ಮಾರ್ಚ್ 15ರಂದು ಚಿಕ್ಕಮಗಳೂರಿನ ಶ್ರೀ ಬಸವತತ್ತ್ವ ಪೀಠದ ಶ್ರೀ ಚಂದ್ರಶೇಖರ ಸ್ವಾಮಿಗಳವರ 166ನೇ ಜಯಂತಿ ಮತ್ತು ಶ್ರೀ ಜಯಚಂದ್ರಶೇಖರ ಸ್ವಾಮಿಗಳವರ 25ನೇ ಸಂಸ್ಮರಣೆ ಅಂಗವಾಗಿ ಏರ್ಪಡಿಸಿದ್ದ ಬಸವತತ್ವ ಸಮಾವೇಶದ ದಿವ್ಯ ಸಾನ್ನಿಧ್ಯ ವಹಿಸಿ ವಚನ ಸಾಹಿತ್ಯ ಜನಜೀವನದ ಮೇಲೆ ಅಪಾರ ಪ್ರಭಾವವನ್ನು ಬೀರಿದೆ. ಅದು ಇಂದಿಗೂ ಕೂಡ ಮೌಲ್ಯಯುತವಾದಂತಹದ್ದು. ಡಾ. ಫ.ಗು. ಹಳಕಟ್ಟಿಯವರು ಮನೆ ಮಠಗಳಲ್ಲಿ ಚದುರಿಹೋಗಿದ್ದ ವಚನಗಳನ್ನು ಸಂಗ್ರಹ ಮಾಡಿ ಅವುಗಳನ್ನು ಮುದ್ರಣದ ಹಂತಕ್ಕೆ ತರುವಲ್ಲಿ ತಮ್ಮ ಬದುಕನ್ನೇ ಮುಡಿಪಾಗಿಟ್ಟಿದ್ದರು. ವಚನ ಸಾಹಿತ್ಯದ ಸಂಗ್ರಹಣೆಯಲ್ಲಿ ಅವರ ಪಾಲು ಬಹುದೊಡ್ಡದು ಎಂದರು.

ಆನಂದಪುರಂನ ಜಗದ್ಗುರು ಡಾ. ಶ್ರೀ ಮಲ್ಲಿಕಾರ್ಜುನ ಮುರುಘರಾಜೇಂದ್ರ ಮಹಾಸ್ವಾಮಿಗಳು  ಬಸವತತ್ತ್ವ ಸಂದೇಶಗಳು ಇಂದು ವಿದೇಶದಲ್ಲೂ ಸಾಕಷ್ಟು ಪ್ರಚುರಗೊಳ್ಳುತ್ತಿವೆ. ವಚನಗಳು ಹಲವಾರು ಭಾಷೆಗಳಿಗೆ ಅನುವಾದಗೊಂಡಿವೆ. ಹಲವು

ಸಮಾಜಮುಖಿ ಕಾರ್ಯಗಳ ಮೂಲಕ ಬಸವತತ್ತ್ವ ಸಂದೇಶಗಳು ಎಲ್ಲೆಡೆ ಪ್ರಚಾರ ವಾಗುತ್ತಿವೆ ಎಂದು ತಿಳಿಸಿದರು.

ಸಾಣೆಹಳ್ಳಿಯ ಡಾ. ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳು ಸಾಮಾಜಿಕ ಕಳಕಳಿ, ವೈಚಾರಿಕ ಪ್ರಜ್ಞೆ, ಕಾಯಕ ನಿಷ್ಠೆ ಹಾಗೂ ಸಮಾಜಮುಖಿ ಕೆಲಸಗಳನ್ನು ಮಾಡುವವರು ಮಠದ ಗುರುಗಳಾಗಬೇಕು ಎಂದು ತಿಳಿಸಿದರು.

ಶಾಸಕರು ಹಾಗೂ ಮಾಜಿ ಸಚಿವರಾದ ಶ್ರೀ ಸಿ.ಟಿ. ರವಿಯವರು ಇಂದು ಕಾಯಕ ಪ್ರೀತಿಗಿಂತ ಹಣದ ಪ್ರೀತಿ ಅತಿಯಾಗುತ್ತಿದೆ. ಅಧಿಕಾರ ಮತ್ತು ಹಣ ಗುಣದ ಸ್ಥಾನವನ್ನು ಆವರಿಸಿಕೊಳ್ಳುತ್ತಿವೆ. ಇಂದಿನ ಸಮಕಾಲೀನ ಸಾಮಾಜಿಕ ಸ್ಥಿತಿಗತಿಗಳನ್ನು 12ನೇ ಶತಮಾನದ ಕಾಲಘಟ್ಟಕ್ಕೆ ಹೋಲಿಸಿ ನೋಡಬೇಕಿದೆ. ರಾಜಪ್ರಭುತ್ವದ ಕಾಲಘಟ್ಟದಲ್ಲಿ ಪ್ರಜಾಪ್ರಭುತ್ವದ ಆಶಯಕ್ಕೆ ಮನ್ನಣೆ ಕೊಡುವ ಕೆಲಸವನ್ನು ಅವರು ಮಾಡಿದರು ಎಂದರು.

ಬಿಜೆಪಿ ರಾಜ್ಯ ಘಟಕದ ಉಪಾಧ್ಯಕ್ಷರಾದ ಶ್ರೀ ಬಿ.ವೈ. ವಿಜಯೇಂದ್ರರವರು ಬಸವಣ್ಣನವರು ಸಮಾನತೆಯ ಹರಿಕಾರರು. ಮಾನವತಾ ಧರ್ಮವನ್ನು ಪ್ರತಿಪಾದಿಸಿ ದವರು. ಬಸವಣ್ಣನವರ ತತ್ವ ಮತ್ತು ವಚನ ಸಾಹಿತ್ಯ ಈ ನಾಡಿನ ಹಿರಿಮೆ. ಅದರ ಅನುಸರಣೆಯಿಂದ ಸಮಸಮಾಜ ನಿರ್ಮಾಣ ಸಾಧ್ಯ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಡಾ. ಶ್ರೀ ಬಸವ ಮರುಳಸಿದ್ಧ ಸ್ವಾಮಿಗಳವರ 'ಗುರು ಲಿಂಗ ಜಂಗಮ' ಮತ್ತು ಶ್ರೀ ಮಲ್ಲೇದೇವರಹಳ್ಳಿ ನಾಗಭೂಷಣರವರ 'ಸುಗುಣಧಾರೆ' ಕೃತಿಗಳನ್ನು ಬಿಡುಗಡೆ ಮಾಡಲಾಯಿತು. ರಾಜ್ಯ ಕದಳಿ ಮಹಿಳಾ ವೇದಿಕೆಯ ಸಂಚಾಲಕರಾದ ಶ್ರೀಮತಿ ಸುಶೀಲಾ ಸೋಮಶೇಖರ್‌ರವರು ಶರಣರ ಮೌಲ್ಯಗಳ ಕುರಿತು ಉಪನ್ಯಾಸ ನೀಡಿದರು. ಶಾಸಕರಾದ ಶ್ರೀ ಡಿ.ಎಸ್. ಸುರೇಶ್, ವಿಧಾನಪರಿಷತ್ ಸದಸ್ಯರಾದ ಶ್ರೀ ಎಸ್. ರುದ್ರೇಗೌಡ, ವೀರಶೈವ–ಲಿಂಗಾಯತ ಅಭಿವೃದ್ಧಿ ನಿಗಮದ ಅಧ್ಯಕ್ಷರಾದ ಶ್ರೀ ಬಿ.ಎಸ್. ಪರಮಶಿವಯ್ಯ, ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷರಾದ ಶ್ರೀ ಸಿ.ಎಸ್. ಷಡಕ್ಷರಿ ಮೊದಲಾದವರು ಪಾಲ್ಗೊಂಡಿದ್ದರು.

**ಅನುಭವದಲ್ಲಿ ಶ್ರೀಮಂತರಾದಂತೆ ಅಭಿಪ್ರಾಯಗಳು ಬದಲಾಗುತ್ತವೆ**

ಅನುಭವದಲ್ಲಿ ಶ್ರೀಮಂತರಾದಂತೆ ಅಭಿಪ್ರಾಯಗಳು ಬದಲಾಗುತ್ತವೆ ಎಂದು ಪರಮಪೂಜ್ಯ ಜಗದ್ಗುರುಗಳು ತಿಳಿಸಿದರು

ಮಾರ್ಚ್ 17ರಂದು ಚಾಮರಾಜನಗರದ ಡಾ. ಬಿ.ಆರ್. ಅಂಬೇಡ್ಕರ್ ಸ್ನಾತಕೋತ್ತರ ಅಧ್ಯಯನ ಕೇಂದ್ರದಲ್ಲಿ ಅಖಿಲ ಕರ್ನಾಟಕ ಜಾನಪದ ಕಲಾವಿದರ ಒಕ್ಕೂಟ ಹಾಗೂ ಕರ್ನಾಟಕ ಜಾನಪದ ಪರಿಷತ್ತಿನ ಸಂಯುಕ್ತ ಆಶ್ರಯದಲ್ಲಿ ನಡೆದ 'ಕತ್ತಲ ರಾಜ್ಯದ ಜ್ಯೋತಿಗಳು ಮಲೆ ಮಹದೇಶ್ವರ ಮತ್ತು ಮಂಟೇಸ್ವಾಮಿ ಸಂಸ್ಕೃತಿ ಉತ್ಸವ' ಕಾರ್ಯಕ್ರಮದ ದಿವ್ಯ ಸಾನ್ನಿಧ್ಯ ವಹಿಸಿ ನೋಡುವವರಲ್ಲಿ ಅಂತರಂಗದ ದೃಷ್ಟಿ ಇದ್ದರೆ ಜಗತ್ತಿನಲ್ಲಿ

ಬೆಳಕು ಕಾಣುತ್ತದೆ. ಅಂತರಂಗದ ದೃಷ್ಟಿ ಸರಿ ಇಲ್ಲದಿದ್ದರೆ ಬೆಳಕು ಇದ್ದರೂ ಕತ್ತಲು ಕಾಣುತ್ತದೆ. ಹೀಗಾಗಿ ನೋಡುವವನ ದೃಷ್ಟಿಯಲ್ಲಿ ಬೆಳಕು ಮತ್ತು ಕತ್ತಲೆ ನಿರ್ಧರಿತವಾಗುತ್ತದೆ ಎಂದು ಹೇಳಿದರು.

ಕವಿಗಳಾದ ಡಾ. ಸಿದ್ಧಲಿಂಗಯ್ಯನವರು ಮಲೆ ಮಹದೇಶ್ವರರು ಮತ್ತು ಮಂಟೇಸ್ವಾಮಿಯವರು ಕ್ರಾಂತಿಕಾರರು, ಬಂಡಾಯಗಾರರು. ಹಲವು ಶತಮಾನಗಳ ಹಿಂದೆಯೇ ವರ್ಗ, ವರ್ಣರಹಿತ ಸಮಾಜವನ್ನು ಕಟ್ಟಲು ಶ್ರಮಿಸಿದವರು. ಸಮಾಜವನ್ನು ಉದ್ಧಾರ ಮಾಡಿ ತೋರಿಸಿದವರು. ಈ ಇಬ್ಬರು ಶತಮಾನಗಳ ಹಿಂದೆಯೇ ಧಾರ್ಮಿಕ ಚೌಕಟ್ಟಿನಲ್ಲಿ ಕ್ರಾಂತಿ ಮಾಡಿದವರು. ಇಬ್ಬರನ್ನೂ ಬುದ್ಧನೊಂದಿಗೆ ಹೋಲಿಸಬಹುದು. ಬುದ್ಧನ ರೀತಿಯಲ್ಲೇ ಇವರಲ್ಲೂ ಸೌಮ್ಯತೆ ಇದೆ. ಮೂವರೂ ನಿಂದನೆಯನ್ನೇ ಪ್ರಶಂಸೆಯಾಗಿ ಪರಿಗಣಿಸಿದವರು. ನಿಂದನೆಯಿಂದ ನೊಂದುಕೊಳ್ಳಲಿಲ್ಲ. ಜಾತ್ಯತೀತ ವಿಚಾರದಲ್ಲೂ ಹೋಲಿಕೆ ಇದೆ. ಮೂವರೂ ಜಾತಿಯನ್ನು ಪರಿಗಣಿಸಿರಲಿಲ್ಲ ಎಂದು ವಿವರಿಸಿದರು.

ಜಿಲ್ಲಾಧಿಕಾರಿಗಳಾದ ಡಾ. ಎಂ.ಆರ್. ರವಿಯವರು ಮಲೆ ಮಹದೇಶ್ವರರು ಹಾಗೂ ಮಂಟೇಸ್ವಾಮಿಯವರು ನಮ್ಮ ಜೀವನದ ವ್ಯಕ್ತಿತ್ವದ ಭಾಗವಾಗಿದ್ದಾರೆ. ನೈಸರ್ಗಿಕವಾಗಿ, ಸಾಂಸ್ಕೃತಿಕವಾಗಿ ಶ್ರೀಮಂತವಾಗಿರುವ ಈ ಜಿಲ್ಲೆಯ ಮಣ್ಣಿನಲ್ಲಿ ಹಲವಾರು ದಾರ್ಶನಿಕರು ಜನಿಸಿದ್ದಾರೆ. ಇದು ಕೇವಲ ಕಾವ್ಯ, ಸಂಸ್ಕೃತಿಗೆ ಮಾತ್ರ ಮೀಸಲಾಗಿರಬಾರದು. ನಾವು ಅವರ ವಾರಸುದಾರರಾಗಿ ಮುಂದಿನ ಪೀಳಿಗೆಗೆ ತೆಗೆದುಕೊಂಡು ಹೋಗಬೇಕಿದೆ ಎಂದರು.

ಕೇಂದ್ರ ಸಾಹಿತ್ಯ ಅಕಾಡೆಮಿಯ ಯುವ ಪ್ರಶಸ್ತಿ ಪುರಸ್ಕೃತರಾದ ಶ್ರೀ ಸ್ವಾಮಿ ಪೊನ್ನಾಚಿಯವರನ್ನು ಸನ್ಮಾನಿಸಲಾಯಿತು. ಜಾನಪದ ವಿದ್ವಾಂಸರಾದ ಡಾ. ಕೃಷ್ಣಮೂರ್ತಿ ಹನೂರು, ಸಾಹಿತಿಗಳಾದ ಡಾ. ಕಾ.ವೆಂ. ಶ್ರೀನಿವಾಸಮೂರ್ತಿ, ಸ್ನಾತಕೋತ್ತರ ಕೇಂದ್ರದ ನಿರ್ದೇಶಕರಾದ ಡಾ. ಶಿವಬಸವಯ್ಯ, ಶರಣ ಸಾಹಿತ್ಯ ಪರಿಷತ್ತಿನ ಜಿಲ್ಲಾ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಬಿ.ಕೆ. ರವಿಕುಮಾರ್, ಅಖಿಲ ಕರ್ನಾಟಕ ಜಾನಪದ ಕಲಾವಿದರ ಒಕ್ಕೂಟದ ರಾಜ್ಯಾಧ್ಯಕ್ಷರಾದ ಶ್ರೀ ಜೋಗಿಲ ಸಿದ್ದರಾಜು, ಜಿಲ್ಲಾ ಜಾನಪದ ಪರಿಷತ್ತಿನ ಅಧ್ಯಕ್ಷರಾದ ಶ್ರೀ ನರಸಿಂಹಮೂರ್ತಿ ಮೊದಲಾದವರು ಪಾಲ್ಗೊಂಡಿದ್ದರು.

**ಜೆಎಸ್‌ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ವಿಶ್ವವಿದ್ಯಾನಿಲಯದಲ್ಲಿ 'ಸೆಂಟರ್ ಆಫ್ ಎಕ್ಸಲೆನ್ಸ್' ಸ್ಥಾಪನೆ**

ಮೈಸೂರು ಶ್ರೀ ಸುತ್ತೂರು ಶಾಖಾಮಠದಲ್ಲಿ ಮಾರ್ಚ್ 18ರಂದು ನಡೆದ ಭಾರತೀಯ ರಬ್ಬರ್ ಸಂಸ್ಥೆಯ ಸಹಯೋಗದೊಂದಿಗೆ ಜೆಎಸ್‌ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ವಿಶ್ವವಿದ್ಯಾನಿಲಯದಲ್ಲಿ 'ಸೆಂಟರ್ ಆಫ್ ಎಕ್ಸಲೆನ್ಸ್' ಸ್ಥಾಪಿಸಲು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಕಾರ್ಯನಿರ್ವಾಹಕ ಕಾರ್ಯದರ್ಶಿಗಳಾದ ಡಾ. ಸಿ.ಜಿ. ಬೆಟಸೂರಮಠ ಹಾಗೂ ಐಆರ್‌ಐನ ಮೈಸೂರಿನ ಆಡಳಿತ ಸಮಿತಿ ಅಧ್ಯಕ್ಷರಾಗಿರುವ ಡಾ. ಆರ್. ಮುಖ್ಯೋಪಾಧ್ಯಾಯರವರು ಒಡಂಬಡಿಕೆಗೆ ಸಹಿ

ಮಾಡಿ ಎಂಓಯು ಅನ್ನು ವಿನಿಮಯ ಮಾಡಿಕೊಂಡರು.

ಈ ಸಂದರ್ಭದಲ್ಲಿ ಡಾ. ಬಿ. ಸುರೇಶ್, ಪ್ರೊ. ಸಿದ್ದರಾಮಯ್ಯ, ಪ್ರೊ. ಎಂ.ಹೆಚ್. ಧನಂಜಯ, ಡಾ. ಎಸ್.ಎ. ಧನರಾಜ್, ಪ್ರೊ. ಎಸ್.ಬಿ. ಕಿವಡೆ, ಡಾ. ರಾಜಗೋಪಾಲಯ್ಯ, ಶ್ರೀ ಈಶ್ವರ ರಾವ್, ಶ್ರೀ ವಾಸುದೇವರಾವ್ ಮತ್ತು ಶ್ರೀ ಎಸ್. ಮಲ್ಲಿಕಾರ್ಜುನಯ್ಯ ಮೊದಲಾದವರು ಪಾಲ್ಗೊಂಡಿದ್ದರು.

ಇಂಡಿಯನ್ ರಬ್ಬರ್ ಇನ್ಸ್ಟಿಟ್ಯೂಟ್ ಭಾರತದಲ್ಲಿ ರಬ್ಬರ್ ಹಾಗೂ ಅದಕ್ಕೆ ಸಂಬಂಧಿಸಿದ ಕೈಗಾರಿಕೆಗಳಿಗೆ ಸಂಯೋಜಿತ ಇಂಜಿನಿಯರ್‌ಗಳು, ವಿಜ್ಞಾನಿಗಳು, ಶಿಕ್ಷಣತಜ್ಞರುಗಳನ್ನೊಳಗೊಂಡ ವೃತ್ತಿಪರ ಸಂಸ್ಥೆಯಾಗಿದೆ. ಸೆಂಟರ್ ಆಫ್ ಎಕ್ಸಲೆನ್ಸ್ ಅನ್ನು ಸ್ಥಾಪಿಸಲು ಜೆಎಸ್‌ಎಸ್ ಮಹಾವಿದ್ಯಾಪೀಠವು 10000 ಚದರ ಅಡಿ ಜಾಗವನ್ನು ಐಆರ್‌ಐಗೆ ದೀರ್ಘಕಾಲದ ಅವಧಿಗೆ ಗುತ್ತಿಗೆ ನೀಡಿದೆ. ಈ ಸೆಂಟರ್ ಆಫ್ ಎಕ್ಸಲೆನ್ಸ್ 'ರಬ್ಬರ್ ವಿಜ್ಞಾನ ಮತ್ತು ತಂತ್ರಜ್ಞಾನ' ಕ್ಷೇತ್ರದ ಎಲ್ಲಾ ಆಯಾಮಗಳ ಜ್ಞಾನವನ್ನು ಪಸರಿಸುವ ರಾಷ್ಟ್ರೀಯ ಕೇಂದ್ರವಾಗಿ ಕಾರ್ಯನಿರ್ವಹಿಸಲಿದೆ. ಈ ಸೆಂಟರ್‌ನಿಂದಾಗಿ ವಿದ್ಯಾರ್ಥಿಗಳಿಗೆ ಉದ್ಯೋಗಾವಕಾಶಗಳು ದೊರೆಯಲಿವೆ.

**ಮೈಸೂರಿನ ಶ್ರೀ ಸುತ್ತೂರು ಶಾಖಾಮಠಕ್ಕೆ ಮುಖ್ಯ ನ್ಯಾಯಮೂರ್ತಿಗಳ ಭೇಟಿ**

ಮೈಸೂರು ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ಶ್ರೀ ಸುತ್ತೂರು ಶಾಖಾಮಠಕ್ಕೆ ಭಾರತದ ಸರ್ವೋಚ್ಚ ನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿಗಳಾದ ಗೌ.ನ್ಯಾ. ಶ್ರೀ ಶರತ್ ಅರವಿಂದ್ ಬೊಬ್ಡೆಯವರು ಮಾರ್ಚ್ 20ರಂದು ಭೇಟಿ ನೀಡಿ ಪರಮಪೂಜ್ಯ ಜಗದ್ಗುರುಗಳವರ ದರ್ಶನಾಶೀರ್ವಾದ ಪಡೆದರು. ಅವರು ಶ್ರೀಗಳವರೊಡನೆ ಕೆಲವು ಸಮಯ ಸಮಾಲೋಚನೆ ನಡೆಸಿದರು. ಶ್ರೀಮಠ ಹಾಗೂ ಸಂಸ್ಥೆಯ ಸೇವಾಕಾರ್ಯಗಳ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು. ಭಾರತೀಯ ಸಾಂಸ್ಕೃತಿಕ ಪರಂಪರೆಯನ್ನು ಉಳಿಸಿ ಬೆಳೆಸಿಕೊಂಡು ಬರುತ್ತಿರುವ ಬಗ್ಗೆ ಕಳಕಳಿ ವ್ಯಕ್ತಪಡಿಸಿದರು. ಪೂಜ್ಯರು ಅವರನ್ನು ಗೌರವಿಸಿ, ಸನ್ಮಾನಿಸಿ ಆಶೀರ್ವದಿಸಿದರು. ಈ ಸಂದರ್ಭದಲ್ಲಿ ಗಣ್ಯರು, ಮಹಾವಿದ್ಯಾಪೀಠದ ಅಧಿಕಾರಿಗಳು ಉಪಸ್ಥಿತರಿದ್ದರು.

**ಮಾಧ್ಯಮದವರು ಬರಹಗಾರರಿಗೆ ಉತ್ತೇಜನ ನೀಡಬೇಕು**

ಮಾಧ್ಯಮದವರು ಬರಹಗಾರರಿಗೆ ಉತ್ತೇಜನ ನೀಡಬೇಕು ಎಂದು ಪರಮಪೂಜ್ಯ ಜಗದ್ಗುರುಗಳು ಹೇಳಿದರು.

ಮಾರ್ಚ್ 24ರಂದು ಮೈಸೂರಿನ ಜಿಲ್ಲಾ ಸಾಹಿತ್ಯ ಭವನದಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ವತಿಯಿಂದ ಏರ್ಪಡಿಸಿದ್ದ ಪ್ರಶಸ್ತಿ ಪ್ರದಾನ ಸಮಾರಂಭದ ದಿವ್ಯ ಸಾನ್ನಿಧ್ಯ ವಹಿಸಿ ಮಾಧ್ಯಮದವರು ಸಾಹಿತಿಗಳ ಮತ್ತು ಲೇಖಕರ ಬರಹಗಳನ್ನು ಪ್ರಕಟಿಸುವುದರ ಮೂಲಕ ಹೆಚ್ಚು ಪ್ರೋತ್ಸಾಹ ನೀಡಬೇಕು. ಸಾಹಿತ್ಯ ಕ್ಷೇತ್ರದಲ್ಲಿ ಮಹಿಳೆಯರಿಗಿಂತ ಪುರುಷರು ಮೇಲು ಎನ್ನುವ ಭಾವನೆ ಹೋಗಬೇಕು. ಎಲೆಮರೆಯಂತಿರುವ ಮಹಿಳಾ

ಲೇಖಕರುಗಳನ್ನು ಗುರುತಿಸುವ ಕಾರ್ಯ ಸಾಹಿತ್ಯ ಪರಿಷತ್ತಿನಿಂದ ಆಗಬೇಕಿದೆ ಎಂದು ತಿಳಿಸಿದರು.

ಪದ್ಮಭೂಷಣ ಡಾ. ಬಿ. ಸರೋಜಾದೇವಿ ಸಾಹಿತ್ಯ ದತ್ತಿ ಪ್ರಶಸ್ತಿ ಪುರಸ್ಕೃತರಾದ ಶ್ರೀಮತಿ ವಸುಮತಿ ಉಡುಪರವರು ನಾನು ಮೊದಲು ನಿಶ್ಚಿತ ಗುರಿ ಇಲ್ಲದೆ ಹವ್ಯಾಸಕ್ಕಾಗಿ ಬರೆಯುತ್ತಿದ್ದೆ. ಬಳಿಕ ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಶ್ರದ್ಧೆಯಿಂದ ತೊಡಗಿಕೊಂಡಿದ್ದರ ಪರಿಣಾಮವಾಗಿ ಬೆಳವಣಿಗೆ ಕಂಡು ಇಂಥ ಪ್ರಶಸ್ತಿಗಳನ್ನು ಪಡೆಯಲು ಸಾಧ್ಯವಾಗುತ್ತಿದೆ ಎಂದರು.

ಶ್ರೀಮತಿ ಗಿರಿಜಾ ಸಾಹಿತ್ಯ ದತ್ತಿ ಪ್ರಶಸ್ತಿ ಪುರಸ್ಕೃತರಾದ ಡಾ. ಎಚ್.ಎಸ್. ಸುಜಾತ ಇದುವರೆಗೂ ಅನೇಕ ಸಾಹಿತ್ಯ ಕೃತಿಗಳನ್ನು ಓದಿ ಸಾಹಿತ್ಯದ 12 ಪ್ರಕಾರಗಳನ್ನು ಅರ್ಥೈಸಿಕೊಂಡಿದ್ದೇನೆ. ಓದುಗರು ಪ್ರತಿಯೊಂದು ಲೇಖನಗಳನ್ನು ಸರಿಯಾಗಿ ಓದಿ ತಿಳಿಯಬೇಕು. ಆಗ ಮಾತ್ರವೇ ವಿಮರ್ಶಿಸಲು ಸಾಧ್ಯ ಎಂದು ಹೇಳಿದರು.

ಕಸಾಪ ರಾಜ್ಯಾಧ್ಯಕ್ಷರಾದ ಡಾ. ಮನು ಬಳಿಗಾರ್‌ರವರು ಪ್ರಾಸ್ತಾವಿಕವಾಗಿ ಮಾತನಾಡಿದರು. ಜಿಲ್ಲಾಧ್ಯಕ್ಷರಾದ ಡಾ. ವೈ.ಡಿ. ರಾಜಣ್ಣ ಸ್ವಾಗತಿಸಿದರು. ಶ್ರೀ ಕೆ. ರಾಜಕುಮಾರ್ ವಂದಿಸಿದರು. ಶ್ರೀ ಸಾಂಬಮೂರ್ತಿ ಪ್ರಾರ್ಥನೆ ಸಲ್ಲಿಸಿದರು. ಶ್ರೀ ರಾಜಶೇಖರ ಕದಂಬ ನಿರೂಪಿಸಿದರು.

**ಅಜ್ಞಾನದ ತೆರೆ ಸರಿಸಿದರೆ ಜ್ಞಾನದ ದೃಷ್ಟಿ ಕಾಣುತ್ತದೆ**

ಅಜ್ಞಾನದ ತೆರೆ ಸರಿಸಿದರೆ ಜ್ಞಾನದ ದೃಷ್ಟಿ ಕಾಣುತ್ತದೆ. ಅಂಧಕಾರ, ಅಜ್ಞಾನದಲ್ಲಿ ಮುಳುಗಿರುವ ಮನುಷ್ಯನ ಭಾವನೆಯ ತೆರೆಯನ್ನು ಸರಿಸಿದರೆ ಆತ ನಿಜವಾದ ಜ್ಞಾನ ಕಾಣಲು ಸಾಧ್ಯ ಎಂದು ಪರಮಪೂಜ್ಯ ಜಗದ್ಗುರುಗಳು ಹೇಳಿದರು.

ಮಾರ್ಚ್ 28ರಂದು ಟಿ.ನರಸೀಪುರ ತಾಲ್ಲೂಕು ಕುರುಬೂರಿನ ಶ್ರೀ ಪಟ್ಟದ ಮಠದ ಪಟ್ಟಾಧಿಕಾರ ಮಹೋತ್ಸವ ಹಾಗೂ ಪುನರ್‌ನಿರ್ಮಿತ ಕಟ್ಟಡದ ಉದ್ಘಾಟನೆಯ ದಿವ್ಯಸಾನ್ನಿಧ್ಯ ವಹಿಸಿ ಮಂಜು ಮುಸುಕಿದಾಗ ಶುಭ್ರವಾದ ಆಕಾಶ ಕಾಣಲು ಹೇಗೆ ಸಾಧ್ಯವಿಲ್ಲವೋ, ಹಾಗೆಯೇ ಮನುಷ್ಯನಲ್ಲಿ ಅಜ್ಞಾನ, ಅಹಂಕಾರದ ಮನೋಭಾವನೆಗಳು ಬಂದಾಗ ಆತನಿಗೆ ಸತ್ಯ ದರ್ಶನವಾಗಲು ಸಾಧ್ಯವಿಲ್ಲ. ಆತ ಭಗವಂತನನ್ನು ಕಾಣುವ ಆತುರತೆಯೊಂದಿಗೆ ತನ್ನ ಅಜ್ಞಾನದಿಂದ ಹೊರಬರುವ ಪ್ರಕ್ರಿಯೆಯಲ್ಲಿ ತೊಡಗಿಸಿ ಕೊಳ್ಳಬೇಕಾಗುತ್ತದೆ ಎಂದು ತಿಳಿಸಿದರು.

ವಿಜಯಪುರ ಜ್ಞಾನಯೋಗಾಶ್ರಮದ ಶ್ರೀ ಸಿದ್ಧೇಶ್ವರ ಮಹಾಸ್ವಾಮಿಗಳು ಭಾರತ ಶ್ರೀಮಂತ ದೇಶ. ಅನೇಕ ಸಂತರು ಮಹಾಪುರುಷರು ಬದುಕುವ ದಾರಿಯನ್ನು ತೋರಿಸಿಕೊಟ್ಟು ಹೋಗಿದ್ದಾರೆ. ಇಲ್ಲಿ ಹುಟ್ಟಿದ ನಾವೇ ಧನ್ಯರು. ದೇವರು ಎಲ್ಲವನ್ನೂ ಕೊಟ್ಟಿದ್ದಾನೆ. ಆದರೆ ಅದನ್ನು ನಾವು ಬಳಸಿಕೊಳ್ಳದೆ ಬಡವಾಗಿದ್ದೇವೆ. ಹುಟ್ಟಿದ ಮೇಲೆ ಬದುಕುಳಿದಷ್ಟು ದಿನ ಒಳ್ಳೆಯದನ್ನು ಮಾಡಬೇಕೆ ವಿನಃ ಕೆಟ್ಟದ್ದನ್ನು ಮಾಡಬಾರದು ಎಂದು ಹೇಳಿದರು.

ಶ್ರೀ ಸಿದ್ಧಗಂಗಾ ಮಠದ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳು ಭಾರತೀಯ ಪರಂಪರೆಯಲ್ಲಿ ಮಠಗಳಿಗೆ ಬಹಳಷ್ಟು ಮಹತ್ವವಿದೆ. ಮಠಗಳು ಸೇವಾಕೇಂದ್ರಗಳಾಗಿ ಕಾರ್ಯನಿರ್ವಹಿಸುತ್ತಾ ಬಂದಿವೆ. ಮಠ ಮತ್ತು ಸ್ವಾಮಿಗಳಿಗೆ ಸೇವೆ ಮತ್ತು ತ್ಯಾಗ ಮುಖ್ಯ ಗುರಿಯಾಗಿದೆ ಎಂದರು.

ನೂತನ ಮಠಾಧ್ಯಕ್ಷರಾದ ಶ್ರೀ ಮಲ್ಲಿನಾಥ ಸ್ವಾಮಿಗಳು ಸಮಾಜ ಸೇವೆ ಮಾಡಲು ಅವಕಾಶ ಕೊಟ್ಟಿರುವ ಎಲ್ಲರ ವಿಶ್ವಾಸಕ್ಕೆ ಚ್ಯುತಿಬಾರದಂತೆ ಮಠದ ನಿರ್ವಹಣೆ ಮಾಡುತ್ತೇನೆ. ಜೀವನದಲ್ಲಿ ಏನನ್ನಾದರು ಸಾಧಿಸಬೇಕಾದರೆ ಅಹಂಕಾರ ಇರಬಾರದು, ನಾನು ಎಂಬ ಭಾವವನ್ನು ತೊಡೆದುದು ಹಾಕಬೇಕು ಎಂದು ಹೇಳಿದರು.

ಕನಕಪುರ, ವಾಟಾಳು ಹಾಗೂ ಇತರ ಅನೇಕ ಮಠಗಳ ಶ್ರೀಗಳು, ಶಾಸಕರಾದ ಶ್ರೀ ಎಂ. ಅಶ್ವಿನ್‌ಕುಮಾರ್, ಶ್ರೀ ಶಿವಮೂರ್ತಿ ಕಾನ್ಯ ಮೊದಲಾದವರು ಉಪಸ್ಥಿತರಿದ್ದರು. ಶ್ರೀ ಪಿ. ಗಿರೀಶ್ ಪ್ರಾರ್ಥಿಸಿದರು. ಶ್ರೀ ಕು.ಶೀ. ಭೃಂಗೀಶ್ ಸ್ವಾಗತಿಸಿದರು. ಶ್ರೀ ಕೆ.ಜಿ. ನಾಗರಾಜ್‌ರವರು ಮಾನ್ಯ ಮುಖ್ಯಮಂತ್ರಿಗಳು ಕಾರ್ಯಕ್ರಮಕ್ಕೆ ಕಳುಹಿಸಿದ್ದ ಸಂದೇಶವನ್ನು ಓದಿದರು. ಶ್ರೀ ಶಿವಶಂಕರ್ ವಂದಿಸಿದರು. ಶ್ರೀ ಕೆ.ಎನ್. ಶಿವಕುಮಾರ್ ಕಾರ್ಯಕ್ರಮ ನಿರೂಪಿಸಿದರು.

**ಯೋಗದಿಂದ ಸಾತ್ವಿಕ ಶಕ್ತಿ ಮತ್ತು ಸದ್ಭಾವನೆ ಜಾಗೃತಗೊಳ್ಳುತ್ತದೆ**

ಯೋಗದಿಂದ ಸಾತ್ವಿಕ ಶಕ್ತಿ ಮತ್ತು ಸದ್ಭಾವನೆ ಜಾಗೃತಗೊಳ್ಳುತ್ತದೆ ಎಂದು ಪರಮಪೂಜ್ಯ ಜಗದ್ಗುರುಗಳವರು ಹೇಳಿದರು.

ಏಪ್ರಿಲ್ 2ರಂದು ನಂಜನಗೂಡು ಶ್ರೀ ಪತಂಜಲಿ ಯೋಗ ಶಿಕ್ಷಣ ಸಮಿತಿ ಆಯೋಜಿಸಿದ್ದ ಪ್ರವಚನ ಸುಧೆ ಕಾರ್ಯಕ್ರಮದ ದಿವ್ಯ ಸಾನ್ನಿಧ್ಯ ವಹಿಸಿ ಯೋಗ, ಧ್ಯಾನ ಮತ್ತು ಆಧ್ಯಾತ್ಮವನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಇವುಗಳಿಂದ ದೈಹಿಕ ಹಾಗೂ ಮಾನಸಿಕವಾಗಿ ಅಂತಃಶಕ್ತಿ ಹೆಚ್ಚುತ್ತದೆ. ಯೋಗಕ್ಕೆ ಅದ್ಭುತವಾದ ಶಕ್ತಿಯಿದೆ. ಆಗ ದೇಹ ಹಾಗೂ ಮನಸ್ಸಿಗೆ ಎಲ್ಲ ರೀತಿಯ ಸಾಂತ್ವನ ಸಿಗುತ್ತದೆ. ಮನುಷ್ಯನ ಆಲೋಚನೆಯನ್ನು ಕ್ರಿಯಾತ್ಮಕಗೊಳಿಸುತ್ತದೆ. ಸುತ್ತಲಿನ ವಾತಾವರಣ ಅದ್ಭುತವಾಗುತ್ತದೆ. ಶರೀರದ ಆರೋಗ್ಯ ಚೆನ್ನಾಗಿದ್ದರೆ ಏನನ್ನಾದರು ಸಾಧಿಸಬಹುದು ಎಂದು ತಿಳಿಸಿದರು.

ವಿಜಯಪುರ ಜ್ಞಾನಯೋಗಾಶ್ರಮದ ನಿರಾಭಾರಿ ಚರಮೂರ್ತಿಗಳಾದ ಶ್ರೀ ಸಿದ್ಧೇಶ್ವರ ಮಹಾಸ್ವಾಮಿಗಳು ಪೂರ್ವಿಕರು ಬಿಟ್ಟು ಹೋಗಿರುವ ಯೋಗಕ್ಕೆ ಬಡತನದ ನಡುವೆ ಸಿರಿತನದ ಜೀವನವನ್ನು ಕಟ್ಟಿಕೊಡುವ ಶಕ್ತಿಯಿದೆ. ಎಲ್ಲರ ಜೀವನ ಯೋಗಮಯ ವಾಗಬೇಕು. ಭಾರತೀಯರು ಮುಂದಿನ ಪೀಳಿಗೆಗೆ ಮತ್ತು ಜಗತ್ತಿಗೆ ಕೊಟ್ಟ ಶ್ರೇಷ್ಠ ಉಡುಗೊರೆ ಯೋಗ. ಎಲ್ಲಾ ಇತಿಮಿತಿ ಮೀರಿ ಬೆರೆಸುವ ಯೋಗದಿಂದ ಜೀವನೋತ್ಸಾಹ ಹೆಚ್ಚುತ್ತದೆ. ಇಡೀ ವಿಶ್ವವೇ ಯೋಗಕ್ಕೆ ತಲೆಬಾಗಿದೆ. ಅಪ್ರತಿಮ ಅಧ್ಯಾತ್ಮ ಮತ್ತು ಯೋಗದಿಂದ ಭಾರತ ಇಡೀ ವಿಶ್ವವನ್ನೇ ಬೆಳಗಿಸುತ್ತಿದೆ ಎಂದು ಹೇಳಿದರು.

ಪ್ರಕೃತಿ ರಕ್ಷಕರಾದ ಶ್ರೀ ಲಕ್ಷ್ಮಣಸ್ವಾಮಿ, ಆರ್ಯುವೇದ ವೈದ್ಯರುಗಳಾದ ಡಾ. ಟಿ.ಎಲ್. ಕೃಷ್ಣದಾಸ್ ಹಾಗೂ ಡಾ. ಸುನಂದ ಎಸ್. ದಿವಟೆಯವರನ್ನು ಸನ್ಮಾನಿಸಲಾಯಿತು. ಸಮಿತಿಯ ಅಧ್ಯಕ್ಷರಾದ ಶ್ರಿ ಆರ್.ವಿ ರೇವಣ್ಣ, ಕಾರ್ಯದರ್ಶಿಗಳಾದ ಶ್ರೀ ಎನ್.ಆರ್. ಗಣೇಶಮೂರ್ತಿ ಮೊದಲಾದವರು ಉಪಸ್ಥಿತರಿದ್ದರು. ಶ್ರೀಮತಿ ಗಾಯತ್ರಿ ಬಾಲಾಜಿ ಮತ್ತು ಶ್ರೀಮತಿ ಭಾಗ್ಯರವರು ಪ್ರಾರ್ಥನೆ ಸಲ್ಲಿಸಿದರು. ಶ್ರೀ ಪ್ರಕಾಶ್ ಸ್ವಾಗತಿಸಿದರು. ಶ್ರೀ ಚಂದ್ರಶೇಖರ್ ಕಾರ್ಯಕ್ರಮ ನಿರೂಪಿಸಿದರು.

**ಕನಕದಾಸರು ನಿಸ್ವಾರ್ಥ ಭಕ್ತಿಯಿಂದ ಭಗವಂತನನ್ನು ಒಲಿಸಿಕೊಂಡವರು**

ಕನಕದಾಸರು ನಿಸ್ವಾರ್ಥ ಭಕ್ತಿಯಿಂದ ಭಗವಂತನನ್ನು ಒಲಿಸಿಕೊಂಡವರು ಎಂದು ಪರಮಪೂಜ್ಯ ಜಗದ್ಗುರುಗಳು ತಿಳಿಸಿದರು.

ಏಪ್ರಿಲ್ 3ರಂದು ದಾವಣಗೆರೆ ಜಿಲ್ಲೆ ಹರಿಹರ ತಾಲ್ಲೂಕಿನ ಬೆಳ್ಳೂಡಿ ಶ್ರೀ ಕಾಗಿನೆಲೆ ಮಹಾಸಂಸ್ಥಾನ ಕನಕಗುರುಪೀಠದ ಶಾಖಾಮಠದಲ್ಲಿ ವಿದ್ಯಾರ್ಥಿನಿಲಯ, ಸಮುದಾಯ ಭವನ ಮತ್ತು ಮುಖ್ಯಮಹಾದ್ವಾರ ಉದ್ಘಾಟನೆ, ನೂತನ ಹೊರಬೀರದೇವರ ಪ್ರಾಣಪ್ರತಿಷ್ಠಾಪನೆ, ಮಹಾಕುಂಭಾಭಿಷೇಕ ಹಾಗೂ ಶಾಖಾಮಠದ 5ನೇ ವಾರ್ಷಿಕೋತ್ಸವ ಸಮಾರಂಭದ ಅಂಗವಾಗಿ ಆಯೋಜಿಸಿದ್ದ ಶ್ರೀ ಬೀರದೇವರುಗಳ ಉತ್ಸವಕ್ಕೆ ಚಾಲನೆ ನೀಡಿ ಇತ್ತೀಚಿನ ದಿನಗಳಲ್ಲಿ ದೇವರೊಂದಿಗೆ ವ್ಯವಹಾರಿಕ ರೀತಿಯಲ್ಲಿ ವರ್ತಿಸಲಾಗುತ್ತಿದೆ. ಇದು ಶೋಭೆ ತರುವಂಥದ್ದಲ್ಲ. ಗುರುವಿನಲ್ಲಿ ಭಗವಂತನನ್ನು ಕಂಡು ಹೃದಯ ಗೆಲ್ಲುವ ಮೂಲಕ ಜೀವನದಲ್ಲಿ ನೆಮ್ಮದಿ ಮತ್ತು ಶಾಂತಿಯನ್ನು ಪಡೆಯಬಹುದು. ತಾರಕಾನಂದಪುರಿ ಶ್ರೀಗಳು ಸಮಾಜದ ಏಳ್ಗೆಗಾಗಿ ಶ್ರಮಿಸಿದರು. ಅವರ ಹಾದಿಯಲ್ಲೇ ನಿರಂಜನಾನಂದಪುರಿ ಶ್ರೀಗಳು ಸಾಗುತ್ತಿದ್ದಾರೆ. ಶೈಕ್ಷಣಿಕ ಮತ್ತು ಆಧ್ಯಾತ್ಮಿಕವಾಗಿ ಸಮಾಜವನ್ನು ಸಂಘಟಿಸುತ್ತಿದ್ದಾರೆ ಎಂದು ಹೇಳಿದರು.

ಕಾಗಿನೆಲೆಯ ಜಗದ್ಗುರು ಶ್ರೀ ನಿರಂಜನಾನಂದ ಪುರಿ ಸ್ವಾಮಿಗಳು ನಿತ್ಯದ ಜಂಜಾಟವನ್ನು ಬಿಟ್ಟು ಇಂತಹ ಆಧ್ಯಾತ್ಮಿಕ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುವುದರ ಮೂಲಕ ಭಗವಂತನ ಕೃಪೆಗೆ ಪಾತ್ರರಾಗಬೇಕು ಎಂದು ಹೇಳಿದರು.

ಕೆ.ಆರ್.ನಗರದ ಶ್ರೀ ಶಿವಾನಂದಪುರಿ ಸ್ವಾಮಿಗಳು, ಹೊಸದುರ್ಗದ ಶ್ರೀ ಈಶ್ವರಾನಂದಪುರಿ ಸ್ವಾಮಿಗಳು, ಶಾಸಕರುಗಳಾದ ಶ್ರೀ ಎಸ್. ರಾಮಪ್ಪ, ಶ್ರೀ ಪಿ.ಟಿ. ಪರಮೇಶ್ವರ ನಾಯ್ಕ್, ಗ್ರಾಮ ಪಂಚಾಯತ್ ಅಧ್ಯಕ್ಷರಾದ ಶ್ರೀಮತಿ ಎಸ್. ಗಂಗಮ್ಮ ಹಾಗೂ ಸ್ಥಳಿಯ ಜನಪ್ರತಿನಿಧಿಗಳು ಉಪಸ್ಥಿತರಿದ್ದರು.

**ನಿಜಗುರು ವಿಶೇಷ ಪುರವಣಿ ಲೋಕಾರ್ಪಣೆ**

ಡಾ. ವಿಜಯ ಸಂಕೇಶ್ವರರವರು ಸಾಮಾನ್ಯ ಕುಟುಂಬದಲ್ಲಿ ಜನಿಸಿ ಉತ್ತಮ ಸಾಧನೆ ಮಾಡಿದ್ದಾರೆ ಎಂದು ಪರಪಮೂಜ್ಯ ಜಗದ್ಗುರುಗಳು ತಿಳಿಸಿದರು.

ಏಪ್ರಿಲ್ 5 ರಂದು ಮಳವಳ್ಳಿಯಲ್ಲಿ ವಿಜಯವಾಣಿ, ದಿಗ್ವಿಜಯ ನ್ಯೂಸ್ ಮತ್ತು ಸಿದ್ಧಗಂಗಾ ಬಳಗದ ಸಹಯೋಗದಲ್ಲಿ ಡಾ. ಶ್ರೀ ಶಿವಕುಮಾರ ಮಹಾಸ್ವಾಮಿಗಳವರ 114ನೇ ಜಯಂತಿ ಪ್ರಯುಕ್ತ ವಿಜಯವಾಣಿ ದಿನಪತ್ರಿಕೆ ಹೊರ ತಂದಿರುವ ನಿಜಗುರು ವಿಶೇಷ ಪುರವಣಿಯ ಲೋಕಾರ್ಪಣೆಯ ದಿವ್ಯ ಸಾನ್ನಿಧ್ಯ ವಹಿಸಿ ಸಾರಿಗೆ ಕ್ಷೇತ್ರದ ನಂತರ ಮಾಧ್ಯಮ ಕ್ಷೇತ್ರದಲ್ಲಿಯೂ ಅವರು ಯಶಸ್ಸು ಗಳಿಸಿದ್ದಾರೆ. ತಮ್ಮ ಶ್ರದ್ಧೆ ಮತ್ತು ನಿಷ್ಠೆಯೊಂದಿಗೆ ವಿಜಯವಾಣಿ ಮತ್ತು ದಿಗ್ವಿಜಯ ಸುದ್ದಿವಾಹಿನಿಯನ್ನು ಜನರ ಮನೆ–ಮನಕ್ಕೆ ತಲುಪಿಸುವಲ್ಲಿ ಯಶಸ್ವಿಯಾಗಿದ್ದಾರೆ. ತಂದೆಯ ಯಶಸ್ಸನ್ನು ಅವರ ಪುತ್ರರಾದ ಶ್ರೀ ಆನಂದ ಸಂಕೇಶ್ವರರವರು ವಿಸ್ತರಿಸುತ್ತಿದ್ದಾರೆ ಎಂದು ಹೇಳಿದರು.

ಶ್ರೀ ಸಿದ್ಧಗಂಗಾ ಮಠದ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳು ಸಂಕೇಶ್ವರರವರು ಡಾ. ಶ್ರೀ ಶಿವಕುಮಾರ ಮಹಾಸ್ವಾಮಿಗಳವರಿಗೆ 112 ಪುಟಗಳ ಸಂಚಿಕೆಯ ಮೂಲಕ ಅಕ್ಷರ ಗೌರವ ಸಲ್ಲಿಸಿದ್ದಾರೆ. ಕಡಿಮೆ ಬೆಲೆಗೆ ದಿನಪತ್ರಿಕೆ ದೊರೆಯುವಂತೆ ಮಾಡಿದ ಕೀರ್ತಿ ಅವರಿಗೆ ಸಲ್ಲುತ್ತದೆ. ಇದರೊಂದಿಗೆ ಪರೋಕ್ಷವಾಗಿ ಜನರಿಗೆ ಶಿಕ್ಷಣವನ್ನು ನೀಡುತ್ತಿದ್ದಾರೆ ಎಂದು ಹೇಳಿದರು.

ಕನಕಪುರ ಶ್ರೀ ದೇಗುಲ ಮಠದ ಡಾ. ಶ್ರೀ ಮುಮ್ಮಡಿ ನಿರ್ವಾಣ ಸ್ವಾಮಿಗಳು, ಶಾಸಕರಾದ ಡಾ. ಕೆ. ಅನ್ನದಾನಿ, ವಿಧಾನಪರಿಷತ್ ಸದಸ್ಯರಾದ ಶ್ರೀ ಮರಿತಿಬ್ಬೇಗೌಡ, ಪುರಸಭಾಧ್ಯಕ್ಷರಾದ ಶ್ರೀಮತಿ ರಾಧ ನಾಗರಾಜು, ಉಪಾಧ್ಯಕ್ಷರಾದ ಶ್ರೀ ನಂದಕುಮಾರ್, ವಿಆರ್‌ಎಲ್ ಮೀಡಿಯಾ ಉಪಾಧ್ಯಕ್ಷರಾದ ಶ್ರೀ ಕೆ.ಆರ್. ಅರುಣ್ ಉಪಸ್ಥಿತರಿದ್ದರು. ಸ್ಥಾನಿಕ ಸಂಪಾದಕರಾದ ಶ್ರೀ ಸಿ.ಕೆ. ಮಹೇಂದ್ರ ಸ್ವಾಗತಿಸಿದರು. ಶ್ರೀ ಪರಶಿವಮೂರ್ತಿ ಪ್ರಾರ್ಥನೆ ಸಲ್ಲಿಸಿದರು. ಶ್ರೀ ರಂಗಸ್ವಾಮಿ ವಂದಿಸಿದರು. ಡಾ. ನಾಗೇಂದ್ರ ಕಾರ್ಯಕ್ರಮ ನಿರೂಪಿಸಿದರು.

### ವೃತ್ತಿಯೊಂದಿಗೆ ಪ್ರವೃತ್ತಿಯನ್ನೂ ಬೆಳೆಸಿಕೊಳ್ಳಬೇಕು

ವೃತ್ತಿಯೊಂದಿಗೆ ಪ್ರವೃತ್ತಿಯನ್ನೂ ಬೆಳೆಸಿಕೊಳ್ಳಬೇಕು ಎಂದು ಪರಮಪೂಜ್ಯ ಜಗದ್ಗುರುಗಳು ಹೇಳಿದರು.

ಏಪ್ರಿಲ್ 6ರಂದು ಮೈಸೂರಿನಲ್ಲಿ ಜಿಲ್ಲಾ ಶರಣ ಸಾಹಿತ್ಯ ಪರಿಷತ್ತು ಮತ್ತು ಮುಕ್ತ ಒಡ್ಡೋಲಗ ವೇದಿಕೆಯ ಸಹಯೋಗದಲ್ಲಿ ಏರ್ಪಡಿಸಿದ್ದ ಶ್ರೀ ಶಿವಬಸಪ್ಪ ಹೊರೆಯಾಲರ 'ಕರ್ಣಾಂತರಂಗ' ಖಂಡಕಾವ್ಯ ಹಾಗೂ 'ವಚನ ವೈಢೂರ್ಯ' ಕೃತಿ ಬಿಡುಗಡೆ ಕಾರ್ಯಕ್ರಮದ ದಿವ್ಯ ಸಾನ್ನಿಧ್ಯ ವಹಿಸಿ ಶಿವಬಸಪ್ಪನವರು ಪೊಲೀಸ್ ಇಲಾಖೆಯಲ್ಲಿ ಕೆಲಸ ಮಾಡಿದವರು. ವೃತಿ ಮತ್ತು ಪ್ರವೃತ್ತಿ ಎರಡನ್ನೂ ಸಮನಾಗಿ ಸ್ವೀಕರಿಸಿದವರು. ಸಾಹಿತ್ಯವನ್ನು ಪ್ರೀತಿಸುತ್ತಾ, ಅದರಲ್ಲಿ ಕೃಷಿ ಮಾಡುತ್ತಿದ್ದಾರೆ ಎಂದರು.

ಸಾಹಿತಿ ಡಾ. ಸಿ.ಪಿ. ಕೃಷ್ಣಕುಮಾರ್‌ರವರು ಕರ್ಣನನ್ನು ನಾಯಕನನ್ನಾಗಿ ಮಾಡಿಕೊಂಡು ಯಾವ ಕಾವ್ಯವೂ ಬಂದಿಲ್ಲ. ಆ ಕೆಲಸವನ್ನು ಶಿವಬಸಪ್ಪನವರು

ಮಾಡಿದ್ದಾರೆ. ಕರ್ಣಾಂತರಂಗ ದೇಶಿ ಖಂಡಕಾವ್ಯ. ಈ ಕಾವ್ಯವನ್ನು ಪರಿಷ್ಕರಣೆಗೆ ಒಳಪಡಿಸಿ ಮಹಾಕಾವ್ಯವಾಗಿ ಬೆಳೆಸಬೇಕು ಎಂದು ಹೇಳಿದರು.

ಶಾಸಕರಾದ ಶ್ರೀ ಸಿ.ಎಸ್. ನಿರಂಜನಕುಮಾರ್ ಅಧ್ಯಕ್ಷತೆ ವಹಿಸಿದ್ದರು. ಮೈಸೂರು ವಿವಿಯ ಪ್ರಾಚ್ಯವಿದ್ಯಾ ಸಂಶೋಧನಾಲಯದ ನಿರ್ದೇಶಕರಾದ ಡಾ. ಎಸ್. ಶಿವರಾಜಪ್ಪ, ವಿಶ್ರಾಂತ ಪ್ರಾಧ್ಯಾಪಕರಾದ ಪ್ರೊ. ಕೆ. ಅನಂತರಾಮು, ಮುಕ್ತ ಒಡ್ಡೋಲಗದ ಅಧ್ಯಕ್ಷರಾದ ಶ್ರೀ ಎ.ಎಸ್. ನಾಗರಾಜು ಮಾತನಾಡಿದರು. ಶ್ರೀಮತಿ ಗೀತಾ ಉಪಾಧ್ಯಾಯ ಪ್ರಾರ್ಥಿಸಿದರು. ಪ್ರೊ. ಮೊರಬದ ಮಲ್ಲಿಕಾರ್ಜುನ ಕೃತಿಗಳನ್ನು ಪರಿಚಯಿಸಿದರು. ಶ್ರೀ ಎಂ. ಚಂದ್ರಶೇಖರ್ ಸ್ವಾಗತಿಸಿದರು. ಶ್ರೀ ಹೊರೆಯಾಲ ಶಿವಬಸಪ್ಪ ವಂದಿಸಿದರು. ಶ್ರೀ ಪಾಳೇಗಾರ ಕಾರ್ಯಕ್ರಮ ನಿರೂಪಿಸಿದರು.

**ಬೌದ್ಧಿಕ ಕ್ರಾಂತಿ ಇಂದಿನ ಅಗತ್ಯ**

ಆರ್ಥಿಕ ಅಭಿವೃದ್ಧಿಗೆ ಕೈಗಾರಿಕಾ ಕ್ರಾಂತಿ, ಕೃಷಿ ಅಭಿವೃದ್ಧಿಗೆ ಹಸಿರು ಕ್ರಾಂತಿ ನಡೆದಂತೆ ಸದ್ಯ ಬೌದ್ಧಿಕ ಬೆಳವಣಿಗೆಗಾಗಿ ಬೌದ್ಧಿಕ ಕ್ರಾಂತಿಯ ಅಗತ್ಯವಿದೆ ಎಂದು ರಾಷ್ಟ್ರೀಯ ಮಾನ್ಯತಾ ಮಂಡಳಿಯ ಅಧ್ಯಕ್ಷರಾದ ಡಾ. ಕೆ.ಕೆ. ಅಗರ್‌ವಾಲ್ ಹೇಳಿದರು.

ಏಪ್ರಿಲ್ 9ರಂದು ಮೈಸೂರು ಜೆಎಸ್‌ಎಸ್ ವಿಜ್ಞಾನ ತಂತ್ರಜ್ಞಾನ ವಿಶ್ವವಿದ್ಯಾನಿಲಯದಲ್ಲಿ ಪರಮಪೂಜ್ಯ ಜಗದ್ಗುರುಗಳವರ ದಿವ್ಯಸಾನ್ನಿಧ್ಯದಲ್ಲಿ ಏರ್ಪಡಿಸಲಾಗಿದ್ದ ತೃತೀಯ ಘಟಿಕೋತ್ಸವದಲ್ಲಿ ಭಾಷಣ ಮಾಡುತ್ತಾ ಶಿಕ್ಷಣ ವ್ಯವಸ್ಥೆಯಲ್ಲೇ ಲೋಪದೋಷಗಳಿದ್ದು, ಮಕ್ಕಳು ಪಠ್ಯಪುಸ್ತಕಕ್ಕೆ ಮಾತ್ರ ಸೀಮಿತವಾಗುತ್ತಿದ್ದಾರೆ. ಒಂದು ಪ್ರಶ್ನೆಗೆ ಇಂತಹ ಪುಸ್ತಕವನ್ನು ಓದಬೇಕು. ಇಂತಹ ಪುಟದಲ್ಲಿ ಇಷ್ಟೇ ಉತ್ತರ ಬರೆಯಬೇಕು ಎಂದಿರುತ್ತದೆ. ಅದೇ ಪ್ರಶ್ನೆಯನ್ನು ನಾವು ತರಗತಿಯಿಂದ ಹೊರಗೆ ಬಂದಾಗ ಕೇಳಿದರೆ ಹತ್ತಾರು ಪರಿಹಾರಗಳು ಸಿಗುತ್ತವೆ. ಇತ್ತೀಚಿನ ದಿನಗಳಲ್ಲಿ ಗುಣಮಟ್ಟದ ಸಂಶೋಧನೆಗಳು ಕಂಡುಬರುತ್ತಿಲ್ಲ. ಏಕೆಂದರೆ ಬಹುತೇಕ ಮಂದಿ ಕಂಪ್ಯೂಟರ್, ಮೊಬೈಲ್ ತಂತ್ರಜ್ಞಾನದ ಮಾಹಿತಿಯನ್ನು ಆಧರಿಸಿದ್ದಾರೆ. ಆದರೆ ತರಗತಿ, ಕಂಪ್ಯೂಟರ್‌ಗಳಿಂದ ಕಲಿಯಬಹುದಾದ ಶೇ 80ರಷ್ಟು ಜ್ಞಾನವನ್ನು ನಾವು ಸಮಾಜದಲ್ಲಿ ಕಲಿಯಬಹುದು ಎಂದು ತಿಳಿಸಿದರು.

2019–20ನೇ ಸಾಲಿನಲ್ಲಿ 873 ಬಿಇ, 214 ಎಂಟೆಕ್, 67 ಬಿಎಸ್ಸಿ, 26 ಎಂಎಸ್ಸಿ ಕೆಮಿಸ್ಟ್ರಿ ಹಾಗೂ 183 ಎಂಬಿಎ ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಯಿತು. ಕಾರ್ಯನಿರ್ವಾಹಕ ಕಾರ್ಯದರ್ಶಿಗಳಾದ ಡಾ. ಸಿ.ಜಿ. ಬೆಟಸೂರಮಠ, ಜೆಎಸ್‌ಎಸ್ ಎಹೆಚ್‌ಇಆರ್‌ನ ಸಮಕುಲಾಧಿಪತಿಗಳಾದ ಡಾ. ಬಿ. ಸುರೇಶ್ , ಡೀನ್‌ಗಳಾದ ಪ್ರೊ. ಪಿ. ನಾಗೇಶ್, ಪ್ರೊ. ಎಸ್.ಪಿ. ಕಿವಡೆ ಮತ್ತು ಪರೀಕ್ಷಾ ನಿಯಂತ್ರಣಾಧಿಕಾರಿಗಳಾದ ಡಾ. ಎ.ಎನ್. ಸಂತೋಷ್‌ಕುಮಾರ್ ಉಪಸ್ಥಿತರಿದ್ದರು. ಕು. ಶ್ರೀದೇವಿ ಕುಳೇನೂರ್ ಪ್ರಾರ್ಥನೆ ಸಲ್ಲಿಸಿದರು. ಕುಲಪತಿಗಳಾದ ಪ್ರೊ. ಸಿದ್ಧರಾಮಯ್ಯ ಸ್ವಾಗತಿಸಿದರು. ಕುಲಸಚಿವರಾದ ಪ್ರೊ. ಎಸ್.ಎ. ಧನರಾಜ್ ವಂದಿಸಿದರು.

**ಯುವಜನತೆ ಸಾಹಿತ್ಯದಲ್ಲಿ ಆಸಕ್ತಿ ಬೆಳೆಸಿಕೊಳ್ಳಲು ಕರೆ**

ಯುವಜನತೆ ಸಾಹಿತ್ಯದಲ್ಲಿ ಆಸಕ್ತಿಯನ್ನು ಬೆಳೆಸಿಕೊಳ್ಳುವುದು ಇಂದಿನ ಅಗತ್ಯ ಎಂದು ಕನ್ನಡ ಮತ್ತು ಸಂಸ್ಕೃತಿ ಹಾಗೂ ಅರಣ್ಯ ಸಚಿವರಾದ ಶ್ರೀ ಅರವಿಂದ ಲಿಂಬಾವಳಿಯವರು ಹೇಳಿದರು. ಏಪ್ರಿಲ್ 10ರಂದು ಮೈಸೂರಿನ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ ಹಾಗೂ ಜೆಎಸ್‌ಎಸ್ ಮಹಾವಿದ್ಯಾಪೀಠದ ವತಿಯಿಂದ ಏರ್ಪಡಿಸಿದ್ದ ಕೃತಿಗಳ ಲೋಕಾರ್ಪಣೆ, ಪ್ರಶಸ್ತಿಗಳ ಪ್ರದಾನ ಹಾಗೂ ಅಭಿನಂದನೆ ಕಾರ್ಯಕ್ರಮ ನೆರವೇರಿಸಿ ಆಧುನಿಕಯುಗ ದಲ್ಲಿಯೂ ಪುಸ್ತಕಗಳನ್ನು ಓದುವ ಹವ್ಯಾಸ ಹೆಚ್ಚುತ್ತಿದೆ. ಈ–ಗ್ರಂಥಾಲಯದಂತಹ ಸೌಲಭ್ಯಗಳು ಕೈಯಲ್ಲಿಯೇ ದೊರೆಯುತ್ತಿದ್ದರೂ ಪುಸ್ತಕಗಳ ಮುದ್ರಣದ ಕಾರ್ಯವೂ ನಿರಂತರವಾಗಿ ಮುಂದುವರೆದಿದೆ. ಸುತ್ತೂರು ಶ್ರೀಮಠದ ಗ್ರಂಥಮಾಲೆಯಿಂದ ಬೃಹತ್ ಪ್ರಮಾಣದಲ್ಲಿ ಕೃತಿಗಳನ್ನು ಹೊರತರಲಾಗಿದೆ. ಇದರ ಪ್ರಯೋಜನವನ್ನು ಓದುಗರು ಪಡೆದುಕೊಳ್ಳಬೇಕು. ಶ್ರೀಮಠದ ಸೇವಾಕಾರ್ಯವನ್ನು ಹೊರರಾಜ್ಯ ಮತ್ತು ವಿದೇಶಗಳಿಗೂ ವಿಸ್ತರಿಸಿರುವುದು ಹೆಮ್ಮೆಯ ವಿಷಯ. ಅತ್ಯಂತ ಶಿಸ್ತಿನಿಂದ ಜೆಎಸ್‌ಎಸ್ ಸಂಸ್ಥೆಯನ್ನು ರೂಪಿಸಲಾಗಿದೆ. ಅದರಡಿಯಲ್ಲಿ ನಡೆಯುವ ಎಲ್ಲ ಕಾರ್ಯಗಳು ತುಂಬಾ ಅಚ್ಚುಕಟ್ಟುತನ ದಿಂದ ಕೂಡಿರುತ್ತವೆ. ಇದೊಂದು ಮಾದರಿಯಾದ ಸಂಸ್ಥೆ. ಸರ್ಕಾರಗಳು ಮಾಡಬೇಕಾದ ಅನೇಕ ಕೆಲಸಗಳನ್ನು ಇಂತಹ ಮಠಗಳು ಮಾಡುತ್ತಿವೆ ಎಂದು ಹೇಳಿದರು.

ಪರಮಪೂಜ್ಯ ಜಗದ್ಗುರುಗಳು ಆಶೀರ್ವದಿಸುತ್ತ ರಾಜೇಂದ್ರ ಶ್ರೀಗಳವರು ಗ್ರಾಮೀಣ ಪ್ರದೇಶದ ಮಕ್ಕಳ ಕಲ್ಯಾಣಕ್ಕಾಗಿ ವಿದ್ಯಾರ್ಥಿನಿಲಯ ಹಾಗೂ ಶಾಲೆಗಳನ್ನು ಪ್ರಾರಂಭಿಸುವುದರೊಂದಿಗೆ ಕಲೆ, ಸಂಸ್ಕೃತಿ ಮತ್ತು ಸಾಹಿತ್ಯವನ್ನು ಉಳಿಸಿ ಬೆಳೆಸುವ ನಿಟ್ಟಿನಲ್ಲಿ ಜೆಎಸ್‌ಎಸ್ ಕಲಾಮಂಟಪ, ಗ್ರಂಥಮಾಲೆ ಹಾಗೂ ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿಗಳನ್ನು ಸ್ಥಾಪಿಸಿದರು. ಅತ್ಯಂತ ಮೌಲಿಕವಾದ ಗ್ರಂಥಗಳು ಇಂದು ಬಿಡುಗಡೆಗೊಂಡಿವೆ. ಪ್ರಶಸ್ತಿ ಪುರಸ್ಕೃತರೆಲ್ಲರೂ ಕಲೆ ಮತ್ತು ಸಾಹಿತ್ಯದ ಕ್ಷೇತ್ರಗಳಲ್ಲಿ ಪರಿಣತಿಯನ್ನು ಹೊಂದಿದವರು. ಕ್ರಿಯಾತ್ಮಕವಾದ ಕೃತಿ ರಚನೆ ಮತ್ತು ಚಿತ್ರಗಳನ್ನು ರಚಿಸುವಲ್ಲಿ ಜನಮನ್ನಣೆಗಳಿಸಿದವರು ಎಂದರು.

ವಿಜಯಪುರ ಜ್ಞಾನಯೋಗಾಶ್ರಮದ ಶ್ರೀ ಸಿದ್ಧೇಶ್ವರ ಮಹಾಸ್ವಾಮಿಗಳವರು ಸುಂದರವಾದ ಕೃತಿಗಳು ಶ್ರೇಷ್ಠ ಜ್ಞಾನಿಗಳ ಮಾತುಗಳಂತೆ. ಬದುಕಿನಲ್ಲಿ ಮಾತಿಗೆ ಬಹಳ ಮಹತ್ವವಿದೆ. ಮಾತೆಂಬುದು ಮುತ್ತಿನ ಹಾರದಂತಿರಬೇಕು ಎಂದು ಬಸವಣ್ಣನವರು ಹೇಳಿದ್ದಾರೆ. ಶರಣರು, ಸಂತರು, ದಾಸರು, ಶ್ರೇಷ್ಠ ಸಾಹಿತಿಗಳು ಅಂತಹ ಮಾತುಗಳನ್ನು ಕೃತಿಗಳ ರೂಪದಲ್ಲಿ ಕೊಟ್ಟು ಹೋಗಿದ್ದಾರೆ. ಬದುಕಿನ ಬೆಲೆಯನ್ನು ಹೆಚ್ಚಿಸುವ ಮಾತುಗಳನ್ನು ಕೇಳಬೇಕು, ಮೆಲಕು ಹಾಕಬೇಕು. ಬಲ್ಲವರ ಮಾತುಗಳಿಂದ ಬದುಕನ್ನು ಸರಳ ಮತ್ತು ಸುಂದರಗೊಳಿಸಿಕೊಳ್ಳಬೇಕು ಎಂದು ಹೇಳಿದರು.

ಡಾ. ಗೊ.ರು. ಚನ್ನಬಸಪ್ಪನವರು ಸಾವಿರಾರು ವರ್ಷಗಳ ಇತಿಹಾಸವನ್ನು ಹೊಂದಿರುವ ಸುತ್ತೂರು ಶ್ರೀಮಠದ ಜೆಎಸ್‌ಎಸ್ ಗ್ರಂಥಮಾಲೆ ನಾಡಿನ ಪ್ರತಿಷ್ಠಿತ ಪ್ರಕಾಶನ ಸಂಸ್ಥೆಯಾಗಿದೆ. ಇದಕ್ಕೆ ಕಾರಣ ಇಲ್ಲಿನ ಸಾಂಸ್ಕೃತಿಕ ಶಿಸ್ತು. ರಾಜೇಂದ್ರ ಶ್ರೀಗಳು ಸಾಹಿತ್ಯದ ಪೋಷಕರಾಗಿದ್ದವರು, ಇಂದಿನ ಗ್ರಂಥಮಾಲೆಯ ಸಾಧನೆಯ ಸಂದರ್ಭದಲ್ಲಿ ಅವರನ್ನು ನಾವು ಸ್ಮರಿಸಬೇಕು. ಅರಿವಿನ ಹಸಿವನ್ನು ತಣಿಸುವ ಈ ಗ್ರಂಥಮಾಲೆಯ ಕೃತಿಗಳು ಹಾಗೂ ಪ್ರಸಾದ ಪತ್ರಿಕೆಗಾಗಿ ನಾಡಿನ ಅನೇಕ ಲೇಖಕರುಗಳು ಮತ್ತು ಓದುಗರು ಕಾಯುತ್ತಿರುತ್ತಾರೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಬಸವ ದರ್ಶನ, ಹಾರ್ಟ್ ಟು ಹಾರ್ಟ್, ಭಕ್ತಿಭಾಂಡಾರಿ ಬಸವಣ್ಣನವರು, ಶ್ರೀ ಸ್ವತಂತ್ರ ಸಿದ್ಧಲಿಂಗೇಶ್ವರರು, ಸುತ್ತೂರು ಶ್ರೀಮಠದ ಗ್ರಂಥಾಲಯ ಕೃತಿಗಳನ್ನು ಲೋಕಾರ್ಪಣೆ ಮಾಡಲಾಯಿತು. ಶ್ರೀ ಮಹಾಂತಪ್ಪ ನಂದೂರರವರಿಗೆ ಶ್ರೀ ಶಿವರಾತ್ರೀಶ್ವರ ಪ್ರಶಸ್ತಿ, ಶ್ರೀಮತಿ ರಾಧ ಮಲ್ಲಪ್ಪನವರಿಗೆ ವಚನ ಚಿತ್ರರಚನಾ ಪಿತಾಮಹ ಶ್ರೀ ಎಂ. ವೀರಪ್ಪ ದತ್ತಿ ಪ್ರಶಸ್ತಿ, ಶ್ರೀ ಈಶ್ವರ ಜೋಶಿಯವರಿಗೆ ಕಲಾಗುರು ಶ್ರೀ ಡಿ.ವಿ. ಹಾಲಭಾವಿ ಪ್ರಶಸ್ತಿ ಪ್ರದಾನ ಮಾಡಲಾಯಿತು ಮತ್ತು ಕೇಂದ್ರ ಸಾಹಿತ್ಯ ಅಕಾಡೆಮಿಯ ಯುವ ಪ್ರಶಸ್ತಿ ಪುರಸ್ಕೃತರಾದ ಶ್ರೀ ಕೆ.ಎಸ್. ಮಹಾದೇವಸ್ವಾಮಿಯವರನ್ನು ಅಭಿನಂದಿಸಲಾಯಿತು.

ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾದ ಡಾ. ಬಿ.ವಿ. ವಸಂತಕುಮಾರ್‌ರವರು ಕೃತಿಗಳನ್ನು ಪರಿಚಯಿಸಿದರು. ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರಾದ ಡಾ. ಎಂ.ಎನ್. ನಂದೀಶ್ ಹಂಚೆ ಪ್ರಶಸ್ತಿ ಪುರಸ್ಕೃತರನ್ನು ಪರಿಚಯಸಿದರು. ಜೆಎಸ್‌ಎಸ್ ಲಲಿತಕಲಾ ತಂಡದ ಶ್ರೀಮತಿ ಕೆ.ಜಿ. ವಿನುತಾ ಮತ್ತು ಶ್ರೀಮತಿ ರೂಪಾರವರು ಪ್ರಾರ್ಥನೆ ಸಲ್ಲಿಸಿದರು. ಪ್ರೊ. ಮೊರಬದ ಮಲ್ಲಿಕಾರ್ಜುನ ಸ್ವಾಗತಿಸಿದರು. ಶ್ರೀ ಬಿ.ಎ. ರಾಜಶೇಖರ, ಶ್ರೀ ಎನ್. ಆರ್. ಶಿವಕುಮಾರ, ಶ್ರೀ ಎಸ್. ನಂದೀಶ್, ಶ್ರೀ ಕುಮಾರಸ್ವಾಮಿ ವಿರಕ್ತಮಠ ಪ್ರಶಸ್ತಿ ಪತ್ರಗಳ ವಾಚನ ಮಾಡಿದರು. ಶ್ರೀ ವೀರಭದ್ರಸ್ವಾಮಿ ವಂದಿಸಿದರು. ಶ್ರೀ ಬಿ. ನಿರಂಜನಮೂರ್ತಿ ಕಾರ್ಯಕ್ರಮ ನಿರೂಪಿಸಿದರು.

### ಕೆ.ವಿ. ಮೂರ್ತಿಯವರು ಮೈಸೂರಿನ ಸಾಂಸ್ಕೃತಿಕ ರಾಯಭಾರಿಯಾಗಿದ್ದರು

ಕೆ.ವಿ. ಮೂರ್ತಿಯವರು ಮೈಸೂರಿನ ಸಾಂಸ್ಕೃತಿಕ ರಾಯಭಾರಿಯಾಗಿದ್ದರು ಎಂದು ಪರಮಪೂಜ್ಯ ಜಗದ್ಗುರುಗಳು ತಿಳಿಸಿದರು.

ಏಪ್ರಿಲ್ 12 ರಂದು ಮೈಸೂರಿನ ನಾದಬ್ರಹ್ಮ ಸಂಗೀತ ಸಭಾದಲ್ಲಿ ನಡೆದ ಶ್ರೀ ಕೆ.ವಿ. ಮೂರ್ತಿಯವರ ನುಡಿನಮನ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಮೂರ್ತಿಯವರು ವೃತ್ತಿಯಲ್ಲಿ ಇಂಜಿನಿಯರರಾಗಿದ್ದರೂ ಕಲೆ, ಸಂಗೀತ, ನೃತ್ಯದಲ್ಲಿ ಬಹಳಷ್ಟು ಆಸಕ್ತಿಯನ್ನು ಹೊಂದಿದ್ದರು. ಅವರು ಎಲ್ಲಾ ಕಲೆಗಳ ಪೋಷಕರಾಗಿದ್ದರು. ಅವರ ಜೀವನದ ಉತ್ತರ ಭಾಗವನ್ನು ಸಂಪೂರ್ಣವಾಗಿ ಕಲಾ ಪೋಷಣೆ ಮತ್ತು ಪ್ರೋತ್ಸಾಹಕ್ಕೆ ಮೀಸಲಿಟ್ಟಿದ್ದರು. ಜೆಎಸ್‌ಎಸ್ ಸಂಗೀತ ಸಭಾದ ಅಧ್ಯಕ್ಷರೂ ಅಗಿದ್ದರು. ಕಲಾವಿದರಿಗಾಗಿ

ಅವರ ಮನೆಯನ್ನೇ ಅತಿಥಿಗೃಹವನ್ನಾಗಿ ಮಾಡಿದ ಹಿರಿಯ ವ್ಯಕ್ತಿತ್ವ ಎಂದು ಸ್ಮರಿಸಿದರು.

ಹಿರಿಯ ನೃತ್ಯ ಕಲಾವಿದರಾದ ಶ್ರೀಮತಿ ವಸುಂಧರಾ ದೊರೆಸ್ವಾಮಿಯವರು ಮೈಸೂರಿನ ಸಾಂಸ್ಕೃತಿಕ ಅಗ್ರಗಣ್ಯ ಕಲಾರತ್ನವನ್ನು ನಾವು ಕಳೆದುಕೊಂಡಿದ್ದೇವೆ. ಎಲ್ಲಾ ಕಲಾ ಪ್ರಕಾರಗಳಿಗೂ ಅವರು ಪ್ರೋತ್ಸಾಹ ನೀಡುತ್ತಿದ್ದರು. ತಮ್ಮ ಕಾರ್ಯ ಚಟುವಟಿಕೆಗಳಿಂದಲೇ ಹೆಸರಾದವರು ಎಂದರು.

ಖ್ಯಾತ ವಯೋಲಿನ್ ವಾದಕರಾದ ಡಾ. ಮೈಸೂರು ಎಂ. ಮಂಜುನಾಥ್‌ರವರು ನಮ್ಮ ತಂದೆಯವರ ಜೊತೆ ಮೂರ್ತಿಯವರು ಉತ್ತಮ ಒಡನಾಟ ಹೊಂದಿದ್ದರು. ಅವರ ಮಾರ್ಗದರ್ಶನದಲ್ಲಿ ನಾವು ಬೆಳೆದಿದ್ದೇವೆ. ನನ್ನ ಮತ್ತು ನಮ್ಮಣ್ಣನವರ ಕಾರ್ಯಕ್ರಮಗಳಿಗೆ ಅವರು ಸದಾ ಪ್ರೋತ್ಸಾಹ ನೀಡುತ್ತಿದ್ದರು. ಮೈಸೂರಿನಲ್ಲಿ ಎಲ್ಲಾ ಬಗೆಯ ಕಲಾವಿದರನ್ನು ಒಗ್ಗೂಡಿಸಿದ ಕೀರ್ತಿ ಅವರಿಗೆ ಸಲ್ಲುತ್ತದೆ ಎಂದು ಹೇಳಿದರು. ಶ್ರೀ ಎಂ.ಎಲ್. ಕೃಷ್ಣಸ್ವಾಮಿಯವರು ಮಾತನಾಡಿ, ಕೆ.ವಿ. ಮೂರ್ತಿಯವರ ಸಾಮಾಜಿಕ ಸೇವೆಯನ್ನು ಸ್ಮರಿಸಿದರು.

ನಾದಬ್ರಹ್ಮ ಸಂಗೀತ ಸಭಾಧ್ಯಕ್ಷರಾದ ಶ್ರೀ ಟಿ.ಆರ್. ಹರೀಶ್, ಡಾ. ಎಚ್.ಎಲ್. ಶಿವಶಂಕರ್, ಕೆ.ವಿ. ಮೂರ್ತಿಯವರ ಪುತ್ರಿ ಡಾ. ಪ್ರತಿಭಾ ಮಾತನಾಡಿದರು. ವಿದ್ವಾನ್ ಮೈಸೂರು ಎಂ. ನಾಗರಾಜ್ ಮತ್ತು ಡಾ. ಮೈಸೂರು ಮಂಜುನಾಥ್‌ರವರು ವಯೋಲಿನ್ ನುಡಿಸುವ ಮೂಲಕ ಸಂಗೀತ ನಮನವನ್ನು ಸಲ್ಲಿಸಿದರು. ವಿದ್ವಾನ್ ಡಾ. ವಿಜಯರಾಘವನ್, ವಿದ್ವಾನ್ ಬಿ. ಶ್ರೀಧರ್, ಶ್ರೀ ಕೆ. ಕೃಷ್ಣಕುಮಾರ್, ಶ್ರೀ ಕೇಶವ ಸರಳಯ್ಯ, ಡಾ. ಪದ್ಮಾವತಿ ನರಸಿಂಹನ್, ಶ್ರೀ ಹಿಮಾಂಶು, ಶ್ರೀ ರಘುರಾಂ ವಾಜಪೇಯಿ ಮೊದಲಾದವರು ಉಪಸ್ಥಿತರಿದ್ದರು. ಶ್ರೀ ಪ್ರಸಾದ್ ಕಾರ್ಯಕ್ರಮ ನಿರ್ವಹಿಸಿದರು.

**ಬಯಲೇ ನಮ್ಮ ದೇವರು**

ಬಯಲೇ ದೇವರೆಂದು ಕರೆದವರು ಅಲ್ಲಮಪ್ರಭುಗಳು ಎಂದು ಪೂಜ್ಯ ಶ್ರೀ ಸಿದ್ಧೇಶ್ವರ ಸ್ವಾಮಿಗಳು ತಿಳಿಸಿದರು.

ಏಪ್ರಿಲ್ 13 ರಂದು ಸುತ್ತೂರು ಶ್ರೀಕ್ಷೇತ್ರದಲ್ಲಿ ಯುಗಾದಿಯಂದು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಜರುಗಿದ ಅಲ್ಲಮಪ್ರಭುಗಳ ಜಯಂತಿಯ ಸಂದರ್ಭದಲ್ಲಿ ಪ್ರವಚನ ನೀಡುತ್ತಾ ನಾನು, ನೀನು, ಅವು, ಇವು, ಅದು, ಇದು ಇವೆಲ್ಲವನ್ನು ನಾಶಗೊಳಿಸಿ ಅಹಂಕಾರ ಭಾವನೆಯಿಂದ ಮುಕ್ತರಾದರೆ ಭಗವಂತನ ದರ್ಶನ ಸಾಧ್ಯ. ಜಗತ್ತೆಲ್ಲ ಬಯಲಾದ ನಂತರ ಏನೂ ಉಳಿಯುವುದಿಲ್ಲ. ಎಲ್ಲವೂ ನಾಶವಾದ ನಂತರ ಏನು ಉಳಿಯುತ್ತದೆಯೊ ಅದೇ ಬಯಲು, ಸತ್ಯ, ದೇವರು. ಕಾಣುವುದೆಲ್ಲ ಕಾಣದ ಹಾಗೆ ಆಗುತ್ತದೆ. ಎಲ್ಲರೂ ಬಯಲ ದಾರ್ಶನಿಕರಾಗಬೇಕು. ನೆಲದ ಮರೆಯಲ್ಲಿ ಅಡಗಿರುವ ನಿಧಾನದಂತೆ, ಮುಗಿಲ ಮರೆಯಲ್ಲಿ ಅಡಗಿರುವ ಮಿಂಚಿನಂತೆ, ಬಯಲ ಮರೆಯಲ್ಲಿರುವ ಮರೀಚಿಕೆಯಂತೆ, ಕಣ್ಣಿನೊಳಗಿರುವ ಬೆಳಕಿನಂತೆ

ಭಗವಂತನಿದ್ದಾನೆ ಎಂದಿದ್ದಾರೆ. ಅಲ್ಲಮರಿಗೆ ಕಣ್ಣು ಹರಿಸಿದಲ್ಲೆಲ್ಲ ಗುಹೇಶ್ವರನೆ ಕಾಣುತ್ತಿದ್ದ. ಮನಸ್ಸಿನಲ್ಲಿ ಬಯಲ ಧಾರಣೆ ಇರಬೇಕು. ಹೊರಗೆ ಮಾತ್ರ ಸಂಪತ್ತಿನ ಅನುಭಾವವಿದ್ದಾಗ ಬದುಕು ಸಾರ್ಥಕವಾಗುತ್ತದೆ. ಹೊಸ ವರ್ಷ ಅಲ್ಲಮರ ನೆನಪಿಗೋಸ್ಕರವೇ ಆಚರಣೆಯಾಗುತ್ತಿದೆ. ಕನಸುಗಳನ್ನು ತೆಗೆದು ಹಾಕಿದರೆ ಬಯಲು ದರ್ಶನ ಸಹಜವಾಗಿಯೇ ಆಗುತ್ತಾ ಹೋಗುತ್ತದೆ. ವ್ಯಕ್ತಿಯನ್ನು ಯಾರು ಏನೇ ಹೊಗಳಿದರೂ ಅದು ನಾನಲ್ಲವೆಂಬ ಭಾವನೆ ಬಂದರೆ ಅದೇ ಅಲ್ಲಮರ ಸ್ಮರಣೆ. ಲೌಕಿಕ ವಿಷಯಗಳನ್ನು ಮನಸ್ಸಿನೊಳಗೆ ತಂದುಕೊಂಡು ಅದಕ್ಕೆ ವಶನಾದರೆ ಸಂಸಾರದ ಬಂಧನ ತಾನೇ ಪ್ರಾರಂಭವಾಗುತ್ತದೆ. ಅಲ್ಲಮರ ಬಯಲ ಸಂದೇಶಗಳನ್ನು ಯಾವಾಗಲೂ ಸ್ಮರಣೆ ಮಾಡುತ್ತಿರಬೇಕು ಎಂದು ತಿಳಿಸಿದರು.

ಡಾ. ಕೆ.ಬಿ. ಪ್ರಭುಪ್ರಸಾದ್‌ರವರು ಪ್ಲವ ಎಂದರೆ ತೆಪ್ಪ ಎಂದರ್ಥ. ವ್ಯಾಪಕವಾಗಿ ಹರಡಿರುವ ಕರೋನ ನದಿಯನ್ನು ಈ ಸಂವತ್ಸರದಲ್ಲಿ ದಾಟಿ ದಂಡೆಯನ್ನು ಸೇರುವ ಕಾರ್ಯವಾಗಬೇಕಾಗಿದೆ. ಭಾರತೀಯರಿಗೆ ಹಬ್ಬಗಳು ಸಂತೋಷ–ಸಂಭ್ರಮ–ಸಡಗರಗಳನ್ನು ತರುವಂಥವು. ವಸಂತ ಋತುವಿನ ಆಗಮನ ಪ್ರಕೃತಿಯಲ್ಲಿ ಹೊಸ ಸೊಬಗನ್ನು ತಂದುಕೊಡುತ್ತದೆ. ಹೊಸ ವರ್ಷದಲ್ಲಿ ನಿರ್ಭಯದಿಂದ ಬದುಕುವಂತಾಗಲಿ ಎಂದು ಸ್ವರಚಿತ ಕವನ ವಾಚಿಸುವ ಮೂಲಕ ತಿಳಿಸಿದರು.

ಶ್ರೀ ಅಂದಯ್ಯ ಶಿರೂರಮಠ ಸ್ವಾಗತಿಸಿ ಕಾರ್ಯಕ್ರಮ ನಿರೂಪಿಸಿದರು. ಆಲಮಟ್ಟಿಯ ಡಾ. ಶ್ರೀ ರುದ್ರಮುನಿದೇವರು ವಂದನೆ ಸಲ್ಲಿಸಿದರು. ಸುತ್ತೂರು ಶಾಲೆಯ ಮಕ್ಕಳು ಪ್ರಾರ್ಥನೆ ಸಲ್ಲಿಸಿದರು.

### ಸಾಮೂಹಿಕ ಫಲಾಫಲಗಳನ್ನು ಹೇಳುವುದು ಶಾಸ್ತ್ರಕ್ಕೆ ವಿರುದ್ಧವಾದುದು

ಸಾಮೂಹಿಕವಾಗಿ ರಾಶಿಫಲ ಮತ್ತು ಪ್ರತಿನಿತ್ಯದ ಭವಿಷ್ಯ ಇತ್ಯಾದಿಗಳನ್ನು ಹೇಳುವುದು ಸೂಕ್ತವಲ್ಲ. ಅದು ಜ್ಯೋತಿಷ್ಯ ಶಾಸ್ತ್ರಕ್ಕೆ ವಿರುದ್ಧವಾದುದು ಎಂದು ಸಿದ್ಧಾಂತಿ ಶ್ರೀ ಕೆ.ಜಿ. ಪುಟ್ಟಹೊನ್ನಯ್ಯನವರು ಏಪ್ರಿಲ್ 13ರಂದು ಸುತ್ತೂರು ಶ್ರೀಕ್ಷೇತ್ರದಲ್ಲಿ ಪರಮಪೂಜ್ಯ ಜಗದ್ಗುರುಗಳು ಹಾಗೂ ಶ್ರೀ ಸಿದ್ದೇಶ್ವರ ಮಹಾಸ್ವಾಮಿಗಳವರ ದಿವ್ಯ ಸಾನ್ನಿಧ್ಯದಲ್ಲಿ ಯುಗಾದಿಯಂದು ಪಂಚಾಂಗ ಪಠಣ ಮಾಡುತ್ತಾ ಸೂರ್ಯ ಸಿದ್ಧಾಂತದ ಪಂಚಾಂಗವನ್ನು ಶ್ರಾದ್ಧಾದಿಗಳಿಗೆ ಮಾತ್ರ ಅನುಸರಿಸಬೇಕು. ದೃಕ್ ಗಣಿತದ ಆಧಾರದಿಂದ ರೂಪಿತವಾದ ಪಂಚಾಂಗವು ಗಣಿತದ ಆಧಾರದ ಮೇಲೆ ಸಿದ್ಧವಾಗಿದೆ. ಎಲ್ಲ ವಿಚಾರಗಳು, ರಾಜಕೀಯ ಸಂಗತಿಗಳು ಆಲೋಚನೆಗೆ ವ್ಯತಿರಿಕ್ತವಾಗಿರುತ್ತವೆ. ಈ ಸಂವತ್ಸರದಲ್ಲಿ ಕೆಲವು ಮಾಸಗಳಲ್ಲಿ ಕಷ್ಟ, ನೋವು ಹಾಗೂ ರಾಜಕೀಯ ವಿಪ್ಲವಗಳು ಉಂಟಾಗುವ ಸಂಭವವಿರುತ್ತದೆ ಎಂದು ತಿಳಿಸಿದರು.

ಬೆಂಗಳೂರಿನ ಆಕಾಶ್ ಜ್ಯೋತಿಷ್ಯ ಸಂಸ್ಥೆಯ ಜ್ಯೋತಿಷ್ಯ ಉಪನ್ಯಾಸಕರಾದ ಶ್ರೀಮತಿ ಮೇಘನಾ ವರ್ಷರವರು ಪಂಚಾಂಗವನ್ನು ಪರಿಚಯಿಸುತ್ತಾ, ಸಿದ್ಧಾಂತಿ

ಪುಟ್ಟಹೊನ್ನಯ್ಯನವರ ಸುತ್ತೂರು ಶ್ರೀ ಶಿವರಾತ್ರೀಶ್ವರ ಪಂಚಾಂಗ ಅದ್ಭುತವಾಗಿದೆ. ಈ ಪಂಚಾಂಗಗಳಲ್ಲಿ ರಾಷ್ಟ್ರೀಯ ಪಂಚಾಂಗದ ವಿವರಗಳು ಇವೆ. ನಮ್ಮ ಶರೀರದ ಪಂಚ ಅಂಗಗಳು ಜಗತ್ತಿನ ಪಂಚ ಭೂತಗಳೇ ಪಂಚಾಂಗದ ಜೀವ. ಸುತ್ತೂರು ಶ್ರೀ ಶಿವರಾತ್ರೀಶ್ವರ ಪಂಚಾಂಗದಲ್ಲಿ ಅನೇಕ ವಿಶೇಷ ಅಂಶಗಳು ಅಡಕಗೊಂಡಿವೆ. ಈ ಪಂಚಾಂಗದಿಂದ ನಮ್ಮ ಜ್ಞಾನವನ್ನು ಅಧಿಕಗೊಳಿಸಿಕೊಳ್ಳಬಹುದಾಗಿದೆ. ನಮ್ಮೆಲ್ಲರಿಗೂ ಪಂಚಾಂಗದ ಅಗತ್ಯವಿದೆ. ಹೇಗೆ ಬದುಕಬೇಕು, ಸಂಸ್ಕಾರಗಳನ್ನು ಹೇಗೆ ಕಲಿಯಬೇಕು, ಆಚರಣೆಗಳನ್ನು ಹೇಗೆ ಮಾಡಬೇಕು ಇತ್ಯಾದಿಗಳನ್ನು ಪಂಚಾಂಗದಿಂದ ಪಡೆದುಕೊಳ್ಳುವುದು ಸಾಧ್ಯವಿದೆ. ಹಿರಿಯರಿಗೆ, ಗೃಹಸ್ಥರಿಗೆ ಹಾಗೂ ದೇವಾಲಯಗಳಲ್ಲಿ ಪೂಜಾಕಾರ್ಯಗಳನ್ನು ಮಾಡುವವರಿಗೆಲ್ಲ ಪಂಚಾಂಗ ಅತ್ಯಾವಶ್ಯಕವಾಗಿದೆ ಎಂದು ತಿಳಿಸಿದರು.

ಹಲವಾರು ಮಠಾಧಿಪತಿಗಳು, ರಾಷ್ಟ್ರಪ್ರಶಸ್ತಿ ಪುರಸ್ಕೃತರಾದ ಶ್ರೀ ಗುರುಪಾದ ಹೆಗಡೆ, ಶ್ರೀ ಕೃಷ್ಣಮೂರ್ತಿ, ಶ್ರೀ ಗುಂಡಪ್ಪಗೌಡ ಮೊದಲಾದವರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು. ಶ್ರೀ ಅಂದಯ್ಯ ಶಿರೂರಮಠ ಕಾರ್ಯಕ್ರಮ ನಿರೂಪಿಸಿದರು. ಸುತ್ತೂರು ಶಾಲೆಯ ಮಕ್ಕಳು ಪ್ರಾರ್ಥನೆ ಸಲ್ಲಿಸಿದರು.

**ಕನಸು ಕಂಡಾಗ ಮಾತ್ರ ಸಾಧನೆ ಸಾಧ್ಯ**

ಮನುಷ್ಯನಾದವನು ಕನಸು ಕಂಡಾಗ ಮಾತ್ರ ಏನಾದರೂ ಸಾಧನೆ ಮಾಡಲು ಸಾಧ್ಯ ಎಂದು ಪರಮಪೂಜ್ಯ ಜಗದ್ಗುರುಗಳು ಹೇಳಿದರು.

ಏಪ್ರಿಲ್ 14 ರಂದು ಬೀದರ್ ಜಿಲ್ಲೆ ಭಾಲ್ಕಿ ತಾಲ್ಲೂಕಿನ ಕರಡ್ಯಾಳದ ಡಾ. ಚನ್ನಬಸವೇಶ್ವರ ಗುರುಕುಲ ವಸತಿ ವಿಜ್ಞಾನ ಪದವಿಪೂರ್ವ ಕಾಲೇಜಿನ ನೂತನ ಕಟ್ಟಡದ ಉದ್ಘಾಟನಾ ಸಮಾರಂಭದ ದಿವ್ಯ ಸಾನ್ನಿಧ್ಯ ವಹಿಸಿ ಸಂವಿಧಾನ ರಚನಾ ಪೂರ್ವದಲ್ಲಿಯೇ ಭಾಲ್ಕಿಯ ಡಾ. ಚನ್ನಬಸವ ಪಟ್ಟದ್ದೇವರು ಸಾಮಾಜಿಕ ಮತ್ತು ಧಾರ್ಮಿಕ ಸಮಾನತೆಯನ್ನು ತಂದುಕೊಟ್ಟಿದ್ದರು. ಅವರ ನಂತರ ತೀರಾ ಕಡಿಮೆ ಅವಧಿಯಲ್ಲಿ ಡಾ. ಬಸವಲಿಂಗ ಪಟ್ಟದ್ದೇವರು ಆಧ್ಯಾತ್ಮಿಕ , ಶೈಕ್ಷಣಿಕ ಮತ್ತು ಸಾಮಾಜಿಕ ಕ್ಷೇತ್ರಗಳಲ್ಲಿ ಅದ್ಭುತ ಸಾಧನೆ ಮಾಡಿದ್ದಾರೆ. ಇದರ ಪರಿಣಾಮವೇ ಈ ಗುರುಕುಲ ಇಂದು ಇಷ್ಟು ಎತ್ತರಕ್ಕೆ ಬೆಳೆದಿದೆ ಎಂದರು.

ವಿಜಯಪುರ ಜ್ಞಾನಯೋಗಾಶ್ರಮದ ಶ್ರೀ ಸಿದ್ಧೇಶ್ವರ ಮಹಾಸ್ವಾಮಿಗಳು ನಮ್ಮಲ್ಲಿರುವ ಅದ್ಭುತ ಶಕ್ತಿಯನ್ನು ಪವಿತ್ರ ಕಾರ್ಯಗಳಿಗೆ ಬಳಸಬೇಕು. ಡಾ. ಬಸವಲಿಂಗ ಪಟ್ಟದ್ದೇವರು ತಮ್ಮ ಅದ್ಭುತ ಶಕ್ತಿಯಿಂದ ಇಲ್ಲಿಯ ಜನರ ಜ್ಞಾನಾರ್ಜನೆ ಹೆಚ್ಚಿಸುವ ಕಾರ್ಯ ಮಾಡಿದ್ದಾರೆ. ಪ್ರತಿಯೊಬ್ಬ ಮನುಷ್ಯ ತನ್ನ ಜತೆಗೆ ಸುತ್ತಲಿನವರ ಬದುಕನ್ನೂ ಸುಂದರಗೊಳಿಸಲು ಪ್ರಯತ್ನಿಸಬೇಕು. ಆಗ ಜೀವನ ಸಾರ್ಥಕವಾಗುತ್ತದೆ ಎಂದು ಹೇಳಿದರು.

ಶ್ರೀ ಹಿರೇಮಠ ಸಂಸ್ಥಾನದ ಡಾ. ಶ್ರೀ ಬಸವಲಿಂಗ ಪಟ್ಟದ್ದೇವರು ಅಧ್ಯಕ್ಷತೆ ವಹಿಸಿದ್ದರು. ಶ್ರೀ ಗುರುಬಸವ ಪಟ್ಟದ್ದೇವರು ಸದಾಶಯ ನುಡಿ ನುಡಿದರು. ಜಂಟಿ

ಪೊಲೀಸ್ ಆಯುಕ್ತರು ಹಾಗೂ ಕೇಂದ್ರ ಅಪರಾಧ ವಿಭಾಗದ ಮುಖ್ಯಸ್ಥರಾದ ಶ್ರೀ ಸಂದೀಪ್ ಪಾಟೀಲ್ ಹಾಗೂ ಮಾತನಾಡಿದರು. ಮಾಜಿ ಶಾಸಕರಾದ ಶ್ರೀ ಪ್ರಕಾಶ್ ಖಂಡ್ರೆ ಉಪಸ್ಥಿತರಿದ್ದರು. ಡಾ. ಎಸ್. ಸಿದ್ಧಯ್ಯನವರು ಮೂರ್ತಿ ಅನಾವರಣಗೊಳಿಸಿದರು, ಶ್ರೀ ಸಾಗರ್ ಈಶ್ವರ ಖಂಡ್ರೆ ಬಸವಗುರುಪೂಜೆ ನೆರವೇರಿಸಿದರು. ಗುರುಕುಲದ ವಿದ್ಯಾರ್ಥಿನಿಯರು ಪ್ರಾರ್ಥನೆ ಮಾಡಿದರು. ಶ್ರೀ ಮೋಹನ ರೆಡ್ಡಿ ಸ್ವಾಗತಿಸಿದರು. ಶ್ರೀ ಮಧುಕರ ಗಾಂವಕರ ಕಾರ್ಯಕ್ರಮ ನಿರೂಪಿಸಿದರು.

**ಜೆಎಸ್‌ಎಸ್ ಸಂಸ್ಥೆಗಳ ನಿವೃತ್ತ ನೌಕರರಿಗೆ ಅಭಿನಂದನೆ**

ಮೈಸೂರಿನ ಸುತ್ತೂರು ಶ್ರೀಮಠದಲ್ಲಿ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ 105ನೇ ಜಯಂತಿ ಅಂಗವಾಗಿ ಜೆಎಸ್‌ಎಸ್ ಮಹಾವಿದ್ಯಾಪೀಠದ ವಿವಿಧ ಸಂಸ್ಥೆಗಳಲ್ಲಿ ಸೇವೆ ಸಲ್ಲಿಸಿ ನಿವೃತ್ತರಾದವರ ಅಭಿನಂದನಾ ಸಮಾರಂಭವು ಏಪ್ರಿಲ್ 17 ರಂದು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ನೆರವೇರಿತು.

2019 ಸೆಪ್ಟಂಬರ್‌ನಿಂದ 2021 ಆಗಸ್ಟ್ ಅಂತ್ಯದವರೆಗೆ ನಿವೃತ್ತರಾದ 145 ಮಂದಿ, ಸ್ವಯಂನಿವೃತ್ತಿ ಪಡೆದ 31 ಮಂದಿ ಮತ್ತು ಸೇವೆಯಲ್ಲಿರುವಾಗ ಅಗಲಿದ 19 ಮಂದಿಯ ಕುಟುಂಬ ಸದಸ್ಯರು ಒಟ್ಟು 195 ಮಂದಿಯನ್ನು ಅಭಿನಂದಿಸಲಾಯಿತು. ಕಾರ್ಯಕ್ರಮದಲ್ಲಿ 142 ಮಂದಿ ನೇರವಾಗಿ ಪಾಲ್ಗೊಂಡಿದ್ದರು. ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಸಾಧ್ಯವಾಗದವರಿಗೆ ಅಭಿನಂದನೆ ನಂತರ ಕಳುಹಿಸಿ ಕೊಡಲಾಗುವುದು. ನಿವೃತ್ತ ನೌಕರರ ಪರಿಚಯದ 'ತೇರನೆಳೆದವರು' ಪುಸ್ತಕವನ್ನು ಪರಮಪೂಜ್ಯ ಜಗದ್ಗುರುಗಳು ಬಿಡುಗಡೆ ಮಾಡಿದರು. ಇದೇ ಸಂದರ್ಭದಲ್ಲಿ ಕನ್ನಡದ 'ಕಾಯಕ ತಪಸ್ವಿ ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮಿಗಳು' ಕೃತಿಯನ್ನು ತೆಲುಗಿಗೆ 'ಕಾಯಕ ತಪಸ್ವಿ ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮಿಗಾರು'ವಾಗಿ ಅನುವಾದಿಸಿದ ಶ್ರೀ ಕೆ. ವೆಂಕಟೇಶ್ವರರಾವ್ ರವರನ್ನು ಸನ್ಮಾನಿಸಲಾಯಿತು.

ಕಾರ್ಯಕ್ರಮವನ್ನು ಕೋವಿಡ್–19ರ ಮಾರ್ಗಸೂಚಿ ಅನ್ವಯ ಏರ್ಪಡಿಸಲಾಗಿತ್ತು. ಅಭಿನಂದಿತರಿಗೆ ಕಾರ್ಯಕ್ರಮದಲ್ಲಿ ನೇರವಾಗಿ ಪಾಲ್ಗೊಳ್ಳಲು ಅವಕಾಶ ಕಲ್ಪಿಸಲಾಗಿತ್ತು. ಅಭಿನಂದಿತರ ಕುಟುಂಬ ಸದಸ್ಯರು, ಬಂಧುಗಳು, ಸಂಸ್ಥೆಯ ನೌಕರರು ಹಾಗೂ ಸಾರ್ವಜನಿಕರು ಆನ್‌ಲೈನ್ ಮೂಲಕ ಕಾರ್ಯಕ್ರಮವನ್ನು ವೀಕ್ಷಿಸಲು ವ್ಯವಸ್ಥೆ ಮಾಡಲಾಗಿತ್ತು.

ಕಾಲೇಜು ಶಿಕ್ಷಣ ಮತ್ತು ಪ್ರಕಟಣ ವಿಭಾಗದ ನಿರ್ದೇಶಕರಾದ ಪ್ರೊ. ಮೊರಬದ ಮಲ್ಲಿಕಾರ್ಜುನರವರು ಸ್ವಾಗತಿಸಿದರು. ಜೆಎಸ್‌ಎಸ್ ಮಹಿಳಾ ಕಾಲೇಜಿನ ಸಹಾಯಕ ಪ್ರಾಧ್ಯಾಪಕರಾದ ಶ್ರೀ ಆರ್.ಎಸ್. ಕುಮಾರ್‌ರವರು ವಂದಿಸಿದರು. ಜೆಎಸ್‌ಎಸ್ ಕಲಾವೃಂದದ ಶ್ರೀಮತಿ ಎಂ. ರೂಪ, ಶ್ರೀಮತಿ ರೂಪ ಗುರುಪ್ರಸಾದ್, ಶ್ರೀಮತಿ ವಿನುತ ಕಾಂತರಾಜ್ ಮತ್ತು ತಂಡದವರು ಪ್ರಾರ್ಥಿಸಿದರು. ಜೆಎಸ್‌ಎಸ್ ಕಾನೂನು ಕಾಲೇಜಿನ ಪ್ರಾಂಶುಪಾಲರಾದ ಡಾ. ಎಸ್. ನಟರಾಜು ಕಾರ್ಯಕ್ರಮವನ್ನು ನಿರೂಪಿಸಿದರು.

□

# ಪ್ರಸಾದ



ಕೃತಿ-ಸ್ವೀಕೃತಿ

**Peace Through Religion 2020**
Jagadguru chandrashekar
Shivayogi Rajendra
Mahaswamiji
Hosa Math
Akkihond, Hubli
Price : 150/-

**ಲಿಂಗರಾಜ ವಿಜಯ**
**ನವಿಲುಗುಂದ ಶಿರಸಂಗಿ ಸರದೇಸಾಯಿ**
ಸಂ: ಪ್ರೊ. ಸಿದ್ದಣ್ಣ ಉತ್ನಾಳ
ಪ್ರ.: ಅನುಪಮ ಪ್ರಕಾಶನ
ಅಥಣಿ ಸಾವಿತ್ರಿ ಸದನ, ಅಥಣಿ
ಬೆಳಗಾವಿ ಜಿಲ್ಲೆ
ಪು. 92, ಬೆಲೆ: 80/-

**ಪ್ರೊ. ಸಿದ್ಧಣ್ಣ ಉತ್ನಾಳ (ವ್ಯಕ್ತಿ ಕೃತಿ)**
ಡಾ. ವಿ.ಎಸ್. ಮಾಳಿ
ಪ್ರ.: ಅನುಪಮ ಪ್ರಕಾಶನ
ಅಥಣಿ ಸಾವಿತ್ರಿ ಸದನ, ಅಥಣಿ
ಬೆಳಗಾವಿ ಜಿಲ್ಲೆ
ಪು. 108, ಬೆಲೆ: 100/-

**ಶ್ರೀ ಸಿದ್ಧಪ್ಪಾಜಿ ಚರಿತೆ**
ಪಿ.ಎಸ್. ಸಿದ್ಧಾಚಾರ್ ಕವಿಮಿತ್ರ
ಪ್ರ.: ಸಿದ್ಧಾಚಾರ್ ಕವಿಮಿತ್ರ ಪ್ರಕಾಶನ
ಹೆಬ್ಬಾಳ್ 2ನೇ ಹಂತ, ಮೈಸೂರು
ಪು. 160, ಬೆಲೆ: 150/-

**ವರ್ತಮಾನ ಮುಕ್ತಕಗಳು**
ಪಿ.ಎಸ್. ಸಿದ್ಧಾಚಾರ್ ಕವಿಮಿತ್ರ
ಪ್ರ.: ಸಿದ್ಧಾಚಾರ್ ಕವಿಮಿತ್ರ ಪ್ರಕಾಶನ
ಹೆಬ್ಬಾಳ್ 2ನೇ ಹಂತ, ಮೈಸೂರು
ಪು. 147, ಬೆಲೆ: 130/-

**ಕರ್ನಾಟಕ ಪೀಪಲ್ಸ್ ಎಜುಕೇಷನ್ ಸೊಸೈಟಿ–30**
ವೈ.ಪಿ. ಚಿಪ್ಪರ್
ಪ್ರ.: ಕರ್ನಾಟಕ ಪೀಪಲ್ಸ್ ಎಜುಕೇಷನ್ ಸೊಸೈಟಿ, ಡಾ. ಅಂಬೇಡ್ಕರ್ ಸಭಾ ಭವನ, ಗುಲಬರ್ಗಾ.
ಪು. 262. ಬೆಲೆ: 500/-

**ಶ್ರೀ ಮಾಲೆ, ಮಾರುತಿರಾವ್ ಡಿ. ಮಾಲೆ ಅವರ ಷಷ್ಟ್ಯಬ್ಧಪೂರ್ಣ ಸವಿನೆನಪಿನ ಅಭಿನಂದನ ಗ್ರಂಥ**
ಸಂ.: ಪ್ರೊ. ಶಿವರಾಜ್ ಜಿ. ಪಾಟೀಲ್
ಪ್ರ.: ಮಹಂತೇಶ ಪ್ರಕಾಶನ ಸಂಸ್ಥೆ
ಗೋಕುಲ ನಗರ, ಗುಲಬರ್ಗಾ
ಪು. 367, ಬೆಲೆ: 300/-

**ಹೊನ್ನಗುಂದ ಚೇತನ**
ಡಾ. ವೀರ ಬಸವ ಬಲಕುಂದಿ
ಪ್ರ.: ಕಾಯಕಯೋಗಿ ಶ್ರೀಗುರು ಬಸವಾರ್ಯ ಮಠ ಗುರುಗಳ ಸಂಸ್ಮರಣ ಸಮಿತಿ, ಹುನಗುಂದ
ಪು. 312, ಬೆಲೆ: 260/-

**ಬಿಲ್ವಶ್ರೀ ತ್ರಿದಳ (ವಚನ ಸಂಪದ)**
ಲೇ: ಲೀಲಾಬಿಲ್ವಂ ಕೊಂಡಿ ಹಿರೇಮಠ
ಪಂಪಯ್ಯ ಅಳವಳ್ಳಿ ಮಠ ಕವಿತಾಳ
ಪ್ರ.: ಕೆ. ಬಸವಪ್ರಭು
ಜೆ.ಪಿ.ನಗರ, 9ನೇ ಹಂತ
ಬೆಂಗಳೂರು. ಬೆಲೆ: 30/-

**ಮತ್ತೆ ಕಲ್ಯಾಣ ಭಾಗ – 1**
ಲೇ: ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳು
ಪ್ರ.: ಶ್ರೀ ಶಿವಕುಮಾರ ಕಲಾ ಸಂಘ (ರಿ), ಸಾಣೇಹಳ್ಳಿ
ಪು. 268, ಬೆಲೆ: 200/-

# ಲೇಖಕರ ವಿಳಾಸ

**ಡಾ. ಬಿ.ಆರ್. ಚಿಲುಮಿ**
ನಂ. 03, 'ಹೊಂಬೆಳಕು'
ಓಂ ಸ್ಕೂಲ್ ಹತ್ತಿರ
ಜಲದರ್ಶಿನಿ ನಗರ
ಧಾರವಾಡ 580003
ಮೊ: 9880206032

**ಡಾ. ಬಸವರಾಜ ಸಬರದ**
ನಂ. 1, 2ನೇ ಮೈನ್
2ನೇ ಕ್ರಾಸ್
ಅಮರಜ್ಯೋತಿ ಲೇಔಟ್
ಕುಪ್ಪುಸ್ವಾಮಿ ಪಾರ್ಕ್
ಆರ್.ಟಿ. ನಗರ ಅಂಚೆ
ಬೆಂಗಳೂರು 560032
ಮೊ. 9886619220


**ನಗರ್ಲೆ ಶಿವಕುಮಾರ**
ಬಿನ್ ಎನ್.ಎಸ್. ರಾಜಶೇಖರ
ನಗರ್ಲೆ ಅಂಚೆ
ನಂಜನಗೂಡು ತಾ.
ಮೊ: 9845609652



ಕರ್ನಾಟಕ ವಿಧಾನಪರಿಷತ್ತಿನ ಮುಖ್ಯ ಸಚೇತಕರಾದ ಶ್ರೀ ಮಹಾಂತೇಶ ಎಂ. ಕವಟಗಿಮಠರವರು ಸುತ್ತೂರು ಶ್ರೀಕ್ಷೇತ್ರಕ್ಕೆ ಭೇಟಿ ನೀಡಿದ್ದ ಸಂದರ್ಭದಲ್ಲಿ ಪರಮಪೂಜ್ಯ ಜಗದ್ಗುರುಗಳವರು ಆಶೀರ್ವದಿಸಿ ಗೌರವಿಸಿದರು (11.2.2021)



ಮೈಸೂರು ಜಿಲ್ಲಾ ಅಖಿಲ ಭಾರತ ವೀರಶೈವ–ಲಿಂಗಾಯತ ಮಹಾಸಭಾದ ನೂತನ ಕಟ್ಟಡದ ಶಿಲಾನ್ಯಾಸವನ್ನು ಪರಮಪೂಜ್ಯ ಜಗದ್ಗುರುಗಳವರ ಸಾನ್ನಿಧ್ಯದಲ್ಲಿ ರಾಜ್ಯ ಬಿಜೆಪಿ ಉಪಾಧ್ಯಕ್ಷರಾದ ಶ್ರೀ ಬಿ.ವೈ. ವಿಜಯೇಂದ್ರರವರು ನೆರವೇರಿಸಿದರು. ಸಚಿವರು, ಶಾಸಕರುಗಳು, ಗಣ್ಯರು, ಮಹಾಸಭಾದ ಪದಾಧಿಕಾರಿಗಳು ಮೊದಲಾದವರಿದ್ದಾರೆ (14.2.2021)



ಮೈಸೂರಿನ ರಾಜೇಂದ್ರ ಭವನದಲ್ಲಿ ನಡೆದ ಖ್ಯಾತ ಕೃಷಿ ವಿಜ್ಞಾನಿ ಡಾ. ಎಂ. ಮಹದೇವಪ್ಪನವರ 'ಸಮಗ್ರ ಕೃಷಿ ಕಾವ್ಯ' ಕೃತಿ ಲೋಕಾರ್ಪಣೆಯು ಪರಮಪೂಜ್ಯ ಜಗದ್ಗುರುಗಳವರ ಸಾನ್ನಿಧ್ಯದಲ್ಲಿ ಜರುಗಿತು. ಚಿತ್ರದಲ್ಲಿ ವಿದ್ವಾಂಸರಾದ ಶ್ರೀ ಗೊ.ರು. ಚನ್ನಬಸಪ್ಪ, ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ಕುಲಪತಿಗಳಾದ ಡಾ. ಎಸ್. ರಾಜೇಂದ್ರ ಪ್ರಸಾದ್, ಸಾಹಿತಿಗಳಾದ ಪ್ರೊ. ಮಲೆಯೂರು ಗುರುಸ್ವಾಮಿ ಹಾಗೂ ಡಾ. ಮಹದೇವಪ್ಪನವರು ಮತ್ತು ಕುಟುಂಬ ವರ್ಗದವರನ್ನು ಕಾಣಬಹುದು (16.2.2021)



ಮೈಸೂರು ಶ್ರೀ ಸುತ್ತೂರು ಶಾಖಾಮಠಕ್ಕೆ ಪಶುಸಂಗೋಪನೆ ಸಚಿವರಾದ ಶ್ರೀ ಪ್ರಭು ಚೌಹಾಣ್‌ರವರು ಭೇಟಿ ನೀಡಿ ಪರಮಪೂಜ್ಯ ಜಗದ್ಗುರುಗಳವರ ಆಶೀರ್ವಾದ ಪಡೆದರು (16.2.2021)




ಹಾವೇರಿ ಜಿಲ್ಲೆ ರಟ್ಟಿಹಳ್ಳಿ ತಾಲ್ಲೂಕಿನ ತಿಪ್ಪಾಯಿಕೊಪ್ಪದ ಶ್ರೀಗುರು ಮೂಕಪ್ಪ ಶಿವಯೋಗಿಗಳ ಮಠದ ಶ್ರೀ ಮಹಾಂತದೇವರ ನಿರಂಜನ ಪಟ್ಟಾಧಿಕಾರ ಮಹೋತ್ಸವ ಉದ್ಘಾಟನೆಯ ಸಾನ್ನಿಧ್ಯ ವಹಿಸಿದ್ದ ಪರಮಪೂಜ್ಯ ಜಗದ್ಗುರುಗಳನ್ನು ಗೌರವಿಸುತ್ತಿರುವುದು. ಚಿತ್ರದಲ್ಲಿ ತಿಪ್ಪಾಯಿಕೊಪ್ಪದ ಶ್ರೀ ವಿರೂಪಾಕ್ಷ ಸ್ವಾಮಿಗಳು, ಶ್ರೀ ಮಹಾಂತದೇವರು, ಸಂಸದರಾದ ಶ್ರೀ ಬಿ.ವೈ. ರಾಘವೇಂದ್ರ ಮೊದಲಾದವರಿದ್ದಾರೆ (17.2.2021)



ಮೈಸೂರು ಶ್ರೀ ಸುತ್ತೂರು ಶಾಖಾಮಠಕ್ಕೆ ಅರಣ್ಯ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರಾದ ಶ್ರೀ ಅರವಿಂದ ಲಿಂಬಾವಳಿಯವರು ಭೇಟಿ ನೀಡಿ ಪರಮಪೂಜ್ಯ ಜಗದ್ಗುರುಗಳವರ ಆಶೀರ್ವಾದ ಪಡೆದರು (20.2.2021)




ಮೈಸೂರಿನ ಪತ್ರಕರ್ತರ ಭವನದಲ್ಲಿ ಪರಮಪೂಜ್ಯ ಜಗದ್ಗುರುಗಳವರ ಸಾನ್ನಿಧ್ಯದಲ್ಲಿ ಮೈಸೂರು ಫೋಟೋ ಜರ್ನಲಿಸ್ಟ್ ಅಸೋಸಿಯೇಷನ್ ಲಾಂಛನ ಬಿಡುಗಡೆಗೊಳಿಸಿ ಉದ್ಘಾಟಿಸಲಾಯಿತು. ಶ್ರೀ ಸಿದ್ದರಾಮಯ್ಯ, ಶ್ರೀ ಜಿ.ಟಿ. ದೇವೇಗೌಡ, ಶ್ರೀ ಹೆಚ್.ವಿ. ರಾಜೀವ್ ಹಾಗೂ ಅಸೋಸಿಯೇಷನ್ ಪದಾಧಿಕಾರಿಗಳಿದ್ದಾರೆ (20.2.2021)



ಸಕಲೇಶಪುರ ತಾಲ್ಲೂಕು ಕೌಡಳ್ಳಿಯ ಶ್ರೀ ಸಿದ್ದೇಶ್ವರಸ್ವಾಮಿ ದೇವಾಲಯದ ಲೋಕಾರ್ಪಣೆ ಮತ್ತು ಧಾರ್ಮಿಕ ಸಭೆಯನ್ನು ಜ್ಯೋತಿ ಬೆಳಗಿಸುವುದರ ಮೂಲಕ ಉದ್ಘಾಟಿಸಲಾಯಿತು. ಪರಮಪೂಜ್ಯ ಜಗದ್ಗುರುಗಳು, ಉಜ್ಜಯಿನಿ ಜಗದ್ಗುರುಗಳು, ಸಿದ್ಧಗಂಗಾ ಶ್ರೀಗಳು ಹಾಗೂ ಇತರ ಮಠಾಧೀಶರುಗಳಿದ್ದಾರೆ (21.2.2021)



ಮೈಸೂರು ಶ್ರೀ ಸುತ್ತೂರು ಶಾಖಾಮಠಕ್ಕೆ ಮೈಸೂರು ಮಹಾನಗರ ಪಾಲಿಕೆಯ ನೂತನ ಮಹಾಪೌರರಾದ ಶ್ರೀಮತಿ ರುಕ್ಮಿಣಿ ಮಾದೇಗೌಡರವರು ಕುಟುಂಬ ಸಮೇತ ಭೇಟಿ ನೀಡಿ ಪರಮಪೂಜ್ಯ ಜಗದ್ಗುರುಗಳವರ ಆಶೀರ್ವಾದ ಪಡೆದರು (26.2.2021)



ಮೈಸೂರು ಶ್ರೀ ಸುತ್ತೂರು ಶಾಖಾಮಠಕ್ಕೆ ಸಚಿವರುಗಳಾದ ಶ್ರೀ ಜಗದೀಶ್ ಶೆಟ್ಟರ್, ಶ್ರೀ ಸಿ.ಪಿ. ಯೋಗೇಶ್ವರ್ ಮತ್ತು ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮದ ಅಧ್ಯಕ್ಷರಾದ ಶ್ರೀಮತಿ ಶ್ರುತಿಯವರು ಭೇಟಿ ನೀಡಿ ಪರಮಪೂಜ್ಯ ಜಗದ್ಗುರುಗಳವರ ಆಶೀರ್ವಾದ ಪಡೆದರು (3.3.2021)



ಮೈಸೂರಿನ ಸರಸ್ವತಿಪುರಂನಲ್ಲಿರುವ ಜೆಎಸ್‌ಎಸ್ ಮಹಿಳಾ ಕಾಲೇಜಿನ ನವಜ್ಯೋತಿ ಸಭಾಂಗಣದಲ್ಲಿ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ವಿಶ್ರಾಂತ ಕುಲಪತಿ ಮತ್ತು ಕೃಷಿ ವಿಜ್ಞಾನಿಗಳಾದ ಡಾ. ಎಂ. ಮಹದೇವಪ್ಪನವರ ಸ್ಮರಣಾರ್ಥ ಏರ್ಪಡಿಸಿದ್ದ ಸಮರ್ಪಣೆ ಕಾರ್ಯಕ್ರಮ. ವಿಜಯಪುರ ಜ್ಞಾನಯೋಗಾಶ್ರಮದ ಶ್ರೀ ಸಿದ್ಧೇಶ್ವರ ಮಹಾಸ್ವಾಮಿಗಳು ಹಾಗೂ ಡಾ. ಮಹದೇವಪ್ಪನವರ ಕುಟುಂಬವರ್ಗದವರಿದ್ದಾರೆ (14.3.2021)



ಮೈಸೂರಿನ ಸರಸ್ವತಿಪುರಂನಲ್ಲಿರುವ ಜೆಎಸ್‌ಎಸ್ ಮಹಿಳಾ ಕಾಲೇಜಿನ ನವಜ್ಯೋತಿ ಸಭಾಂಗಣದಲ್ಲಿ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ವಿಶ್ರಾಂತ ಕುಲಪತಿ ಮತ್ತು ಕೃಷಿ ವಿಜ್ಞಾನಿಗಳಾದ ಡಾ. ಎಂ. ಮಹದೇವಪ್ಪನವರ ಸ್ಮರಣಾರ್ಥ ಏರ್ಪಡಿಸಿದ್ದ ಸಮರ್ಪಣೆ ಕಾರ್ಯಕ್ರಮದಲ್ಲಿ ಶ್ರೀ ಜಿ.ಎಲ್. ತ್ರಿಪುರಾಂತಕರವರ ನೂರೊಂದು ಚೌಪದಿಗಳ 'ಅಪ್ರಮೇಯ ವಾಣಿ' ಕೃತಿಯನ್ನು ಶ್ರೀ ಕೆ.ಸಿ. ಶಿವಪ್ಪನವರು ಬಿಡುಗಡೆ ಮಾಡಿದರು. ವಿಜಯಪುರ ಜ್ಞಾನಯೋಗಾಶ್ರಮದ ಶ್ರೀ ಸಿದ್ಧೇಶ್ವರ ಮಹಾಸ್ವಾಮಿಗಳು ಹಾಗೂ ಡಾ. ಮಹದೇವಪ್ಪನವರ ಕುಟುಂಬವರ್ಗದವರಿದ್ದಾರೆ (14.3.2021)



ಮೈಸೂರಿನಲ್ಲಿ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಕುನ್ನಾಳು ಬಸವಲಿಂಗೇಗೌಡರ ದತ್ತಿ ವತಿಯಿಂದ ಗಾನಯೋಗಿ ಪಂ. ಪಂಚಾಕ್ಷರಿ ಗವಾಯಿಗಳ ಸ್ಮರಣಾರ್ಥ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಆಯೋಜಿಸಿದ್ದ 'ವಚನ ಸಂಗೀತೋತ್ಸವ'ವನ್ನು ಖ್ಯಾತ ಹಿಂದೂಸ್ತಾನಿ ಗಾಯಕರಾದ ಪಂ. ಇಂದೂಧರ ನಿರೋಡಿಯವರು ಜ್ಯೋತಿ ಬೆಳಗಿಸಿ ಉದ್ಘಾಟಿಸುತ್ತಿರುವುದು. ಶ್ರೀ ಎನ್.ಜಿ. ಗಿರೀಶ್, ಶ್ರೀ ಟಿ.ಎಸ್. ಕುಮಾರಸ್ವಾಮಿ, ಶ್ರೀ ಮ.ಗು. ಸದಾನಂದಯ್ಯ, ಶ್ರೀಮತಿ ದಾಕ್ಷಾಯಿಣಿ ಸೋಮಶೇಖರಪ್ಪ ಹಾಗೂ ಶ್ರೀ ಶಿವಶಂಕರಸ್ವಾಮಿಯವರುಗಳಿದ್ದಾರೆ (14.3.2021)




ಚಾಮರಾಜನಗರದ ಡಾ. ಬಿ.ಆರ್. ಅಂಬೇಡ್ಕರ್ ಸ್ನಾತಕೋತ್ತರ ಅಧ್ಯಯನ ಕೇಂದ್ರದಲ್ಲಿ ಆಯೋಜಿಸಿದ್ದ 'ಕತ್ತಲ ರಾಜ್ಯದ ಜ್ಯೋತಿಗಳು ಮಲೆ ಮಹದೇಶ್ವರ ಮತ್ತು ಮಂಟೇಸ್ವಾಮಿ ಸಂಸ್ಕೃತಿ ಉತ್ಸವ' ಕಾರ್ಯಕ್ರಮವನ್ನು ಪರಮಪೂಜ್ಯ ಜಗದ್ಗುರುಗಳವರು ಹಾಗೂ ಕವಿಗಳಾದ ಡಾ. ಸಿದ್ಧಲಿಂಗಯ್ಯನವರು ಜ್ಯೋತಿ ಬೆಳಗಿಸಿ ಉದ್ಘಾಟಿಸುತ್ತಿರುವುದು. ಶ್ರೀ ಬಿ.ಕೆ. ರವಿಕುಮಾರ್, ಡಾ. ಹನೂರು ಕೃಷ್ಣಮೂರ್ತಿ, ಜಿಲ್ಲಾಧಿಕಾರಿಗಳಾದ ಡಾ. ಎಂ.ಆರ್. ರವಿ, ಡಾ. ಶಿವಬಸವಯ್ಯ, ಶ್ರೀ ಜೋಗಿಲ ಸಿದ್ಧರಾಜು, ಶ್ರೀ ಸಿ.ಎಂ. ನರಸಿಂಹಮೂರ್ತಿ, ಮೊದಲಾದವರಿದ್ದಾರೆ. (17.3.2021)




ಮೈಸೂರು ಶ್ರೀ ಸುತ್ತೂರು ಶಾಖಾಮಠದಲ್ಲಿ ಪರಮಪೂಜ್ಯ ಜಗದ್ಗುರುಗಳವರ ಸಾನ್ನಿಧ್ಯದಲ್ಲಿ ಜೆಎಸ್‌ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ವಿಶ್ವವಿದ್ಯಾನಿಲಯ ಆವರಣದಲ್ಲಿ ಸೆಂಟರ್ ಆಫ್ ಎಕ್ಸ್‌ಲೆನ್ಸ್‌ನ್ನು ಸ್ಥಾಪಿಸಲು ಭಾರತೀಯ ರಬ್ಬರ್ ಸಂಸ್ಥೆಯೊಂದಿಗೆ ಒಡಂಬಡಿಕೆ ಮಾಡಿಕೊಂಡು ಎಂಓಯು ಅನ್ನು ಐಆರ್‌ಐನ ಮೈಸೂರಿನ ಆಡಳಿತ ಸಮಿತಿಯ ಅಧ್ಯಕ್ಷರಾದ ಡಾ. ಆರ್. ಮುಖ್ಯೋಪಾಧ್ಯಾಯ ಹಾಗೂ ಡಾ. ಸಿ.ಜಿ. ಬೆಟಸೂರಮಠರವರು ವಿನಿಮಯ ಮಾಡಿಕೊಂಡರು. ಪ್ರೊ. ಎಸ್.ಬಿ. ಕಿವಡೆ, ಡಾ. ರಾಜಗೋಪಾಲಯ್ಯ, ಶ್ರೀ ಈಶ್ವರ ರಾವ್, ಶ್ರೀ ವಾಸುದೇವರಾವ್, ಡಾ. ಎಸ್.ಎ. ಧನರಾಜ್, ಪ್ರೊ. ಸಿದ್ದರಾಮಯ್ಯ, ಪ್ರೊ. ಎಂ.ಹೆಚ್. ಧನಂಜಯ, ಶ್ರೀ ಎಸ್. ಮಲ್ಲಿಕಾರ್ಜುನಯ್ಯ ಮತ್ತು ಡಾ. ಬಿ. ಸುರೇಶ್‌ರವರುಗಳಿದ್ದಾರೆ (18.3.2021)



ತುಮಕೂರು ಜಿಲ್ಲೆ ಕುಣಿಗಲ್ಲು ತಾಲ್ಲೂಕಿನ ಹುಲಿಯೂರುದುರ್ಗದ ಶ್ರೀ ಮಲ್ಲೇಶ್ವರ ಸ್ವಾಮಿ ದೇವಸ್ಥಾನದಲ್ಲಿ ಶ್ರೀ ಮಲ್ಲೇಶ್ವರ ಭವನವನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಶಾಸಕರಾದ ಡಾ. ಹೆಚ್.ವಿ. ರಂಗನಾಥ್‌ರವರು ಉದ್ಘಾಟಿಸುತ್ತಿರುವುದು. ಚಿತ್ರದಲ್ಲಿ ಗಣ್ಯರು ಹಾಗೂ ಗ್ರಾಮಸ್ಥರುಗಳಿದ್ದಾರೆ (20.3.2021)



ಮೈಸೂರು ಶ್ರೀ ಸುತ್ತೂರು ಶಾಖಾಮಠಕ್ಕೆ ಭೇಟಿ ನೀಡಿದ ಈಶ ಫೌಂಡೇಷನ್ ಸಂಸ್ಥಾಪಕರಾದ ಸದ್ಗುರು ಶ್ರೀ ಜಗ್ಗಿ ವಾಸುದೇವ್‌ರವರನ್ನು ಪರಮಪೂಜ್ಯ ಜಗದ್ಗುರುಗಳು ಸನ್ಮಾನಿಸಿ ಗೌರವಿಸಿದರು. ಶ್ರೀ ಸಿದ್ಧಗಂಗಾ ಮಠದ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳಿದ್ದಾರೆ (25.3.2021)



ಮೈಸೂರಿನ ಮಹಾಬೋಧಿ ಶಾಲೆಯಲ್ಲಿ ಆಯೋಜಿಸಿದ್ದ ಬುದ್ಧ ರಕ್ಷಿತ ಭಂತೇಜಿ ಜನ್ಮಶತಮಾನೋತ್ಸವ, ಮಹಾಬೋಧಿ ಮೈಸೂರು ಶಾಖೆಯ ಸುವರ್ಣ ಮಹೋತ್ಸವ ಹಾಗೂ ಕಾರ್ಲ್ ವಿದ್ಯಾರ್ಥಿನಿಲಯದ 20ನೇ ವಾರ್ಷಿಕೋತ್ಸವವನ್ನು ಪರಮಪೂಜ್ಯ ಜಗದ್ಗುರುಗಳು ಹಾಗೂ ಮಹಾಬೋಧಿ ಸೊಸೈಟಿಯ ಪ್ರಧಾನ ಕಾರ್ಯದರ್ಶಿಗಳಾದ ವೆನ್ ಬಿಕ್ಕು ಆನಂದ ಭಂತೇಜಿರವರು ಜ್ಯೋತಿ ಬೆಳಗಿಸಿ ಉದ್ಘಾಟಿಸುತ್ತಿರುವುದು. ಡಾ. ಬಿ.ವಿ. ರಾಜಾರಾಮ್, ಶ್ರೀ ಎಲ್. ನಾಗೇಂದ್ರ, ಡಾ. ಎ.ಎನ್. ಪ್ರಕಾಶ್‌ಗೌಡ, ವೆನ್ ಬಿಕ್ಕು ಕಸ್ಸಪಾ ಮಹಾಥೇರಾ, ವೆನ್ ಡಾ. ಧಮ್ಮಜ್ಯೋತಿ ಮಹಾಥೇರಾರವರುಗಳಿದ್ದಾರೆ (2.4.2021)



ಕರ್ನಾಟಕ ಸರ್ಕಾರದ ಮುಖ್ಯ ಕಾರ್ಯದರ್ಶಿಗಳಾದ ಶ್ರೀ ಪಿ. ರವಿಕುಮಾರ್‌ರವರು ಬೆಂಗಳೂರಿನಲ್ಲಿರುವ ಸುತ್ತೂರು ಸದನದಲ್ಲಿ ಪರಮಪೂಜ್ಯ ಜಗದ್ಗುರುಗಳವರನ್ನು ಭೇಟಿಯಾಗಿ ದರ್ಶನಾಶೀರ್ವಾದ ಪಡೆದ ಸಂದರ್ಭದಲ್ಲಿ ಪೂಜ್ಯರು ಸನ್ಮಾನಿಸಿ ಆಶೀರ್ವದಿಸುತ್ತಿರುವುದು. ಡಾ. ಸಿ.ಜಿ. ಬೆಟಸೂರಮಠ, ಶ್ರೀ ಎಸ್.ಪಿ. ಷಡಕ್ಷರಿಸ್ವಾಮಿ, ಶ್ರೀ ಎಂ.ಬಿ. ದ್ಯಾಬೇರಿಯವರುಗಳಿದ್ದಾರೆ (5.4.2021)



ಕರ್ನಾಟಕ ಲೋಕಸೇವಾ ಆಯೋಗದ ನೂತನ ಅಧ್ಯಕ್ಷರಾದ ಶ್ರೀ ಶಿವಶಂಕರ್ ಸಾಹುಕಾರ್‌ರವರು ಕುಟುಂಬದ ಸದಸ್ಯರೊಂದಿಗೆ ಬೆಂಗಳೂರಿನಲ್ಲಿರುವ ಸುತ್ತೂರು ಸದನದಲ್ಲಿ ಪರಮಪೂಜ್ಯ ಜಗದ್ಗುರುಗಳವರನ್ನು ಭೇಟಿಯಾಗಿ ದರ್ಶನಾಶೀರ್ವಾದ ಪಡೆದ ಸಂದರ್ಭದಲ್ಲಿ ಪೂಜ್ಯರು ಸನ್ಮಾನಿಸಿ ಆಶೀರ್ವದಿಸುತ್ತಿರುವುದು. ಅವರ ಕುಟುಂಬದ ಸದಸ್ಯರು, ಡಾ. ಸಿ.ಜಿ. ಬೆಟಸೂರಮಠ, ಶ್ರೀ ಎಂ.ಬಿ. ದ್ಯಾಬೇರಿ, ಶ್ರೀ ಎಸ್.ಪಿ. ಷಡಕ್ಷರಿಸ್ವಾಮಿಯವರುಗಳಿದ್ದಾರೆ (5.4.2021)




ಮೈಸೂರಿನ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ ಹಾಗೂ ಜೆಎಸ್‌ಎಸ್ ಮಹಾವಿದ್ಯಾಪೀಠದ ವತಿಯಿಂದ ಪರಮಪೂಜ್ಯ ಜಗದ್ಗುರುಗಳು ಹಾಗೂ ಶ್ರೀ ಸಿದ್ಧೇಶ್ವರ ಮಹಾಸ್ವಾಮಿಗಳವರ ಸಾನ್ನಿಧ್ಯದಲ್ಲಿ ಸಚಿವರಾದ ಶ್ರೀ ಅರವಿಂದ ಲಿಂಬಾವಳಿಯವರು ಪ್ರಶಸ್ತಿಗಳ ಪ್ರದಾನ ಮಾಡಿದರು. ಡಾ. ನಂದೀಶ್ ಹಂಚೆ, ಶ್ರೀ ಎಲ್. ನಾಗೇಂದ್ರ, ಡಾ. ಗೊ.ರು. ಚನ್ನಬಸಪ್ಪ, ಡಾ. ಬಿ.ವಿ ವಸಂತಕುಮಾರ್, ಪ್ರಶಸ್ತಿ ಪುರಸ್ಕೃತರಾದ ಶ್ರೀ ಮಹಾಂತಪ್ಪ ನಂದೂರ, ಶ್ರೀಮತಿ ರಾಧ ಮಲ್ಲಪ್ಪ, ಶ್ರೀ ಈಶ್ವರ ಜೋಶಿ, ಶ್ರೀ ಕೆ.ಎಸ್. ಮಹಾದೇವಸ್ವಾಮಿಯವರುಗಳಿದ್ದಾರೆ (10.4.2021)



ಬೆಂಗಳೂರಿನಲ್ಲಿರುವ ಸುತ್ತೂರು ಸದನದಲ್ಲಿ ಪರಮಪೂಜ್ಯ ಜಗದ್ಗುರುಗಳವರನ್ನು ಬೆಂಗಳೂರು ಕೇಂದ್ರ ವಿಶ್ವವಿದ್ಯಾನಿಲಯದ ನೂತನ ಕುಲಪತಿಗಳಾದ ಪ್ರೊ. ಲಿಂಗರಾಜ ಗಾಂಧಿ ಮತ್ತು ಶ್ರೀಮತಿ ಸೌಮ್ಯ ಗಾಂಧಿಯವರು ಭೇಟಿಮಾಡಿದ ಸಂದರ್ಭದಲ್ಲಿ ಪೂಜ್ಯರು ಸನ್ಮಾನಿಸಿ ಆಶೀರ್ವದಿಸಿದರು (16.4.2021)




ಮೈಸೂರಿನ ಜೆಎಸ್ಎಸ್ ಮಹಿಳಾ ಕಾಲೇಜಿನಲ್ಲಿ ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ ಹಾಗೂ ಜೆಎಸ್ಎಸ್ ಮಹಾವಿದ್ಯಾಪೀಠದ ವತಿಯಿಂದ ಪರಮಪೂಜ್ಯ ಜಗದ್ಗುರುಗಳು ಹಾಗೂ ಶ್ರೀ ಸಿದ್ಧೇಶ್ವರ ಮಹಾಸ್ವಾಮಿಗಳವರ ಸಾನ್ನಿಧ್ಯದಲ್ಲಿ ಸಚಿವರಾದ ಶ್ರೀ ಅರವಿಂದ ಲಿಂಬಾವಳಿಯವರು ಕೃತಿಗಳನ್ನು ಲೋಕಾರ್ಪಣೆ ಮಾಡಿದರು. ಡಾ. ನಂದೀಶ್ ಹಂಚೆ, ಶ್ರೀ ಎಲ್. ನಾಗೇಂದ್ರ, ಡಾ. ಬಿ.ವಿ ವಸಂತಕುಮಾರ್, ಡಾ. ಗೊ.ರು. ಚನ್ನಬಸಪ್ಪ, ಶ್ರೀ ಮಹಾಂತಪ್ಪ ನಂದೂರ ಮತ್ತು ಶ್ರೀಮತಿ ರಾಧ ಮಲ್ಲಪ್ಪರವರುಗಳಿದ್ದಾರೆ (10.4.2021)



ಮೈಸೂರು ಶ್ರೀ ಸುತ್ತೂರು ಶಾಖಾಮಠದಲ್ಲಿ ಪರಮಪೂಜ್ಯ ಜಗದ್ಗುರುಗಳವರ ಸಾನ್ನಿಧ್ಯದಲ್ಲಿ ಏರ್ಪಡಿಸಿದ್ದ ಅಭಿನಂದನಾ ಕಾರ್ಯಕ್ರಮದಲ್ಲಿ ಧರ್ಮಸ್ಥಳದ ಧರ್ಮಾಧಿಕಾರಿಗಳಾದ ರಾಜರ್ಷಿ ಡಾ. ಡಿ. ವೀರೇಂದ್ರ ಹೆಗ್ಗಡೆಯವರನ್ನು ಗೌರವಿಸಲಾಯಿತು. ಮಹಾಪೌರರಾದ ಶ್ರೀಮತಿ ರುಕ್ಮಿಣಿ ಮಾದೇಗೌಡ, ಜಿಲ್ಲಾ ಪಂಚಾಯತಿ ಸದಸ್ಯರಾದ ಶ್ರೀ ಮಾದೇಗೌಡ, ಮೊದಲಾದವರಿದ್ದಾರೆ (3.3.2021)



ಭಾರತದ ಸರ್ವೋಚ್ಚ ನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿಗಳಾದ ಗೌ.ನ್ಯಾ. ಶ್ರೀ ಶರತ್ ಅರವಿಂದ್ ಬೊಬ್ಡೆಯವರು ಮೈಸೂರು ಶ್ರೀ ಸುತ್ತೂರು ಶಾಖಾಮಠಕ್ಕೆ ಭೇಟಿ ನೀಡಿದಾಗ ಪರಮಪೂಜ್ಯ ಜಗದ್ಗುರುಗಳವರೊಂದಿಗೆ ಸಮಾಲೋಚಿಸುತ್ತಿರುವುದು (20.3.2021)

Registered with the Registrar of Newspapers in India Under No. 50622/86
'Prasada' Bi-Monthly, Vol. 36 Issue No. 2, March-April 2021




ಪರಮಪೂಜ್ಯ ಜಗದ್ಗುರುಗಳ ದಿವ್ಯಸಾನ್ನಿಧ್ಯದಲ್ಲಿ ನಡೆದ ಮೈಸೂರಿನ ಜೆಎಸ್‌ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ವಿಶ್ವವಿದ್ಯಾನಿಲಯದ ತೃತೀಯ ಘಟಿಕೋತ್ಸವದಲ್ಲಿ ಪ್ರೊ. ಪಿ. ನಾಗೇಶ್, ಡಾ. ಎಸ್.ಎ. ಧನರಾಜ್, ಡಾ. ಬಿ. ಸುರೇಶ್, ಡಾ. ಸಿ.ಜಿ. ಬೆಟಸೂರಮಠ, ರಾಷ್ಟ್ರೀಯ ಮಾನ್ಯತಾ ಮಂಡಳಿ ಅಧ್ಯಕ್ಷರಾದ ಡಾ. ಕೆ.ಕೆ. ಅಗರ್‌ವಾಲ್, ಪ್ರೊ. ಸಿದ್ದರಾಮಯ್ಯ, ಡಾ. ಎ.ಎನ್. ಸಂತೋಷ್‌ಕುಮಾರ್, ಪ್ರೊ. ಎಸ್.ಪಿ. ಕಿವಡೆಯವರುಗಳೊಂದಿಗೆ ಪ್ರಶಸ್ತಿ ಪುರಸ್ಕೃತ ಪದವೀಧರರು (9.4.2021)